ಅಪರಂಜಿ

ತಿಳಿನಗೆಯ ಕಾರಂಜಿ



ಮೇ - 2010

ಉಚಿತ ಕನ್ನಡ ಕಲಿಕೆ





'ಇಂಗ್ಲಿಷ್ ಕಲಿಕೆ' ಅಂತ ಬೋರ್ಡ್ ಹಾಕಿದ್ರೆ
ಜನರು ಓಡೋಡಿ ಬರ್ತಿದ್ರು... ಸಾರ್!?

ಬಿಡಿ ಪ್ರತಿ: ರೂ. 10.00

ಅಪರಂಜಿ



ತಿಳಿನಗೆಯ ಕಾರಂಜಿ

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್



ಸಂಪುಟ 27
ಸಂಚಿಕೆ - 8
ಮೇ - 2010


ಈ ಸಂಚಿಕೆಯಲ್ಲಿ.....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇತನ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: brmurthy@dataone.in

ಅಪರಂಜಿ ಕಿಡಿ

● ಪ್ರಕಾಶ್



ಸಾನಿಯಾ ವಿವಾಹ - ಸುದ್ದಿ

● ಟೆನಿಸ್ ಆಡುವ ಕೈ ತೊಟ್ಟಿಲು ತೂಗೀತೇ?!

★★★

ಪೋಪ್ ಬ್ರಿಟನ್ ಭೇಟಿಗೆ ವಿರೋಧ – ಪತ್ರಿಕೆ

● ಪಾಪ !!

★★★

ಇಂದು ಚೀನಾಕ್ಕೆ ಕೃಷ್ಣ ಭೇಟಿ – ಸುದ್ದಿ

● 'ಸಂಧಾನ' ಸಫಲವಾಗಲಿ!!

★★★

ಮುತಾಲಿಕ್ ಅವರದು ಬರೀ ರಾಗ, ಅನುರಾಗದ ಬಗ್ಗೆ ಅವರಿಗೇನು ಗೊತ್ತು ಅಂತ ಅಪರಂಜಿ ನಕ್ಕಳಂತೆ !!

★★★

ನ್ಯಾಯಮೂರ್ತಿ ದಿನಕರನ್‌ಗೆ ರಜೆ – ಸುದ್ದಿ

● ಕೊನೆಗೂ ಸೂರ್ಯ ಮುಳುಗಿದ !!

★★★

ಸಾನಿಯಾ – ಶೋಯೆಬ್ ವಾರ್ತೆಗಳನ್ನ ಮುಖಪುಟದಲ್ಲೋ ಅಥವಾ ಕ್ರೀಡಾ ಪುಟದಲ್ಲೋ ಅಂತ ದಿನಪತ್ರಿಕೆ ಸಂಪಾದಕರು ಚಕಿತರಾದರಂತೆ !!

★★★

'ಸ್ವಾಮಿ ನಿತ್ಯಾನಂದ ಹಗರಣ' – ಸುದ್ದಿ

● ಈಗ SIN SEER ಅನ್ನಬಹುದೆ ?

★★★

'BISLERI' ಎಂಬ ಹೆಸರಿಗೂ, ಬಿಸಿಲೇರುವುದಕ್ಕೂ ಸಂಬಂಧವಿದೆಯೆ?!?

★★★

ಸಂಗೀತ ವಿಶ್ವವಿದ್ಯಾಲಯಕ್ಕೆ ಮೈಸೂರು ಆಯ್ಕೆ – ಪತ್ರಿಕೆ

● ಜೈ ಮಹಿಷಾಸುರ ಮರ್ದಿನಿ..... !!!

★★★

“ನಮ್ಮ ನಿಮ್ಮಲ್ಲಿ”

‘ಸೃಜನಶೀಲತೇನ ಕಲಿಸುಕ್ಕಾಗುತ್ತೇನ್ರಿ, ನಿಮಗೆಲ್ಲೋ ಹುಚ್ಚು’ ಎಂದರು ಪ್ರೊಫೆಸರ್ ರಾವ್. ಮಕ್ಕಳಿಗೋಸ್ಕರ ವೈಜ್ಞಾನಿಕ ಆಟಿಕೆಗಳನ್ನ ನಿರ್ಮಿಸಿ ಅವುಗಳ ಒಂದು ಪ್ರದರ್ಶನದ ಉದ್ಘಾಟನೆಗೆ ಖ್ಯಾತ ವಿಜ್ಞಾನಿ ಪ್ರೊ. ಸಿ.ಎನ್.ಆರ್. ರಾವ್ ಅವರನ್ನ ನಾನು ತೊಡಗಿಸಿಕೊಂಡಿರುವ ಸಾರ್ವಜನಿಕ ಸೇವಾ ಸಂಸ್ಥೆಯೊಂದರ ವತಿಯಿಂದ ಕರೆಸಿದ್ದೆವು. ನಮ್ಮ ಮಾನ್ಯ ಅತಿಥಿಗಳಿಗೆ ಅಲ್ಲಿ ಪ್ರದರ್ಶನಕ್ಕಿಟ್ಟಿದ್ದ ಆಟಿಕೆಗಳನ್ನು ವಿವರಿಸುತ್ತಾ, ‘ನಮ್ಮ ಶಾಲೆಗಳಲ್ಲಿ ವಿಜ್ಞಾನ ಕಲಿಕೆ ಬರೀ ಬಾಯಿಪಾಠ ಆಗಿಬಿಡ್ತಾ ಇದೆ ಸಾರ್. ಇನ್ನೊವೇಷನ್, ಸೃಜನಶೀಲತೆ ಇವನ್ನೆಲ್ಲಾ ಅಭಿವೃದ್ಧಿ ಪಡಿಸಿಕೊಳ್ಳೋಕ್ಕೆ ಬೇಕಾದ ವಾತಾವರಣ ನಮ್ಮ ಬಹುತೇಕ ಶಾಲೆಗಳಲ್ಲಿ ಇರೋಹಾಗೆ ಕಾಣೆ. ಇಂತಹ ಪರಿಸ್ಥಿತೀನ ಬದಲಿಸೋದಕ್ಕೆ ಅಂತ ನಮ್ಮ ಈ ಪ್ರಯತ್ನ. ಆಟಿಕೆಗಳಾಗಿರೋದರಿಂದ ಮೊಟ್ಟಮೊದಲಿಗೆ ಇವು ತಾವಾಗಿಯೇ ಮಕ್ಕಳಲ್ಲಿ ಕುತೂಹಲ ಮೂಡಿಸುತ್ವೆ. ಆಮೇಲೆ ಅವುಗಳ ಹಿಂದಿನ ವೈಜ್ಞಾನಿಕ ತತ್ವವನ್ನು ಅರಿಯಲು ಆಸಕ್ತಿ ತಾನಾಗಿಯೇ ಹುಟ್ಟುತ್ತೆ’ ಅಂತ ನಾನು ವಿವರಿಸಿದಾಗ ಅವರ ಪ್ರತಿಕ್ರಿಯೆ ಹಾಗಿತ್ತು. ‘ಯಾಕೆ ಸಾರ್ ಹಾಗಂತೀರಾ? ಈ ಆಟಿಕೆಗಳ ಮೂಲಕ ವಿಜ್ಞಾನ ಕಲಿಸುವಾಗ ಮಕ್ಕಳ ಮುಖದಲ್ಲಿ ಕಂಡುಬರುವ ಉತ್ಸಾಹ ಸಂತಸಗಳನ್ನ ಕಳೆದ ಹಲವು ವರ್ಷಗಳಿಂದ ನಾನು ನೋಡ್ತಾನೇ ಇದೀನಿ. ಅದರಿಂದ ಈ ಮಕ್ಕಳು ಸೃಜನಶೀಲರಾಗುಲ್ಲ ಅಂತೀರಾ?’ ಅಂತ ನಾನು ಕೇಳಿದೆ. ಈ ನಿಟ್ಟಿನಲ್ಲಿನ ನಮ್ಮ ಪ್ರಾಮಾಣಿಕ ಪ್ರಯತ್ನಾನ ಹೀಗೆ ಒಂದೇ ಏಟಿಗೆ ಹೊಡೆದುರುಳಿಸಿದ್ದನ್ನು ನೋಡಿ ನನಗೆ ಸ್ವಲ್ಪ ಷಾಕ್ ಆಯಿತು ಅನ್ನಬಹುದು. ನನ್ನ ಪೆಚ್ಚು ಮುಖ ನೋಡಿ ಆ ಸಜ್ಜನರು ‘ಇಲ್ಲಿ ಬನ್ನಿ. ಸ್ವಲ್ಪ ಕೂತ್ಕೊಂಡು ಮಾತಾಡೋಣ’ ಅಂತ ಹೇಳಿದ ನಂತರ ನಾವೆಲ್ಲಾ ಹತ್ತಿರದಲ್ಲೇ ಇದ್ದ ಕುರ್ಚಿಗಳನ್ನ ಎಳೆದುಕೊಂಡು ಅವರ ಸುತ್ತ ಕುಳಿತೆವು.

‘ಜಗದೀಶ್ ಚಂದ್ರ ಬೋಸ್ ಅಂತ ನಮ್ಮ ನಾಡಿನ ಖ್ಯಾತ ವಿಜ್ಞಾನಿ ಹೆಸರು ನೀವೆಲ್ಲಾ ಖಂಡಿತಾ ಕೇಳೇ ಇರ್ತೀರಾ. ನಮ್ಮ ಮೊಟ್ಟಮೊದಲ ಸ್ವಾತಂತ್ರ್ಯ ಸಂಗ್ರಾಮ ನಡೆದ ಮಾರನೆಯ ವರ್ಷ ಅಂದರೆ 1858ರಲ್ಲಿ ಅವರು ಹುಟ್ಟಿದ್ದು. ಉನ್ನತ ಶಿಕ್ಷಣಕ್ಕೆ ಇಂಗ್ಲೆಂಡಿಗೆ ಹೋಗಿ ಕೇಂಬ್ರಿಡ್ಜಿನಲ್ಲಿ ಪ್ರೊಫೆಸರ್ ರ್‍ಯಾಲೆ ಅವರ ಬಳಿ ನ್ಯಾಚುರಲ್ ಸಯನ್ಸ್ ವ್ಯಾಸಂಗಕ್ಕೆ ತೊಡಗಿಕೊಂಡರು. ಅಲ್ಲಿ ಪದವೀಧರರಾಗಿ ಕೊಲ್ಕೊತ್ತಾಗೆ ಮರಳಿ ಬಂದದ್ದು 1884 ರಲ್ಲಿ. ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಅವರಿಗೆ ಫಿಸಿಕ್ಸ್ ಪ್ರೊಫೆಸರ್ ಹುದ್ದೆ ಸಿಕ್ಕಿತು. ಅವರಿದ್ದ ಕಾಲೇಜಿನಲ್ಲಿ ಹೇಳಿಕೊಳ್ಳುವಂತಹ ವೈಜ್ಞಾನಿಕ ಉಪಕರಣಗಳೇನೂ ಇರಲಿಲ್ಲ. ಆದರೆ ಬಹು ಗಟ್ಟಿಗರಾದ ಶಿಷ್ಯಂದಿರು ಇದ್ದರು ಅಂತಿಟ್ಕೊಳ್ಳಿ. ಮೇಘನಾದ ಸಹಾ, ಎಸ್.ಎನ್. ಬೋಸ್ ಮುಂತಾದ ಅತಿರಥ ಮಹಾರಥರೆಲ್ಲಾ ಇವರ ಶಿಷ್ಯರೇ. ಕಾಮನ್ ರೂಮಿನ ಪಕ್ಕ ಇದ್ದ ಒಂದು ಸಣ್ಣ ಕೊಠಡಿ ಅವರ ಪ್ರಯೋಗಾಲಯ. ಅದರಲ್ಲಿ ಕುಳಿತು ಕೇವಲ ನಾಲ್ಕು ವರ್ಷಗಳಲ್ಲಿ ಅವರು ಕಂಡುಹಿಡಿದ ಹೊಸ ಅನ್ವೇಷಣೆಗಳನ್ನ ಪಟ್ಟಿ ಹಾಕಿದರೆ ನಿಜಕ್ಕೂ ದಂಗು ಬಡಿಯುತ್ತೆ.

ರೇಡಿಯೋ ಅಲೆಗಳು, ಸೆಮಿ ಕಂಡಕ್ಟರ್‌ಗಳು, ಒಂದೇ ಎರಡೇ. ರೇಡಿಯೋ ಅಲೆಗಳ ಮೂಲಕ ಮಾಹಿತಿ ಪ್ರಸಾರವನ್ನು ಪ್ರಯೋಗದ ಮೂಲಕ ತೋರಿಸಲು ಕೊಲ್ಕೊತ್ತಾದ ಪುರಸಭಾಭವನದಿಂದ ಘಂಟಾನಾದವನ್ನು ದೂರದಲ್ಲಿದ್ದ ಮತ್ತೊಂದು ಕಟ್ಟಡಕ್ಕೆ ರವಾನಿಸಿದ್ದು ಬೋಸರ ಹೆಗ್ಗಳಿಕೆ. ಇದು ಮಾರ್ಕೋನಿ ರೇಡಿಯೋ ಅಲೆಗಳ ಪ್ರಯೋಗ ನಡೆಸುವುದಕ್ಕೆ ಎಂಟು ವರ್ಷ ಮುಂಚೆ ನಮ್ಮ ನಾಡಿನಲ್ಲೇ ನಡೆದದ್ದು.

ಅತ್ಯಂತ ಸೃಜನ ಶೀಲ ವ್ಯಕ್ತಿ ಅಂತ ಇನ್ನೊಬ್ಬರನ್ನು ಹೆಸರಿಸಬೇಕಾದರೆ ನಮ್ಮ ಖ್ಯಾತ ಗಣಿತಜ್ಞ ಶ್ರೀನಿವಾಸ ರಾಮಾನುಜನ್ ನೆನಪಿಗೆ ಬರುತ್ತಾರೆ. ತಮ್ಮ ಗಣಿತದ ಕೆಲಸ ಮಾಡಲು ಅವರಿಗೆ ಯಾವ ವಿಧವಾದ ಸವಲತ್ತುಗಳೂ ಇರಲಿಲ್ಲ. ಮದ್ರಾಸಿನ (ಇಂದಿನ ಚೆನ್ನೈ) ಪೋರ್ಟ್ ಟ್ರಸ್ಟಿನಲ್ಲಿ ಗುಮಾಸ್ತೆಯಾಗಿದ್ದ ರಾಮಾನುಜನ್‌ಗೆ ಇಂಗ್ಲೆಂಡಿಗೆ ಹೋಗುವ ಅವಕಾಶ ಸಿಗುವವರೆಗೆ ಇಲ್ಲಿನ ಪರಿಸರದಲ್ಲಿಯೇ ತಮ್ಮ ಗಣಿತದ ಸಂಶೋಧನೆಗಳನ್ನು ನಡೆಸಬೇಕಾಗಿತ್ತು. ಅಂತಹ ಪರಿಸರದಲ್ಲೂ ಎಷ್ಟು ಉತ್ಕೃಷ್ಟ ಕೆಲಸ ಮಾಡಿದ್ದರೆಂದರೆ ಇಂಗ್ಲೆಂಡಿನ ಗಣಿತಜ್ಞ ಹಾರ್ಡಿ ಅವರನ್ನು ತಮ್ಮ ನಾಡಿಗೆ ಕರೆಸಿಕೊಳ್ಳುವ ನಿರ್ಧಾರ ಮಾಡಿದರು.

'ನನ್ನ ಮನಸ್ಸಿಗೆ ಬರುವ ಇನ್ನೊಬ್ಬ ಮೇಧಾವಿ ಅಂದರೆ ಮೈಖೇಲ್ ಫ್ಯಾರಡೇ. ಅವನು ಓದಲು ಬರೆಯಲು ಕಲಿತದ್ದು ಕೇವಲ ಮೂರನೆಯ ಕ್ಲಾಸಿನ ವರೆಗೆ. ಆದರೂ ವಿದ್ಯುತ್ ಕ್ಷೇತ್ರದಲ್ಲಿ ಅವನು ಮಾಡಿರುವ ಸಂಶೋಧನೆಗಳ ಪಟ್ಟಿ ಮಾಡುತ್ತಾ ಹೋದರೆ ಅದೇ ಒಂದು ಪುಸ್ತಕವಾದೀತು. ಕೇವಲ ಬುಕ್‌ಬೈಂಡರ್ ಅಗಿ ಬೈಂಡಿಂಗ್‌ಗಾಗಿ ಬಂದ ವೈಜ್ಞಾನಿಕ ಪುಸ್ತಕಗಳನ್ನು ಕಳ್ಳತನದಲ್ಲಿ ಓದಿ ಜ್ಞಾನ ಸಂಪಾದಿಸಿದ ಮಹಾನುಭಾವ ಫ್ಯಾರಡೇ.

ಯೋಚನೆ ಮಾಡಿದ್ರೆ ಸೃಜನಶೀಲತೆಯ ಸೆಲೆ ಬೇರೆ ಎಲ್ಲೋ ಇರುತ್ತೆ ಅಂತ ಅನ್ನಿಸುತ್ತೆ ನನಗೆ. ನಾನು ಹೀಗೆ ಹೇಳಿದೆ ಅಂತ ನೀವೇನೂ ನಿರಾಶರಾಗಬೇಡಿ. ನೀವು ಮಾಡೋ ಕೆಲಸ ಚೊಕ್ಕವಾಗಿ ಶ್ರದ್ಧೆಯಿಂದ ಮಾಡ್ಕೊಂಡು ಹೋಗಿ. ಬಹುಶಃ ಆ ಶ್ರದ್ಧೆಯ ಪ್ರಭಾವದಿಂದ ಮಕ್ಕಳು ಸೃಜನಶೀಲರಾಗಬಹುದು'

ಕೈ ತೋರಿಸಿ ಅವಲಕ್ಷಣ ಅನ್ನಿಸಿಕೊಳ್ಳೋದೇನೋ ಸರಿ. ಆದರೆ ಅನ್ನಿಸಿಕೊಳ್ಳೋವಾಗಲೇ ಒಂದಿಷ್ಟು ಹೊಸ ಸಂಗತಿಗಳನ್ನೂ ತಿಳಿಯೋ ಹಾಗಾಗಿದ್ದು ನಮ್ಮ ಪುಣ್ಯ ಅಂದುಕೊಂಡೆ.

- ಶಿವಕುಮಾರ್

ಅವರಿಗೆ ಅವರೇ ಹೆಚ್ಚು ಮಾಡಿಕೊಳ್ಳುತ್ತಾರೆ ಭತ್ಯ
ಬರ, ಪ್ರವಾಹ ಏನು ಬಂದರೂ ಸರಿ ಇದು ಸತ್ಯ
ಇವರು ರಾಜಕೀಯದ ಬಲು ಶ್ರೀಮಂತ ನೌಕರರು
ಅಲ್ಲೂ ನುಂಗಿ ಇಲ್ಲೂ ನುಂಗುವ ಧೀರರಿವರು

- ಬೇಲೂರು ರಾಮಮೂರ್ತಿ

ವಿ.ವಿ.ವಿ.ನ ವಿಜ್ಞಾನ ವಿನೋದಾವಳಿ

- ಪ್ರೊ. ಎಸ್.ವಿ.ಸುಬ್ರಮಣ್ಯಂ

ವಿಲ್ಲೂಪುರದ ವಿಜಯಸಾರಥಿಯ ಮಗ ವಿನೂತನ ನನ್ನ ಹೆಸರು. ನನಗೂ ವಿಜ್ಞಾನಕ್ಕೂ ವಿಶಿಷ್ಟವಾದ ನಂಟು. ಹಿಂದೊಮ್ಮೆ ಭೂಮಿ ತಿರುಗುವುದನ್ನು ಪರೀಕ್ಷಿಸಲು ಬಲೂನಿನಲ್ಲಿ ಆಗಸಕ್ಕೇರಿದ್ದನ್ನು ನಿಮಗೆ ತಿಳಿಸಿದ್ದ ನೆನಪು. ಸದಾ ಏನಾದರೊಂದು ಹೊಸ ಪ್ರಯೋಗವನ್ನು ಮಾಡುವುದೇ ನನ್ನ ಚಾಳಿ. ಒಂದಲ್ಲ ಒಂದು ದಿನ ನನಗೂ ನೊಬೇಲ್ ಪ್ರಶಸ್ತಿ ಸಿಗಬೇಕಲ್ಲಾ.

ನಮ್ಮ ಶಾಲಾ ಮಾಸ್ತರರು ಒಮ್ಮೆ ಬೆಳಕಿನ ಕಿರಣಗಳ ಗುಣ ಲಕ್ಷಣಗಳ ಬಗ್ಗೆ ವಿವರಣೆ ಕೊಡುತ್ತಿದ್ದರು. ಬೆಳಕು ನಮಗೆ ದೃಷ್ಟಿಕೊಡುವ ಸಾಧನ. ಬೆಳಕಿನಿಂದಲೇ ನಮಗೆ ಏನಾದರೂ ಕಾಣಿಸಬೇಕಾದರೆ. ಅದು ವಸ್ತುವಿನ ಮೇಲೆ ಬಿದ್ದಾಗ ಆ ವಸ್ತು ನಮ್ಮ ಕಣ್ಣಿಗೆ ಕಾಣುತ್ತದೆ. ಯಾಕೆ? ಬೆಳಕು ಅದರ ಮೇಲೆ ಬಿದ್ದು ಪ್ರತಿಫಲನ ಹೊಂದಿ ಆ ಕಿರಣಗಳು ನಮ್ಮ ಕಣ್ಣನ್ನು ಸೇರುವುದರಿಂದ. ಬೆಳಕು ಪ್ರತಿಫಲನ ಹೊಂದುವ ಬದಲು ಅದರ ಮೂಲಕ ತೂರಿಹೋದರೆ ಅದು ನಮ್ಮ ಕಣ್ಣಿಗೆ ಕಾಣುವುದೇ ಇಲ್ಲ. ಈ ರೀತಿ ತೂರಿ ಹೋಗಬೇಕಾದರೆ ಆ ವಸ್ತುವಿನ ವಕ್ರೀಭವನದ ಸೂಚ್ಯಂಕ ಗಾಳಿಯ ಸೂಚ್ಯಂಕಕ್ಕೆ ಸಮನಾಗಬೇಕು. ಹಾಗಾದಾಗ ವಸ್ತು ನಮ್ಮ ಕಣ್ಣಿಗೆ ಕಾಣದೇ ಅದು ಅದೃಶ್ಯವಾಗುತ್ತದೆ.

ಇದನ್ನೆಲ್ಲಾ ಸುದೀರ್ಘವಾಗಿ ಆಲೋಚಿಸಿದ ನಂತರ ನನ್ನ ಬಹುದಿನಗಳ ಬಯಕೆಯಾಗಿದ್ದ, ಅದೃಶ್ಯಮಾನವನಾಗುವ ಆಸೆಯನ್ನು ಈಡೇರಿಸಿಕೊಳ್ಳುವ ಮಾರ್ಗ ಹಠಾತ್ತನೆ ಹೊಳೆಯಿತು. ನನ್ನ ದೇಹದ ವಕ್ರೀಭವನ ಸೂಚ್ಯಂಕವನ್ನು ಗಾಳಿಯ ಸೂಚ್ಯಂಕಕ್ಕೆ ಸಮನಾಗುವಂತೆ ಮಾಡಿದರೆ ನನ್ನ ಮೂಲಕ ಬೆಳಕಿನ ಕಿರಣಗಳು ಹಾದುಹೋಗಿ ನಾನು ಯಾರ ಕಣ್ಣಿಗೂ ಕಾಣಿಸದಂತೆ ಆಗುತ್ತೇನೆ. ಈ ಆಲೋಚನೆ ಹೊಳೆದ ತಕ್ಷಣ ನನಗೆ ಬಹಳ ಆನಂದವಾಯಿತು. ಹಗಲೂ ರಾತ್ರಿ ಸಂಶೋಧನೆ ಮಾಡಿ ಒಂದು ದ್ರವ ತಯಾರಿಸಿದೆ. ಅದನ್ನು ಕುಡಿದರೆ. ನನ್ನ ದೇಹದ ವಕ್ರೀಭವನ ಸೂಚ್ಯಂಕ ಗಾಳಿಯ ಸೂಚ್ಯಂಕಕ್ಕೆ ಸಮನಾಗುತ್ತಿತ್ತು. ಒಂದು ಬೆಳಗ್ಗೆ ರಾಹುಕಾಲ ಮುಗಿಯುವುದನ್ನೇ ಕಾದು ಅದು ಮುಗಿದ ತಕ್ಷಣ ದ್ರವವನ್ನು ಗಟಗಟ ಕುಡಿದುಬಿಟ್ಟೆ. ದ್ರವವೇನೋ ಫಲಕಾರಿಯಾಯಿತು. ನನ್ನ ದೇಹದ ಯಾವ ಭಾಗವೂ ನನಗೆ ಕಾಣದಾಯಿತು. ದೇಹವಷ್ಟೇ ಅಲ್ಲ, ಸುತ್ತಲಿನ ಏನೂ ಕಾಣಿಸಲಿಲ್ಲ. ನನ್ನ ಕಣ್ಣುಗಳೂ ಸಂಪೂರ್ಣ ಪಾರದರ್ಶಕವಾಗಿ ಬೆಳಕಿನ ಕಿರಣಗಳು ಸಲೀಸಾಗಿ ನನ್ನ ಕಣ್ಣುಗಳ ಮೂಲಕ ಹಾದುಹೋಗುತ್ತಿತ್ತು. ಕಣ್ಣಿದ್ದೂ ನಾನು ಕುರುಡನಾಗಿದ್ದೆ. ದ್ರವದ ಪರಿಣಾಮ ಇಳಿದು ನಾನು ಯಥಾಸ್ಥಿತಿಗೆ ಬಂದಮೇಲೆ ನಮ್ಮಪ್ಪನ ಹತ್ತಿರ ಓಡಿ, ಆದದ್ದನ್ನೆಲ್ಲಾ ಹೇಳಿದೆ.

ಅವರು ನನ್ನನ್ನು ಒಮ್ಮೆ ದೃಷ್ಟಿಸಿ ನೋಡಿ, 'ಪಾರದರ್ಶಕ ಆಗಿರೋದು ನಿನ್ನ ಮೆದುಳು. ಅದೂ ಹುಟ್ಟಿನಿಂದಲೇ ಆಗಿದೆ. ಅದಕ್ಕೆ ಪಾಠ ಹೇಳಿದ್ದು ಒಂದು ಕಿವಿಯಿಂದ ಹೋಗಿ ಯಾವ ಅಡಚಣೆಯೂ ಇಲ್ಲದೇ ಇನ್ನೊಂದರಿಂದ ನೇರವಾಗಿ ಹೊರಕ್ಕೆ ಹೋಗಿಬಿಡುತ್ತೆ. ಸರಿಯಾಗಿ ಓದ್ಕೋ ಹೋಗು ಪೆದ್ದುಮುಂಡೇದೇ' ಅಂತ ಗದರಿಸಿ ಅಟ್ಟಿದರು. ದೊಡ್ಡೋರಿಗೆ ವೈಜ್ಞಾನಿಕ ಮನೋಭಾವವೇ ಇಲ್ಲವಲ್ಲಾ ಯಾಕೆ ಅನ್ನೋದರ ಬಗ್ಗೆ ಈಗ ಸಂಶೋಧನೆ ನಡೆಸ್ತಾ ಇದೇನೆ.

ಕರಡಿಯ ಮೆರವಣಿಗೆ

- ಡಾ|| ಟಿ.ಎಸ್. ರಮಾನಂದ್

[ವನ್ಯ ಜೀವಿಗಳ ಪಶು ವೈದ್ಯರಾದ ಡಾ|| ಟಿ.ಎಸ್. ರಮಾನಂದ್ ಅವರ ಅನುಭವಗಳನ್ನು ದಾಖಲಿಸಿರುವ ಪುಸ್ತಕ "ವೈದ್ಯರ ಶಿಕಾರಿ"ಯಿಂದ ಆಯ್ದ ಒಂದು ಪ್ರಸಂಗ]

ಶಿವಮೊಗ್ಗ ನಗರದ ಹೃದಯ ಭಾಗದಲ್ಲಿ ಗಾಂಧಿಪಾರ್ಕ್ ಇದೆ. ತೋಟಗಾರಿಕಾ ಇಲಾಖೆಯವರ ಸ್ವಾಧೀನದಲ್ಲಿರುವ ಈ ಪಾರ್ಕಿನ ಸುತ್ತಲೂ ವಿವಿಧ ಕಾಲೇಜುಗಳಿದ್ದು ಸದಾಕಾಲವೂ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ಉತ್ಸಾಹಭರಿತ ಓಡಾಟ ಈ ಪ್ರದೇಶಕ್ಕೊಂದು ಶೋಭೆ ತಂದಿದೆ. ಪಾರ್ಕಿನ ಪಶ್ಚಿಮದ ಅಂಚಿಗೆ ಅರಣ್ಯ ಇಲಾಖೆಯವರು ಒಂದು ಪುಟ್ಟ ಮೃಗಾಲಯವನ್ನು ಸ್ಥಾಪಿಸಿದ್ದಾರೆ. ಈ ಚಿಕ್ಕ ಮೃಗಾಲಯದಲ್ಲಿ ಕಾಳಿಂಗಸರ್ಪ, ಹೆಬ್ಬಾವು, ಕರಡಿ, ಕೋತಿ, ನವಿಲು, ಮೊಸಳೆ, ಗಿಳಿ, ಪಾರಿವಾಳ, ಜಿಂಕೆ, ಬರ್ಕ, ನರಿ, ಕತ್ತೆ ಕಿರುಬ, ಲವ್‌ಬರ್ಡ್ಸ್ ಮುಂತಾದ ಜೀವಿಗಳಿವೆ.

ಪಾರ್ಕಿನ ನಾಲ್ಕೂ ದಿಕ್ಕಿಗೂ ಬಾಗಿಲುಗಳಿದ್ದು ಆ ಬದಿಯಿಂದ ಈ ಬದಿಗೆ ಬರುವವರು ಪಾರ್ಕಿನ ಮುಖಾಂತರವೇ ಓಡಾಡುತ್ತಾರೆ. ಪಾರ್ಕಿನ ಪ್ರವೇಶಕ್ಕೆ ಶುಲ್ಕವಿಲ್ಲದ ಕಾರಣ ಪ್ರಾಣಿಗಳು ಸದಾಕಾಲವೂ ದಾರಿಹೋಕರ ಕೀಟಲೆಗೆ ಒಳಗಾಗುತ್ತಿರುತ್ತವೆ.

ಈ ಮೃಗಾಲಯದಲ್ಲಿ ಎಲ್ಲ ಕಟ್ಟಡಗಳೂ ಹಳತಾಗಿದ್ದು ಆಗಾಗ್ಗೆ ದುರಸ್ತಿ ಕಾರ್ಯ ನಡೆಯುತ್ತಿರುತ್ತದೆ. ಕರಡಿ ಮನೆಯ ರಿಪೇರಿ ಸಲುವಾಗಿ ಒಂದು ವಾರದ ಹಿಂದೆ ಒಂದು ಕರಡಿಯನ್ನು ಸ್ಥಳಾಂತರಿಸಲಾಗಿತ್ತು.

ಚಳಿಗಾಲದ ಒಂದು ಮುಂಜಾನೆ ಬಸವೇಗೌಡ ಎನ್ನುವ ಒಬ್ಬ ನೌಕರ ಕರಡಿ ಮನೆ ಸ್ವಚ್ಛ ಮಾಡುವ ಸಲುವಾಗಿ ಬೀಗ ತೆಗೆದ. ಕೂಡಲೇ ಕರಡಿಗೆ ಮುಂಜಾನೆಯ ವಾಕ್ ಮಾಡುವ ಆಸೆ ಬಂದು ಬಸವೇಗೌಡನನ್ನು ಬೀಳಿಸಿ ಹೊರಬಂತು. ಬಸವೇಗೌಡ ಸ್ವಲ್ಪ ಮಟ್ಟಿಗೆ ಬುದ್ಧಿಮಾಂದ್ಯ ವ್ಯಕ್ತಿ. ಕೂಡಲೇ ಏನಾಯಿತು ಎಂದು ಹೊಳೆಯಲಿಲ್ಲ. ಅವನು ಎದ್ದು ನಿಂತು ನೋಡುವ ವೇಳೆಗೆ ಕರಡಿ ಮುಂಜಾನೆಯ ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸುತ್ತಾ ಪಾರ್ಕಿನಲ್ಲಿ ಅಲೆದಾಡಲು ಆರಂಭಿಸಿತ್ತು. ಬಸವೇಗೌಡ 'ಲೀಲಾ, ಲೀಲಾ ಲೀಲಾ' ಎಂದು ಕರಡಿಯ ಹೆಸರು ಕೂಗುತ್ತಾ ಅದನ್ನು ಹಿಂಬಾಲಿಸಿದ.

ಅಂದಾಜು ಮೂರೂವರೆ ವರ್ಷ ವಯಸ್ಸಿನ ಹೆಣ್ಣು ಕರಡಿ ಲೀಲಾ. ಒಂದು ತಿಂಗಳು ಮರಿಯಿದ್ದಾಗಿನಿಂದ ಬಸವೇಗೌಡನ ಆರೈಕೆಯಲ್ಲಿ ಬೆಳೆದ ಮುಗ್ಧ ಜೀವಿ. ಬಸವೇಗೌಡನನ್ನು ಹಿಂದಿರುಗಿ ನೋಡುತ್ತಾ ಜೂಜಾಟಕ್ಕೆ ಕರೆಯುವವರಂತೆ ಮತ್ತೆ ಮುಂದೆ ಓಡಿತು. ಆ ವೇಳೆಗಾಗಲೇ ಪರಿಸ್ಥಿತಿಯ ಅರಿವಾಗಿ ಮೃಗಾಲಯದ ಇನ್ನೊಬ್ಬ ಕೆಲಸಗಾರ ರಾಮಯ್ಯ ಕೂಡ ಬಸವೇಗೌಡನನ್ನು ಅನುಸರಿಸಿ ಧಾವಿಸಿದ.

ಪಾರ್ಕಿನಲ್ಲಿರುವ ಎಲ್ಲಾ ಮರಗಳನ್ನು ಪರಿಶೀಲಿಸಿ, ಸ್ಥಳ ಪರಿಶೀಲನೆ ಮಾಡಿದ ಕರಡಿ,

ಕಾಲೇಜು ರಸ್ತೆ ತಲುಪುವಾಗ ಆಗಲೇ ವೇಳೆ 7-30 ಗಂಟೆ. ಬಣ್ಣ ಬಣ್ಣದ ಸಲ್ವಾರ್ ಕಮೀಜ್, ಮಿಡಿ, ಮಿನಿ ಲಂಗಗಳ, ಅಪರೂಪಕ್ಕೆ ಸೀರೆಯುಟ್ಟ ಕನ್ಯಾಮಣಿಗಳು, ಜೀನ್ಸ್ ಪ್ಯಾಂಟ್‌ನ ಪಡ್ಡೆ ಹುಡುಗರು, ಹರಟುತ್ತಾ ಗಳಿಗೆಗೊಮ್ಮೆ ಕಿಲಕಿಲ ನಗುತ್ತಾ, ಪುಸ್ತಕಗಳೊಂದಿಗೆ ಕಾಲೇಜು ದಾರಿಯಲ್ಲಿ ಬರುತ್ತಿದ್ದಾರೆ. ಅವರನ್ನು ನೋಡಿದ ನಮ್ಮ ಭಲ್ಲೂಕ ಕನ್ಯೆಗೂ ಅವರಂತೆಯೇ ಬಳುಕುತ್ತಾ ತೊನೆಯುತ್ತಾ ನಡೆಯುವ ಆಸೆಯಾಗಿ, ಎರಡು ಕಾಲುಗಳ ಮೇಲೆ ನಿಂತು ಕೈ ಬೀಸುತ್ತಾ ನಡೆದುಕೊಂಡು ಹೊರಟಳು. ಕರಡಿಯು ಒಬ್ಬ ವಿದ್ಯಾರ್ಥಿಯ ದೃಷ್ಟಿಗೆ ಬಿದ್ದ ಕೂಡಲೇ ಆಶ್ಚರ್ಯ ಹಾಗೂ ಗಾಬರಿಯಿಂದ 'ಕರಡಿ' ಎಂದು ಕೂಗಿದ. ಕೂಡಲೇ ಎಲ್ಲರೂ ತಲೆಯೆತ್ತಿ ನೋಡಿ, ದಬ್ಬಿಕೊಂಡು ಬರುವ ಸೈಕಲ್ಲುಗಳನ್ನು ಹಾಗೂ ಪುಸ್ತಕಗಳನ್ನು ಅಲ್ಲೇ ಬಿಸಾಡಿ, ಕೂಗುತ್ತಾ ಕಿರುಚುತ್ತಾ ಸಿಕ್ಕಸಿಕ್ಕ ದಿಕ್ಕಿಗೆ ಓಡತೊಡಗಿದರು. ಜನರ ಕಿರುಚಾಟಕ್ಕೆ ಬೆದರಿದ ಕರಡಿ ಎರಡು ಕಾಲುಗಳ ಮೇಲೆ ವೇಗವಾಗಿ ಓಡತೊಡಗಿತು. ಮೊಪೆಡ್‌ಗಳ ಮೇಲೆ ಸೈಕಲ್‌ಗಳ ಮೇಲೆ ವೇಗವಾಗಿ ಬರುತ್ತಿದ್ದ ಹುಡುಗ ಹುಡುಗಿಯರು ಕೆಳಗೆ ಬಿದ್ದು ವಾಹನಗಳನ್ನು ಅಲ್ಲೇ ಬಿಟ್ಟು ದಿಕ್ಕಾಪಾಲಾಗಿ ಓಡಿದರು. ಅಲ್ಲಿಯೇ ಬಿದ್ದ ವಾಹನಗಳ ತಿರುಗುತ್ತಿರುವ ಗಾಲಿಗಳು, ಅವು ಮಾಡುತ್ತಿರುವ ಶಬ್ದ, ಬಣ್ಣಬಣ್ಣದ ಬಟ್ಟೆಯ ಹುಡುಗರು ಓಡುತ್ತಿರುವ ದೃಶ್ಯ - ಈ ವಿಚಿತ್ರ ಸನ್ನಿವೇಶದಲ್ಲಿ ಗಾಬರಿಯಾದ ಕರಡಿ, ಹುಡುಗರನ್ನು ಅಟ್ಟಿಸಿಕೊಂಡು ಹೋಗುತ್ತಾ, ಸಿಕ್ಕ ಸಿಕ್ಕವರನ್ನು ತಬ್ಬಿ ಕೆಡಹುತ್ತಾ, ರಣರಂಗದಲ್ಲಿ ಶತ್ರುಗಳೆದುರು ಹೋರಾಡುವ ಏಕಾಂಗಿ ವೀರನಂತೆ ವಿಜೃಂಭಿಸಿತು. ಹಾಗೆಯೇ ಪೂರ್ವ ದಿಕ್ಕಿಗೆ ತಿರುಗಿ ಮುಂದೆ ಸಿಗುವ ಮಹಾವೀರ ಸರ್ಕಲ್‌ನಲ್ಲಿ ಕೈಚಾಚಿ ನಿಂತು ಸುತ್ತಲಿನ ರಸ್ತೆಗಳಿಂದ ಬರುತ್ತಿರುವ ವಾಹನಗಳನ್ನು ನಿಯಂತ್ರಿಸುವ ಸಂಚಾರಿ ಪೊಲೀಸ್‌ನಂತೆ ಕಾಣಿಸಿತು. ಹೊನ್ನಾಳಿ ಮತ್ತು ನ್ಯಾಮತಿ ಕಡೆಯ ರಸ್ತೆಗಳಲ್ಲಿ ಬರುತ್ತಿದ್ದ ವಾಹನಗಳು ಅಲ್ಲಲ್ಲಿಯೇ ಗಕ್ಕನೆ ನಿಂತು ಸಂಚಾರ ಅಸ್ತವ್ಯಸ್ತವಾಯಿತು. ಗಾಬರಿಯಾದ ಕರಡಿ ಎಡಗಡೆ ತಿರುಗಿ ಗೋಪಿ ಸರ್ಕಲ್ ಕಡೆಗೆ ಧಾವಿಸಿತು. ಅಲ್ಲಿ ಒಂದು ಪೆಟ್ರೋಲ್‌ಬಂಕ್ ಇದೆ. ಅಪರಿಚಿತ ಪೆಟ್ರೋಲ್ ವಾಸನೆಯಿಂದ ಗಾಬರಿಯಾದ ಕರಡಿ ಪೆಟ್ರೋಲ್ ಬಂಕಿನಿಂದ ಪಾರ್ಕ್‌ಕಡೆ ಇರುವ ಮೋರಿಯೆಡೆಗೆ ನುಗ್ಗಿತು. ಈ ಎಲ್ಲಾ ಘಟನೆಗಳು ನಡೆಯುವ ವೇಳೆಗೆ ಸಾವಿರಾರು ಜನರು ಜಮಾಯಿಸಿ ತಮಾಷೆ ನೋಡುತ್ತಾ ನಿಂತರು. ಮೃಗಾಲಯದ ಸಿಬ್ಬಂದಿಯಾದ ರಾಮಯ್ಯ ಸೈಕಲ್ ಮೇಲೆ ತೆರಳಿ ಸಂಬಂಧಿಸಿದ ವಲಯ ಅರಣ್ಯಾಧಿಕಾರಿಗಳಿಗೆ ಸುದ್ದಿ ಮುಟ್ಟಿಸಿದ. ಹೊಸದಾಗಿ ವನ್ಯಜೀವಿ ವಿಭಾಗಕ್ಕೆ ವರ್ಗಾಯಿಸಲ್ಪಟ್ಟಿದ್ದ ಟಿ.ಜೆ. ರವಿಕುಮಾರ್ ಕೂಡಲೇ ಗಾಬರಿಯಿಂದ ತಮ್ಮ ಮೋಟಾರ್ ಸೈಕಲ್ ಮೇಲೆ ಸ್ಥಳಕ್ಕೆ ಆಗಮಿಸಿದರು. ಅಲ್ಲಿ ಸೇರಿದ್ದ ಜನಜಂಗುಳಿಯನ್ನು ನೋಡಿ ಏನೋ ಅವಾಂತರ ಆಗಿರಬಹುದೆಂದು ತಿಳಿದು ವಿಚಾರಣೆ ಮಾಡುತ್ತಿದ್ದ ಸಮಯಕ್ಕೆ ಅದೇ ಮಾರ್ಗದಲ್ಲಿ ಮೋಟಾರ್ ಸೈಕಲ್ ಮೇಲೆ ತೆರಳುತ್ತಿದ್ದ ನಾನು ಅಲ್ಲಿ ಸೇರಿರುವ ಜನಜಾತ್ರೆಯಿಂದ ಕುತೂಹಲಭರಿತನಾಗಿ ನಿಂತೆ. ರವಿಕುಮಾರ್ ಉದ್ವೇಗದಿಂದ ನಾನಿರುವ ಕಡೆಗೆ ಧಾವಿಸಿ ಬಂದರು. ಇಡೀ ಘಟನೆಯ ಪುನರಾವಲೋಕನ ಮಾಡಿದೆವು. ಹೆಚ್ಚಿನ ಅನಾಹುತ ಆಗಿಲ್ಲವೆಂಬುದೊಂದೇ ಸಮಾಧಾನ. ಈಗ ಕರಡಿಯನ್ನು

ಹಿಡಿದು ಮೃಗಾಲಯಕ್ಕೆ ಸಾಗಿಸುವ ಸಮಸ್ಯೆ ಎದುರಾಗಿದೆ. ರಸ್ತೆ ಅಗಲ ಸುಮಾರು 100 ಅಡಿ. ಮೋರಿಯ ಅಗಲ ಎರಡೂವರೆ ಅಡಿ, ಎತ್ತರ ನಾಲ್ಕು ಅಡಿ. ಇಡೀ ಊರಿನ ಕೊಚ್ಚೆ ಕೊಳಕು ಪ್ರವಾಹದಂತೆ ಮೋರಿಯ ಬಾಯಿಗೆ ನುಗ್ಗುತ್ತಿದೆ. 10 ನಿಮಿಷ ಸತತವಾಗಿ ಮೋರಿಯ ಬಳಿ ನಿಂತರೆ ವಾಂತಿ ಆಗಬಹುದು, ತಲೆ ಸುತ್ತಿ ಬೀಳಬಹುದು. ಕರಡಿಯು ಮೋರಿಯಲ್ಲಿ ಅಡಗಿದೆ ಎಂಬ ಸುದ್ದಿ ಅಷ್ಟೇ; ಕಣ್ಣಿಗಂತು ಕಂಡಿಲ್ಲ. ನಾವು ಕಾರ್ಯ ತತ್ಪರರಾಗುವ ಮೊದಲೇ ಉಡಾಳ ಹುಡುಗರು ರಟ್ಟಿನ ಮೇಲೆ ವೇಸ್ಟ್ ಬಟ್ಟೆಗೆ ಡೀಸೆಲ್ ಸುರಿದು ಬೆಂಕಿ ಹಚ್ಚಿ ಕಾರ್ತೀಕ ಮಾಸದ ಸಾಲು ದೀಪಗಳಂತೆ ಚರಂಡಿಯ ಒಳಗೆ ತೇಲಿ ಬಿಡುತ್ತಿದ್ದಾರೆ. ಮೈ ತುಂಬಾ ರೋಮಗಳಿರುವ ಕರಡಿ ಬೆಂಕಿಯನ್ನು ಕಂಡರೆ ಅಂಜುವುದು ಸಹಜ. ಹುಡುಗರು ಬಿಟ್ಟ ಸಾಲು ದೀಪಗಳಿಗೆ ಅಂಜಿದ ಕರಡಿ ಆ ವೇಳೆಗೆ ಆಗಲೇ ಮೋರಿಯ ಮತ್ತೊಂದು ಭಾಗದಿಂದ ಹೊರಬರಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಮೋರಿಯಲ್ಲಿ ಹರಿವು ನೀರಿನ ರಭಸ. ಸಮುದ್ರಕ್ಕೆ ಸಿಟ್ಟು ಬಂದಾಗ ದೋಣಿಯನ್ನು ಮಗಚುವಂತೆ ಈ ಸಾಲು ದೀಪಗಳನ್ನು ಮಗುಚಿಹಾಕಿತು. ಆ ವೇಳೆಗೆ ಸುದ್ದಿ ತಿಳಿದ ಪೊಲೀಸರು, ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿದರು. ಅಲ್ಲಲ್ಲಿ ನಿಂತ ವಾಹನಗಳನ್ನು ಬೇರೆ ಮಾರ್ಗದಿಂದ ಸಾಗ ಹಾಕಿದರು. ಜನರು ಬರದಂತೆ ಒಂದು ವೃತ್ತವನ್ನು ಮಾಡಿ ನಮ್ಮ ಕಾರ್ಯಾಚರಣೆಗೆ ಅನುವು ಮಾಡಿಕೊಟ್ಟರು.

100 ಅಡಿ ಉದ್ದದ ಮೋರಿ ಒಳಗೆ ಇರುವ ಕರಡಿಗೆ ಅರಿವಳಿಕೆ ಮದ್ದು ನೀಡಿ ಬಂಧಿಸುವ ಸಾಧ್ಯತೆಯಂತೂ ಇಲ್ಲ. ಅವಳನ್ನು ಹೊರಗೆಳೆಯುವ ಮಾರ್ಗೋಪಾಯವೂ ತೋಚುತ್ತಿಲ್ಲ. ಸಾವಿರಾರು ಜನರ ಮುಂದೆ ನಮ್ಮ ಪರಿಸ್ಥಿತಿ ಅಸಹಾಯಕ. ಮಧ್ಯೆ ಮಧ್ಯೆ ಜನರ ಕಾರ್ಯಸಾಧುವಲ್ಲದ ಸಲಹೆಗಳು. ಜನಜುಂಗುಳಿ ಬೆಳೆಯುತ್ತ ಹೋಯಿತು. ಪರಿಸ್ಥಿತಿ ನಿಯಂತ್ರಿಸುವುದೇ ಕಷ್ಟವಾಯಿತು. ಅನೇಕ ಯೋಜನೆಗಳನ್ನು ತಯಾರಿಸಿ ಅವುಗಳ ಸಾಧ್ಯತೆ ಬಗ್ಗೆ ವಿಮರ್ಶಿಸಿ ಕೊನೆಗೊಂದು ತಂತ್ರವನ್ನು ಪ್ರಯೋಗಿಸಲು ನಿಶ್ಚಯಿಸಲಾಯಿತು.

ಮೋರಿಯ ಸುತ್ತಳತೆಗೆ ಸರಿಹೊಂದುವಂತೆ ಕಬ್ಬಿಣದ ತಗಡನ್ನು ಗುರಾಣಿಯಂತೆ ಪರಿವರ್ತಿಸುವುದು. ವ್ಯಕ್ತಿಯೊಬ್ಬ ಅದನ್ನು ಮುಂದೆ ತಳ್ಳುತ್ತಾ ಮೋರಿಯೊಳಗೆ ಪ್ರವೇಶಿಸಿ ಕರಡಿಯನ್ನು ಇನ್ನೊಂದು ಮಾರ್ಗದೆಡೆಗೆ ತಳ್ಳುವುದು. ಆ ಹೊರ ಮಾರ್ಗದಲ್ಲಿ ಬಲೆಯೊಂದನ್ನು ಒಡ್ಡಿ ಕರಡಿ ಹೊರಗೆ ಕಾಣಿಸಿದ ಕೂಡಲೇ ಬಂದೂಕಿನಿಂದ ಅರಿವಳಿಕೆ ನೀಡುವುದು. ಆ ಹೊಲಸು ವಾಸನೆಯ ನೀರಿನೊಳಗೆ ಪ್ರವೇಶಿಸಲು ಮನುಷ್ಯ ಮಾತ್ರದವನಿಗೆ ಸಾಧ್ಯವಿಲ್ಲದ್ದರಿಂದ ನಮ್ಮ ಯೋಜನೆಯನ್ನು ಕಾರ್ಯಗತಗೊಳಿಸುವ ವ್ಯಕ್ತಿ ಸಿಕ್ಕಲಿಲ್ಲ. ನಗರಸಭೆಯ ಸ್ವಚ್ಛತಾ ಸಿಬ್ಬಂದಿಯೊಬ್ಬ ಈ ಕಾರ್ಯ ನಿರ್ವಹಿಸಲು ಮುಂದೆ ಬಂದ. ಆ ಹೊತ್ತಿಗೆ ಆತನಾಗಲೇ 'ಭಗವಂತನ ಕೃಪೆ'ಗೆ ಪಾತ್ರನಾಗಿದ್ದ; ನಿಲ್ಲಲು ಕೂಡಾ ಆಗದ ಸ್ಥಿತಿಯಲ್ಲಿದ್ದ. ಆಗ ಪೊಲೀಸ್ ಅಧಿಕಾರಿಯೊಬ್ಬರು ನನ್ನ ಬಳಿ ಬಂದು 'ಡಾಕ್ಟ್ರೆ ಇವನನ್ನು ಒಳಗೆ ಕಳಿಸಿದ್ರೆ ಕರಡಿ ಮತ್ತು ಇವನನ್ನು ನೀವೇ ಹೊರಗೆ ತರಬೇಕಾಗುತ್ತದೆ' ಎಂದು ತಮ್ಮ ಸಹಜ ಭಯವನ್ನು ಪ್ರಕಟಿಸಿದರು. ಸುತ್ತಲಿದ್ದವರು ಗಹಗಹಿಸಿ ನಕ್ಕರು. ಪರಿಸ್ಥಿತಿಯ ಒತ್ತಡವನ್ನು

ಸಾಂಕ್ರಾಮಿಕ ನಗು ಸಡಿಲಗೊಳಿಸಿತು. ಆ ವೇಳೆಗೆ ಪಕ್ಕದ ವರ್ಕ್‌ಷಾಪ್‌ನಿಂದ ಸೂಕ್ತ ಅಳತೆಯ ಗುರಾಣಿಯನ್ನು ಸಿದ್ಧಪಡಿಸಿ ತಂದರು. ಕತ್ತಿಯಿಲ್ಲದೆ ಗುರಾಣಿ ಹಿಡಿದು ಯುದ್ಧ ಮಾಡುವ ಯೋಧನೊಬ್ಬ ನಮಗೆ ಬೇಕಾಗಿದ್ದ. ಇದಕ್ಕೆ ಯಾರು ಸಿದ್ಧರಿರಲು ಸಾಧ್ಯ? ಕೊನೆಗೆ ನಮ್ಮ ಸಿಬ್ಬಂದಿ ರಾಮಯ್ಯ ಯೋಧನ ಪಾತ್ರ ವಹಿಸಲು ತಯಾರಾದರು. ಕರಡಿಯ ಸ್ವಭಾವ, ಶಕ್ತಿಗಳ ಮಾಹಿತಿ ಇದ್ದ ವ್ಯಕ್ತಿಯೊಬ್ಬ ನಮಗೆ ದೊರೆತದ್ದು ಅನುಕೂಲವಾಯಿತು. ಅಂಗಿ, ಪ್ಯಾಂಟ್‌ಗಳನ್ನು ಕಳಚಿ, ಗುರಾಣಿಯೊಂದಿಗೆ ಮೋರಿಯೊಳಗಿಳಿದ ರಾಮಯ್ಯ, 5 ಅಡಿಯಷ್ಟು ಒಳಗೆ ಪ್ರವೇಶಿಸಿ ಕೂಡಲೆ ಹೊರಗೆ ಪ್ರತ್ಯಕ್ಷನಾದ. 'ಈ ಕೆಟ್ಟ ವಾಸನೆಯಲ್ಲಿ ಯಾವನಾದ್ರೂ ಒಳಗೆ ಹೋಗಾಕೆ ಆದೀತೆ ಸ್ವಾಮಿ, ನನ್ನ ಕೈಲಿ ಸಾಧ್ಯವಿಲ್ಲ' ಅಂದ. ನಿಮಗೂ ಒಂದು ಕೊಟ್ಟೆ ಕುಡಿಸೋಣವೇ ಅಂದ್ರು ರವಿಕುಮಾರ್. 'ಕಂಟ್ರಿ ಸಾರಾಯಿ ಯಾಕೆ. ರಾಯಲ್ ಸಲ್ಯೂಟ್ ಕೊಟ್ರೂ ಒಳಗೆ ಹೋಗೋಕೆ ಆಗೋಲ್ಲ' ಎಂದ. ಮೊದಲ ಚುಂಬನಕ್ಕೆ ಹಲ್ಲುದುರಿಸಿಕೊಂಡಂತಾಯಿತು. ಪರಿಸ್ಥಿತಿಯ ಎಲ್ಲ ಅಂಶಗಳನ್ನೂ ಗಣನೆಗೆ ತೆಗೆದುಕೊಂಡು ರೂಪಿಸಿದ್ದ ನಮ್ಮ ತಂತ್ರ ಚರಂಡಿಯ ವಾಸನೆಯಿಂದಾಗಿ ಏಕಾಏಕಿ ತಲೆಕೆಳಗಾಯಿತು. ನೆರೆದಿದ್ದ ಪ್ರೇಕ್ಷಕರೊಬ್ಬರು ಮತ್ತೊಂದು ಕಡೆಯಲ್ಲಿ ಚರಂಡಿಗೆ ಒಡ್ಡುಕಟ್ಟುವ ಸಲಹೆಯ ನೀಡಿದರು. ತಕ್ಷಣವೇ ಭರ್ ಎಂದು ಹೋದ ಅರಣ್ಯಾಧಿಕಾರಿಗಳ ಜೀಪು, ಹಾರೆ ಸನಿಕೆಗಳೊಂದಿಗೆ ನಾಲ್ಕು ಜನ ನಗರಸಭಾ ಸಿಬ್ಬಂದಿಯೊಂದಿಗೆ ಹಿಂದಿರುಗಿತು. ಸೇರಿದ ಜನಸಮೂಹ ತಲೆಗೊಂದರಂತೆ ಮಾತಾಡುತ್ತಾ ನಮ್ಮ ನಿಷ್ಕ್ರಿಯತೆ ಬಗ್ಗೆ ಅಪಹಾಸ್ಯ ಮಾಡಿತು.

ಸುಮಾರು 50 ಗಜ ದೂರದಲ್ಲಿ ಮುಸ್ಲಿಮರ ದರ್ಗಾ ಇದೆ. ಆ ದರ್ಗಾದ ಬಳಿ ಚರಂಡಿಗೆ ಅಣೆಕಟ್ಟು ಕಟ್ಟುವ ಕಾಮಗಾರಿ ಆರಂಭವಾಯಿತು. ಬಿಸಿಲು ಹೆಚ್ಚಾದಂತೆ ನಮ್ಮ ಕಳಾಹೀನ ಪ್ರದರ್ಶನವನ್ನು ನೋಡಿ ಬೇಸತ್ತು ಜನ ಚದುರಲಾರಂಭಿಸಿದರು. ಅದು ನಮಗೆ ಅನುಕೂಲವೇ ಆಯಿತು. ರಾಮಯ್ಯನಿಗೆ ಮತ್ತೆ ಉತ್ಸಾಹ ತುಂಬಿ, ಇನಾಮಿನ ಆಮಿಷ ತೋರಿಸಿ ಮೋರಿಯಲ್ಲಿ ಇಳಿಸಿದೆವು. ನಿಧಾನವಾಗಿ ಮುಂದೆ ಸಾಗಿದ ರಾಮಯ್ಯ ನಮ್ಮ ಕಣ್ಣಿಗೆ ಕಾಣದಾದ. ಮೋರಿಯ ಇನ್ನೊಂದು ಬದಿಯಲ್ಲಿ, ಬಾಯಲ್ಲಿ ಅಕ್ಕಿಕಾಳು ಹಾಕಿಕೊಂಡು ಕಾಯುತ್ತಾ ನಿಂತೆವು. ನನ್ನ ಕೈಯಲ್ಲಿ ಅರಿವಳಿಕೆ ಮದ್ದು ತುಂಬಿದ ಬಂದೂಕು. ಬಲೆ ಹಿಡಿದು ಕಾಯುತ್ತಿರುವ ಸಿಬ್ಬಂದಿ. ಮೋರಿಯ ಬಾಗಿಲಿಗೆ ದೃಷ್ಟಿ ನೆಟ್ಟು ಕಾಯುತ್ತಿರುವ ಅಧಿಕಾರಿಗಳು. ಹತ್ತು ನಿಮಿಷ ಕಳೆದರೂ ರಾಮಯ್ಯನಾಗಲೀ, ಕರಡಿಯದಾಗಲೀ ಸುಳಿವಿಲ್ಲ. 'ರಾಮಯ್ಯ ರಾಮಯ್ಯ' ಎಂದು ಕೂಗಿದರೂ ಅವನಿಂದ ಉತ್ತರವಿಲ್ಲ. ಮುಂದೇನು ಮಾಡಬೇಕೆಂಬ ಯೋಜನೆ, ನಿರುತ್ಸಾಹ, ನಿರಾಸೆ ತುಂಬಿದ ನಾವು ಮೋರಿಯ ಕಡೆಗೆ ನೋಡುತ್ತಿರುವಾಗ ಕಪ್ಪನೆಯ ಭಾಗವೊಂದು ಚರಂಡಿಯ ತುದಿಯಲ್ಲಿ ಕಾಣಿಸಿಕೊಂಡಾಕ್ಷಣವೇ ನನ್ನ ಕೈಯಲ್ಲಿದ್ದ ಬಂದೂಕು ಟಪ್ ಎಂದು ಶಬ್ದ ಮಾಡಿತು. ಅರಿವಳಿಕೆ ಸಿರೆಂಜ್‌ನ ಗುರಿ ಕರಡಿಯ ಪೃಷ್ಠ ಭಾಗಕ್ಕೆ ತಾಗಿತ್ತು. ಮುಂದಿನ ಕೆಲಸ ಕ್ಷಣಮಾತ್ರದ್ದು. ಕರಡಿಯನ್ನು ಗುರಾಣಿಯಿಂದ ಬಲವಾಗಿ ನೂಕಿದ ರಾಮಯ್ಯನ ಕೈಯಿ ಗುರಾಣಿಯ ಸಮೇತ ಕಾಣಿಸಿತು. ಕೂಡಲೇ ಕರಡಿಯನ್ನು ಬಂಧಿಸಿ ಸಿದ್ಧಗೊಳಿಸಿದ್ದ ಬೋನಿಗೆ ಸಾಗಿಸಿದೆವು.

ಎಚ್ಚರ ತಪ್ಪಿದ್ದ ಭಲ್ಲೂಕ ಕನ್ಯೆ ಲೀಲಾ ಬೋನಿನಲ್ಲಿ ಮಲಗಿ, ಜೈಕಾರ ಹಾಕುತ್ತಿದ್ದ ನೂರಾರು ಜನಗಳೊಂದಿಗೆ, ಮೃಗಾಲಯದ ತನ್ನ ವಾಸಸ್ಥಾನಕ್ಕೆ ತಲುಪಿದಳು. ಎಲ್ಲರಿಗೂ ಕಾಫಿ ಸಮಾರಾಧನೆಯಾಯಿತು. ಅರಣ್ಯಾಧಿಕಾರಿಗಳು, ನಾನು ಘಟನೆಯ ಪರಾಮರ್ಶೆ ನಡೆಸುತ್ತಾ ಕುಳಿತಾಗ ವಿದ್ಯಾರ್ಥಿಗಳ ಗುಂಪೊಂದು ಕೈಗೆ, ಮುಖಕ್ಕೆ ಬ್ಯಾಂಡೇಜ್, ಹರಿದ ಪ್ಯಾಂಟ್ ಮತ್ತು ಸಪ್ಪೆ ಮುಖಗಳೊಂದಿಗೆ ಆಗಮಿಸಿ ಪರಿಹಾರಕ್ಕೆ ಒತ್ತಾಯಿಸಿದರು. ಎಲ್ಲರಿಗೂ ಚಿಕಿತ್ಸೆ ಕೊಡಿಸುವ ಭರವಸೆ ನೀಡಿದೆವು. ನಂತರದ್ದು ಘಾಸಿಗೊಂಡಿರುವ ವಾಹನಗಳ ಪ್ರಶ್ನೆ. ದುರಂತದಲ್ಲಿ ಕೊನೆಯಾಗಬೇಕಾಗಿದ್ದ ಪ್ರಸಂಗವೊಂದು ಸುಲಲಿತವಾಗಿ ಸುಖಾಂತವಾದ ಸಂತೋಷದಲ್ಲಿದ್ದ ರವಿಕುಮಾರ್ ವಿಚಾರ ಮಾಡದೆ ಜಖಂಗೊಂಡ ವಾಹನಗಳ ರಿಪೇರಿ ಮಾಡಿಸಲು ಒಪ್ಪಿಕೊಂಡರು. ಅವರಿಗೆ ಪರಿಚಯದ ಗ್ಯಾರೇಜ್ ವಿಳಾಸ ನೀಡಿ ಅಲ್ಲಿಗೆ ವಾಹನಗಳನ್ನು ಒಯ್ಯಲು ಸೂಚಿಸಿದರು. ಸ್ವಲ್ಪ ಸಮಯದ ನಂತರ ನಾವಿಬ್ಬರೂ ಆ ಗ್ಯಾರೇಜ್‌ಗೆ ಹೋಗಿ ನೋಡಿದರೆ ವಿದ್ಯಾರ್ಥಿಗಳ ಜಖಂಗೊಂಡ ವಾಹನಗಳು ಸಾಲು ಸಾಲುಗಳಲ್ಲಿ ನಿಂತಿವೆ.

★★★

ಒಂದು ಪ್ಲಸ್ ಒಂದು

ಒಬ್ಬ ನಿರುದ್ಯೋಗಿಗೆ ಚೌರದ ಅಂಗಡಿಯಲ್ಲಿ ಕೆಲಸ ಸಿಕ್ಕಿತು. ತುಸು ತರಬೇತಿಯ ನಂತರ ಅವನೇ ಸ್ವತಂತ್ರವಾಗಿ ಗಿರಾಕಿಗಳ ಗಡ್ಡ ಹೆರೆಯುವ ಅವಕಾಶ ದೊರೆಯಿತು. ಆದರೆ ಮಾಲೀಕ ಒಂದು ಷರತ್ ವಿಧಿಸಿದ. ಅದೇನೆಂದರೆ ಅವನು ಗಡ್ಡ ಹೆರೆಯುವಾಗ ಗಿರಾಕಿಗೆ ಒಂದು ಗಾಯ ಮಾಡಿದರೆ ಐದು ರೂಪಾಯಿ ದಂಡ ನೀಡಬೇಕು. ಇವನು ಒಪ್ಪಿದ.

ಒಂದು ದಿನ ಅವನು ಕೆಲಸ ಕಳೆದುಕೊಂಡ.

ಏಕೆ? ಎಂದು ಕೇಳಿದಾಗ ಅವನು ನೀಡಿದ ವಿವರಣೆ ಹೀಗಿತ್ತು: "ಸಾರ್ ಮೊನ್ನೆ ಚೌರ ಮಾಡ್ತಿದ್ದಾಗ ಗಿರಾಕಿಯ ಕೆನ್ನೆಯ ಮೇಲೆ ಒಂದು ಗಾಯವಾಯಿತು. ನಂತರ ಅದರ ಪಕ್ಕದಲ್ಲೇ ಇನ್ನೊಂದು ಗಾಯವಾಯಿತು. ಒಟ್ಟು ಎರಡು ಗಾಯಗಳಾದವು. ಅಂದರೆ 10 ರೂಪಾಯಿ ದಂಡ. ಆಗ ನನಗೆ ಮಿಂಚಿನಂತೆ ಒಂದು ಐಡಿಯಾ ಹೊಳೆಯಿತು. ಎರಡೂ ಗಾಯಗಳನ್ನು ಸೇರಿಸಿದರೆ ಒಂದೇ ಗಾಯ ಆಗುತ್ತದೆ. ಆಗ ನನಗೆ ಐದು ರೂಪಾಯಿ ಉಳಿಯುತ್ತದೆ. ಹೀಗೆಂದುಕೊಂಡು ನಾನು ಆ ಎರಡೂ ಗಾಯಗಳನ್ನು ಸೇರಿಸಲು ಇನ್ನೊಂದು ಗಾಯ ಮಾಡಲು ಹೊರಟಾಗ ಸಿಕ್ಕಿಬಿದ್ದೆ. ಮಾಲೀಕ ಹೊರ ದಬ್ಬಿದ."

ವಿವರಣೆ ಕೇಳಿ ಅಯ್ಯೋ ಎನಿಸದೆ?

ಲಕ್ಷ್ಯಕ್ಕೆ ಸಿಗದ ಲಕ್ಷ

- ಬೇಲೂರು ರಾಮಮೂರ್ತಿ

ಸಾರ್ ನಮ್ಮನೇಲಿ ಕಳ್ಳತನ ಆಗಿದೆ ಬೇಗ ಬನ್ನಿ ಅಂತ ಸೋಮಯ್ಯ ಪೋಲೀಸ್‌ಗೆ ಫೋನ್ ಮಾಡಿದರು. ಹತ್ತೇ ನಿಮಿಷಕ್ಕೆ ಪೋಲೀಸ್ ಬಂದು ಏನು ಕಳ್ಳತನ ಆಗಿದೆ ಅಂತ ಕೇಳಿದ್ರು. ಸೋಮಯ್ಯ ನೋಡಿ ಇವತ್ತು ಬೆಳಗ್ಗೆ ನಾನು ಬ್ಯಾಂಕಿಂದ ಒಂದು ಲಕ್ಷ ರೂಪಾಯಿ ಡ್ರಾ ಮಾಡಿಕೊಂಡು ಬಂದು ಇಲ್ಲಿಟ್ಟಿದ್ದೆ ಈಗ ಅದು ಕಾಣ್ತಿಲ್ಲ ಅಂದು ಟೇಬಲ್ ಡ್ರಾ ತೋರಿಸಿದರು. ಮನೇಲಿ ಯಾರ್‍ಯಾರು ಇದ್ದೀರ ಅಂತ ಪೋಲೀಸ್ ಕೇಳಿದ್ರು. ನಾನು ನನ್ನ ಹೆಂಡ್ತಿ ಜಾನಕಿ, ಮಗಳು ಸುಮ, ಮಗ ನಾಗೇಶ ಅಂದರು. ತಕ್ಷಣ ಎಲ್ಲರೂ ಬಂದು ಪೋಲೀಸ್ ಎದುರಿಗೆ ನಿಂತರು. ಸೋಮಯ್ಯನವರ ಹೆಂಡ್ತಿ ಅಲ್ಲ ಮನೇಲಿ ಹೀಗೆ ಕಳ್ಳತನ ಆಗಿದೆ ಅಂತ ನಮ್ಮತ್ರ ಹೇಳ್ದಲೇನೇ ನಿಮಗೆ ಫೋನ್ ಮಾಡಿದಾರಲ್ಲ, ಏನೂಂದ್ರೆ, ನೀವು ನಮ್ಮತ್ರ ಒಂದ್ಮಾತು ಹೇಳಿ ತಾನೇ ಆಮೇಲೆ ಪೋಲೀಸಿಗೆ ತಿಳಿಸೋದು ಅಂದ್ರೆ, ಸೋಮಯ್ಯ, ಈಗೇನಾಯ್ತು, ಅವರು ಬಂದಿದಾರಲ್ಲ, ಅವರು ಏನು ಕೇಳ್ತಾರೋ ಅದಕ್ಕೆ ಉತ್ರ ಕೊಡಿ ಅಂದ್ರು. ಪೋಲೀಸ್ ಮನೆಯವರನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿ ನಿಜ ಹೇಳಿ ಹಣದ ವಿಚಾರ ನಿಮಗೆಷ್ಟು ಗೊತ್ತು ಅಂತ ಕೇಳಿದರು. ಜಾನಕಿ ನಾನು ಅವರ ಕೈ ಹಿಡಿದು ಇಷ್ಟು ವರ್ಷ ಆಯ್ತು. ಒಂದು ದಿನ ಕೂಡ ಅವರ ಹಣಕಾಸಿನ ವಿಚಾರ ನನಗೆ ಏನೇನೂ ಗೊತ್ತಿಲ್ಲ. ಯಾಕೇಂದ್ರೆ ಅವರ ಹಣಕಾಸಿನ ಬಗ್ಗೆ ಅವರು ನನ್ನತ್ರ ಯಾವತ್ತೂ ಹೇಳಿಲ್ಲ ನಾನೂ ಯಾವತ್ತೂ ಕೇಳಿಲ್ಲ ಅಂದು ಗಂಡನ ಕಡೆ ತಿರುಗಿ, ಏನೂಂದ್ರೆ, ಯಾವ ಲಕ್ಷ, ಏನು ಕಥೆ, ಯಾವಾಗ ಡ್ರಾ ಮಾಡಿದ್ರಿ ಅಂತ ಕೇಳಿದರು. ಅದಕ್ಕೆ ಸೋಮಯ್ಯನ ಉತ್ರ ಇಲ್ಲ. ಪೋಲೀಸು ತನ್ನನ್ನು ಪ್ರಶ್ನೆ ಕೇಳೋ ಮೊದಲೇ ಮಗಳು ನಮ್ಮಪ್ಪ ದುಡ್ಡಿನ ವಿಚಾರದಲ್ಲಿ ಬಹಳ ಸೂಕ್ಷ್ಮ, ನಾನಂತೂ ಆ ತಂಟೆಗೆ ಹೋಗಿಲ್ಲ ಅಂದಳು. ಮಗನಿಂದಲೂ ಇದೇ ರೀತಿಯ ಉತ್ತರ ಸಿಕ್ಕಿತು. ಸರಿ ಹಣ ಯಾವಾಗ, ಎಷ್ಟು ಹೊತ್ತಿಗೆ ಡ್ರಾ ಮಾಡಿದ್ರಿ, ಯಾತಕ್ಕೆ ಡ್ರಾ ಮಾಡಿದ್ರಿ, ಅಂತ ಪೋಲೀಸ್ ಕೇಳಿದಾಗ ಸೋಮಯ್ಯ ನಮ್ಮ ತೋಟದಲ್ಲಿ ಭಾವಿ ತೆಗೆಸೋಕೆ ಅಂತ ಡ್ರಾ ಮಾಡಿದ್ದೆ ಅಂದ್ರು. ಪೋಲೀಸು ಹಾಗಾದರೆ ಭಾವಿ ತೋಡೋನಿಗೆ ಕೊಟ್ಟಿರಬೇಕು ಅನ್ನುತ್ತಿದ್ದ ಹಾಗೆ ಜಾನಕಿ ಅಯ್ಯೋ ಇದ್ಯಾವ್ದ ತೋಟ ನನಗೆ ಗೊತ್ತಿಲ್ಲದ್ದು, ನಮಗೆ ತೋಟ ಪಾಟ ಒಂದೂ ಇಲ್ಲ ಇನ್ನು ಭಾವಿ ತೆಗೆಸೋದು ಏನು ಬಂತು ಅಂದ್ರು. ಪೋಲೀಸು ಸೋಮಯ್ಯನ ಕಡೆ ನೋಡಿದರು. ತೋಟ ಇಲ್ಲದೇ ಇರಬಹುದು, ಆದರೆ ಹಣವನ್ನ ಬೇರೆ ಇನ್ಯಾತಕ್ಕೋ ಡ್ರಾ ಮಾಡಿದ್ದೆ ಅಂದ್ರು ಸೋಮಯ್ಯ. ಪೋಲೀಸಿಗೆ ತಲೆ ಕೆಡೋ ಹಾಗಾಯ್ತು. ಅವರು ಮಿಸ್ಟರ್ ಸೋಮಯ್ಯ ನಮ್ಮ ದಾರಿ ತಪ್ಪಿಸಬೇಡಿ. ಸರಿಯಾಗಿ ಹೇಳಿ ಹಣಾನ ಯಾಕೆ ಡ್ರಾ ಮಾಡಿದ್ರಿ, ಯಾರಿಗಾದರೂ ಕೊಟ್ಟಿದ್ರೆ ಸರಿಯಾಗಿ ನೆನಪು ಮಾಡ್ಕೊಳಿ ಅಂದ್ರು. ಹಣ ಡ್ರಾ ಮಾಡಿದ್ದೇನೋ ಸರಿ ಅಂದು ಮಗನ ಕಡೆ ನೋಡಿ, ನಾನು ಮೊನ್ನೆ ನಿನಗೆ ಹಣ ಕೊಡೋಲ್ಲ ಅಂದ್ನಲ್ಲ ಅದಿಕ್ಕೆ ನೀನೇನಾದರೂ ತಗೊಂಡ್ಯಾ ಅಂತ ಕೇಳಿದ್ರು. ನಾಗೇಶ ಅಯ್ಯೋ ರಾಮ ನಾನ್ಯಾಕೆ ತಗೊಳ್ಲಿ ಅಂದ ತಕ್ಷಣ ಪೋಲೀಸು ಅವನ ಹತ್ತಿರ ಬಂದು ನೀವೇನು ಕೆಲಸ ಮಾಡ್ತಾ ಇದೀರ ಅಂತ ಕೇಳಿದ್ರು. ಒಂದು ಕಂಪನೀಲಿ ಅಕೌಂಟೆಂಟ್ ಆಗಿದೀನಿ ಅಂದ. ಇವತ್ತು ಬೆಳಗ್ಗೆಯಿಂದ ನೀವು

ಎಲ್ಲೆಲ್ಲಿ ಹೋಗಿದ್ರಿ, ಯಾರ್‍ಯಾರನ್ನ ಮೀಟ್ ಮಾಡಿದ್ರಿ ಅಂತ ಕೇಳಿದ್ರು. ಇದೊಳ್ಳೆ ರಾಮಾಯಣ ಆಯ್ತಲ್ಲ ಅಂತ ನಾಗೇಶ ಬೇಜಾರಾಗಿ ಪೋಲೀಸಿಗೆ ವರದಿ ಒಪ್ಪಿಸಿದ. ಅಷ್ಟೊತ್ತಿಗೆ ಫೋನ್ ಬಂತು. ಸುಮ ರಿಸೀವ್ ಮಾಡೋಕೆ ಹೊರಟೋಳನ್ನ ತಡೆದು ಪೋಲೀಸು ತಾವೇ ರಿಸೀವ್ ಮಾಡಿದ್ರು. ಚಿನ್ನ ಬೆಳ್ಳಿ ಅಂಗಡಿಯಿಂದ ಫೋನು. ನಿಮ್ಮ ಸರ ರೆಡಿಯಾಗಿದೆ ಬಂದು ತಗೊಂಡು ಹೋಗಿ ಅಂತ. ದುಡ್ಡು ಎಷ್ಟು ಅಂದ್ರೆ ಒಂದು ಲಕ್ಷ ಆಗಲೇ ಕೊಟ್ಟಾಗಿದೆ ಅಂದ ಅಂಗಡಿಯವನು. ಪೋಲೀಸು ಸುಮ ಕಡೆ ನೋಡಿ ಇದಕ್ಕೆ ಹಣ ಎಲ್ಲಿಂದ ಬಂತು ಅಂತ ಕೇಳಿದ್ರು. ನನ್ನ ಗಂಡ ಕೊಟ್ಟಿದ್ದು ಅಂದ್ಲು. ಹೇಗೆ ಕೊಟ್ರು ಅಂತ ಕೇಳಿದ್ರು. ಅವಳು ಒಳಗೆ ಹೋಗಿ ಪಾಸ್‌ಬುಕ್ ತಂದು ಇಲ್ಲಿ ನೋಡಿ ಎಂಟ್ರಿ ಒಂದು ಲಕ್ಷ ನನ್ನ ಅಕೌಂಟಿಗೆ ಬಂದಿದೆ ಹಾಗೇ ನಾನು ಒಂದು ಲಕ್ಷ ಡ್ರಾ ಮಾಡಿದೀನಿ ಅಂದ್ಲು. ಹಾಗಾದ್ರೆ ಸೋಮಯ್ಯನವರು ಒಂದು ಲಕ್ಷನ ಅಳಿಯನಿಗೆ ಕೊಟ್ಟಿರಬಹುದು ಅವರ ನಂಬರ್ ಕೊಡಿ ಅಂದು ಅಳಿಯನಿಗೆ ಫೋನ್ ಮಾಡಿದಾಗ ಅಳಿಯ ನಾನು ಮಾವನ ಬಳಿ ಹಣ ತಗೊಳ್ಳೇ ಇಲ್ಲ ಅಂದ. ಇಷ್ಟೆಲ್ಲ ಆಗೋ ಹೊತ್ತಿಗೆ ಪೋಲೀಸರು ಮನೆಯನ್ನೆಲ್ಲ ಜಪ್ತಿ ಮಾಡಿದ್ರು. ಮನೆಗೆ ಬಂದು ಹೋಗೋರ್‍ನ್ನ ಪ್ರಶ್ನೆ ಮಾಡ್ತಿದ್ರು. ಅಷ್ಟೊತ್ತಿಗೆ ಎದುರು ಮನೆ ರಾಮರಾಯರು ಬಂದು ಸೋಮಯ್ಯ ಇದೇನು ಪೋಲೀಸು ಬಂದಿದಾರೆ ಅಂದ್ರು. ಅವರಿಗೂ ವಿಷಯ ಗೊತ್ತಾಯಿತು. ಅವರು ಪೋಲೀಸರ ಕಡೆ ತಿರುಗಿ ಸಾರ್ ಇವತ್ತು ಇವರು ಬ್ಯಾಂಕಿಂದ ಹಣ ಡ್ರಾ ಮಾಡೇ ಇಲ್ಲ ಇನ್ನು ಮನೆ ಡ್ರಾಯರಲ್ಲಿ ಇಡೋದು ಹೇಗೆ ಸಾಧ್ಯ ಅಂದರು. ಪೋಲೀಸರು ನಿಮಗೆ ಹೇಗೆ ಗೊತ್ತು ಅಂತ ಕೇಳಿದ್ರೆ ನಾನೂ ಇವತ್ತು ಬೆಳಗ್ಗೆ ಇವರ ಜೊತೆ ಬ್ಯಾಂಕಿಗೆ ಹೋಗಿದ್ದೆ. ಇವರು ಹಣ ಡ್ರಾ ಮಾಡಬೇಕು ಅಂತಿದ್ದರು. ಆದ್ರೆ ಬರೀ ಪಾಸ್‌ಬುಕ್ ಎಂಟ್ರಿ ಮಾಡಿಸ್ಕೊಂಡು ಬಂದ್ರು ಅಂತ ರಾಮರಾಯರು ಹೇಗಂತಿದ್ದ ಹಾಗೆ ಜಾನಕಿ ಓಡಿ ಬಂದು ಸರ್. ಈಚೆಗೆ ಇವರಿಗೊಂದು ಕಾಹಿಲೆ ಷುರು ಆಗಿದೆ. ಏನಂದ್ರೆ, ಇವರು ಮನಸ್ಸಿನಲ್ಲಿ ಅಂದ್ಕೊಂಡಿದ್ದನ್ನ ಮಾಡೋಕೆ ಮುಂಚೆಯೇ ಮಾಡಿಬಿಟ್ಟೆ ಅಂದ್ಕೊಂಡ್‌ಬಿಡ್ತಾರೆ. ಉದಾಹರಣೆಗೆ ಸ್ನಾನಕ್ಕೆ ಹೊರಟಿರ್‍ತಾರೆ ಸ್ನಾನ ಮಾಡ್ದೇ ಬಂದು ನನ್ನ ಸ್ನಾನ ಆಯ್ತು ಅಂತ ಬಟ್ಟೆ ಬದಲಾಯಿಸಿಕೊಳ್ತಿರ್‍ತಾರೆ. ಊಟಕ್ಕೆ ಕೂತ್ಕೊತಾರೆ, ನಾನು ಇನ್ನೂ ಬಡಿಸ್ತನೇ ಇರ್‍ತಿನಿ ಆಗ್ಲೇ ಇವರು ತಟ್ಟೆಲಿ ಕೈ ತೊಳೆದು ನನ್ನ ಊಟ ಆಯ್ತು ಅಂತಾರೆ. ಬೆಳಗ್ಗೆ ಮನೇಲೇ ಇರ್‍ತಾರೆ, ಆಗ ನಾನು ಇದೇನು ಆಫೀಸಿಗೆ ಹೋಗಲ್ವೆ ಅಂದ್ರೆ ನಾನು ಆಫೀಸಿಗೆ ಹೋಗಿ ಬಂದೆ ಅಂತಾರೆ. ಇವರ ಇಂಥಾ ಸ್ಥಿತಿಗೆ ಡಾಕ್ಟರ ಹತ್ರ ಚೆಕಪ್ ಮಾಡಿಸಿ ಟ್ರೀಟ್‌ಮೆಂಟ್ ಕೊಡಿಸ್ತಿದೀವಿ ಅಂದ್ರು. ಪೋಲೀಸು ಸೋಮಯ್ಯನ ಕಡೆ ತಿರುಗಿ ಏನ್ರೀ ಇವರೆಲ್ಲ ನಿಮ್ಮ ಬಗ್ಗೆ ಏನೇನೋ ಹೇಳ್ತಿದಾರೆ ಅಂತ ಕೇಳಿದ್ರೆ, ಸೋಮಯ್ಯ ಅವರು ಯಾವಾಗಲೂ ಹಾಗೇ, ಅದ್ಸರಿ, ಅವರು ಹೇಳೋದನ್ನೆಲ್ಲ ಕೇಳೋಕೆ ನೀವ್ಯಾಕೆ ಬಂದ್ರಿ ಅಂತ ಕೇಳಿದಾಗ ಪೋಲೀಸು ಸುಸ್ತು. ಅವರು ಸೋಮಯ್ಯನ ಪಾಸ್‌ಬುಕ್ ಪರೀಕ್ಷೆ ಮಾಡಿದರು. ಅಲ್ಲಿ ಒಂದು ಲಕ್ಷ ಡ್ರಾ ಮಾಡಿರೋ ಗುರುತೇ ಇಲ್ಲ. ಏನಿದು ಸೋಮಯ್ಯ, ಒಂದು ಲಕ್ಷ ಡ್ರಾಯರಲ್ಲಿಟ್ಟಿದ್ದು ಕಾಣ್ತಿಲ್ಲ ಅಂದ್ರಿ, ನೋಡಿದ್ರೆ ನೀವು ಒಂದು ಲಕ್ಷ ಡ್ರಾ ಮಾಡೇ ಇಲ್ಲ ಅಂದ್ರೆ ಸೋಮಯ್ಯ ಪೋಲೀಸ್ ಕಡೆ ತಿರುಗಿ ಒಂದು ಲಕ್ಷ ಡ್ರಾ ಮಾಡಿದ್ದೆ ಅಂತ ನಾನೆಲ್ಲಿ ಹೇಳ್ದೆ ಅಂದು ಅವತ್ತಿನ ಪೇಪರ್ ಕೈಗೆ ತೆಗೆದುಕೊಂಡು ಕೂತ್ರು. ಪೋಲೀಸು ತಲೆ ಚಚ್ಚಿಕೊಂಡು ಜೀಪ್ ಹತ್ತಿದರು.

✲

ಅನುಭವ-2

ಮೇಲ್ಸ್ ಅಂಡ್ ಫೀಮೇಲ್ಸ್....!

- ಗುರು

ಜಾಲಹಳ್ಳಿಯಲ್ಲಿನ ಕಾರ್ಖಾನೆಗೆ ಸೇರಿದೆ ಅಂತ ಹೇಳಿದ್ದೆ ಅಲ್ಲವೇ? ಮನೆ ಬೆಂಗಳೂರಿನಲ್ಲಿಯೇ ಇದ್ದರೂ ಬೆಂಗಳೂರಿನಲ್ಲಿಯೇ ನನ್ನ ಪೂರ್ಣ ವಿದ್ಯಾಭ್ಯಾಸಗಳು ನಡೆದಿದ್ದರೂ ನಾನು ಜಾಲಹಳ್ಳಿ ನೋಡಿರಲಿಲ್ಲ! ಜಾಲಹಳ್ಳಿ ಮಿಲಿಟರಿಯವರಿಗೆ ಸೇರಿದ್ದು ಎಂಬ ಭಾವನೆ ಇತ್ತಾದರೂ ಅಲ್ಲಿಯೇ ಎಚ್.ಎಮ್.ಟಿ ಯೂ ಇದ್ದು ಅದಕ್ಕೆ ನಮ್ಮ ಮನೆಯಿಂದಲೇ ಇಬ್ಬರು ದುಡಿಯಲು ಹೋಗುತ್ತಿದ್ದುದರಿಂದ ಅಲ್ಲಿ ನಾಗರಿಕ ಸೇವೆಗೆ ಸಂಬಂಧಪಟ್ಟ ಕಛೇರಿಗಳೂ ಇರಬಹುದು ಅಂತ ತಿಳಿದುಕೊಂಡಿದ್ದೆ. ಜಾಲಹಳ್ಳಿಗೆ ಹೋಗುವ ದಾರಿಯನ್ನು ಈ ಮೊದಲೇ ಅರಿತಿದ್ದೆನಾದ್ದರಿಂದ ಮತ್ತೆ ಯಾರನ್ನೂ ಜಾಲಹಳ್ಳಿ ಎಲ್ಲಿದೆ ಎಂದು ಕೇಳದೇ ಅಪಾಯಿಂಟ್‌ಮೆಂಟ್ ಆರ್ಡರನ್ನು ಕೈಲಿ ಹಿಡಿದು ಕಾರ್ಖಾನೆ ಸೇರಿದೆ. ಕೆಲಸಕ್ಕೆ ಸೇರಿಸಿಕೊಳ್ಳುವ ಮೊದಲು ಸಂಪೂರ್ಣ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕು - ಈಗ ಈ ವ್ಯವಸ್ಥೆ ಬೇರೆ ಉದ್ದಿಮೆಗಳಲ್ಲಿ ಅಂದರೆ ಎಮ್ ಎನ್ ಸೀ ಗಳಲ್ಲಿ ಇದ್ದಹಾಗಿಲ್ಲ. ಆದರೆ ಕಾರ್ಖಾನೆಗಳಲ್ಲಿ ಅದರಲ್ಲೂ ಸರ್ಕಾರೀ ಕಾರ್ಖಾನೆಗಳಲ್ಲಿ ಇದು - ವೈದ್ಯಕೀಯ ತಪಾಸಣೆ - ಆಗಲೇಬೇಕು.

ತಪಾಸಣೆಗಾಗಿ ಬಿಇಎಲ್ ನ ಆಸ್ಪತ್ರೆಗೆ ನಮ್ಮನ್ನು ಕಳಿಸಿದರು. ಸುಮಾರು ನಲವತ್ತು ಜನ ನನ್ನ ಹಾಗೆಯೇ ಬಿಎಸ್ಸಿ ಮಾಡಿದ್ದವರು ನನ್ನ ಜತೆಗೆ ಆಯ್ಕೆಯಾಗಿದ್ದರು. ರಕ್ತ ಮಲ ಮೂತ್ರ ಪರೀಕ್ಷೆಗಳ ನಂತರ ವೈದ್ಯರ ಬಳಿ ಹೋದೆವು. ಅಲ್ಲಿ ವೈದ್ಯರು ಬಟ್ಟೆ ತೆಗೀರೀ ಅಂದಾಗ ನಮಗೆ ಆಶ್ಚರ್ಯ-ಬಟ್ಟೆ ಯಾಕೆ ಬಿಚ್ಚಬೇಕು ಅಂತ ! ಕೆಲವರು ಬೆತ್ತಲಾಗಲು ಒಪ್ಪಲೂ ಇಲ್ಲ. ಮೆಡಿಕಲ್ ಟೆಸ್ಟ್ ಅಂದರೆ ನಿಮ್ಮ ಸಂಪೂರ್ಣ ತಪಾಸಣೆ ಆಗಲೇಬೇಕು. ನಾನು ಹೇಳಿದ ಹಾಗೆ ನೀವು ಕೇಳದೇ ಇದ್ದರೆ ತಪಾಸಣೆ ಆಗಿಲ್ಲ ಅಂತ ರೆಕಾರ್ಡ್ ಮಾಡಬೇಕಾಗುತ್ತೆ. ಕೆಲಸ ಕಳೆದುಕೊಳ್ತೀರಿ ಅಂತ ವೈದ್ಯರು ಹೆದರಿಸಿದ ಮೇಲೆಯೇ ಗೊಮ್ಮಟ ಆಗಿ ನಿಂತೆವು. ಕಿಬ್ಬೊಟ್ಟೆ ಮೇಲೆ ಕೈ ಇಟ್ಟು ಅವರು ಕೆಮ್ಮಿ ಅಂದಾಗ ನಮಗೆ ಮೈಯೆಲ್ಲಾ ನಾಚಿಕೆ.. ನಾಚಿಕೊಂಡೇ ಕೆಮ್ಮಿದ್ದೂ ಆಯಿತು. ಮುದುರಿ ಹೇಗೆ ನಿಂತಿದ್ದೆ ಅಂದರೆ ಮೊದಲೇ ಹೀಗೇ ಅಂತ ಗೊತ್ತಿದ್ದರೆ ಈ ಕೆಲಸಕ್ಕೇ ಬರ್ತಿರಲಿಲ್ಲ ಅನಿಸಿತ್ತು ! ಒಬ್ಬೊಬ್ಬರಿಗೇ ಈ ಪರೀಕ್ಷೆ ಆಗಿದ್ದು. ನಮಗೆ ಮಾತ್ರ ಹೀಗೆ ಬಟ್ಟೆ ಬಿಚ್ಚಿಸಿದ್ದಾರೆ ಅಂತ ನಮಗೆ ಗುಮಾನಿ. ಹೊರಗೆ ಬಂದ ನಂತರ ಮಿಕ್ಕವರ ಹತ್ತಿರ ಈ ವಿಷಯ ಮಾತನಾಡಿದಾಗ ಎಲ್ಲರಿಗೂ ಅದೇ ರೀತಿ ನಡೀತು ಅಂತ ತಿಳಿತು. ನಮ್ಮಲ್ಲಿ ಎಲ್ಲರಿಗೂ ಹೀಗೇ ಆಗಿದ್ದ ಮೇಲೆ ನಮ್ಮದೇನು ಹೆಚ್ಚುಗಾರಿಕೆ ಅನ್ನಿಸಿ ಮನಸ್ಸು ಹದಕ್ಕೆ ತಂದುಕೊಂಡೆ ! ಆದರೆ ಬಟ್ಟೆ ಬಿಚ್ಚಿಸಿದ್ದು ಯಾಕೆ ಅಂತ ಆಗ ನಮಗೆ ಯಾರಿಗೂ ಹೊಳೆದೇ ಇರಲಿಲ್ಲ. ಕೆಲಸಕ್ಕೆ ಸೇರಿ ಸುಮಾರು ದಿವಸ ಆದ ನಂತರ ನನ್ನ ಪರ್ಸನಲ್ ಆಫೀಸರ್ ಹತ್ತಿರ

ಈ ವಿಷಯ ಕೇಳಿದೆ. ಇದು ರೊಟೀನ್, ಎಲ್ಲರಿಗೂ ಹಾಗೇ ಮಾಡೋದೂ ಅಂದರು. ನಿಮಗೂ ಹಾಗೆಯೇನಾ ವೈದ್ಯಕೀಯ ತಪಾಸಣೆಯಾಗಿದ್ದು ಅಂತ ಆಶ್ಚರ್ಯ ವ್ಯಕ್ತಪಡಿಸಿದೆ. ಅವರು ನಕ್ಕರು - ಈವನ್ ಲೇಡೀಸುಗಳಿಗೂ ಕೂಡಾ ಹಾಗೇರೀ ವೈದ್ಯಕೀಯ ತಪಾಸಣೆ ನಡೆಸೋದೂ ಅಂದರು.

ಲೇಡೀಸು ಇದಕ್ಕೆ ಒಪ್ತಾರಾ ಸಾರ್? ಅಂತ ಪ್ರಶ್ನೆ ಹಾಕಿದ್ದೆ.

ಏನ್ರೀ ಹೀಗೆ ಕೇಳ್ತೀರಿ? ಪ್ರತಿದಿವಸ ಬೆತ್ತಲೆ ನಿಲ್ಲು ಅಂತ ಕೇಳ್ತಾರಾ? ಕೆಲಸಕ್ಕೆ ಬಂದ ನಂತರ ಇಲ್ಲಿನ ಕೆಲವು ರೂಲ್ಸಿಗೆ ನೀವು ಅಬೈಡ್ ಆಗಬೇಕಾಗುತ್ತೆ ಅಂದರು. ಇವರ ಹತ್ತಿರ ಮಾತನಾಡಿ ಪ್ರಯೋಜನ ಇಲ್ಲ ಅನಿಸಿ ತೆಪ್ಪಗಾದೆ. ಸುಮಾರು ವರ್ಷ ಕಳೆದ ನಂತರ ವೈದ್ಯರೊಬ್ಬರ ಹತ್ತಿರ ಈ ಬಗ್ಗೆ ಕೇಳಿದೆ ಈ ತರಹದ ಗೊಮ್ಮಟೇಶ್ವರನ ಪರೀಕ್ಷೆ ಯಾಕೆ ಬೇಕು ಅಂತ.

ವೈದ್ಯರು ಬಹಳ ಗಂಭೀರವಾಗಿ ಹೇಳಿದರು: ಮೇಲ್ ಕ್ಯಾಂಡಿಡೇಟ್ಸ್ ಅಂತ ತಗೊಂಡಿರ್ತಾರೆ, ಫೀಮೇಲ್ ಕ್ಯಾಂಡಿಡೇಟ್ಸ್ ಅಂತ ತಗೊಂಡಿರ್ತಾರೆ. ನೀವು ಮೇಲೋ ಫೀಮೇಲೋ ಅಂತ ಕನ್‌ಫರ್ಮ್ ಆಗಬೇಕಾದ್ದು ಒಂದು ಸಂಗತಿ ಮತ್ತು ಕೆಮ್ಮಿ ಅಂತ ಕೇಳೋದು ನಿಮಗೆ ಹರ್ನಿಯಾ ತೊಂದರೆ ಇಲ್ಲ ಅನ್ನುವುದನ್ನು ಖಾತ್ರಿ ಪಡಿಸುತ್ತೆ. ಸರ್ಕಾರಿ ಕಛೇರಿಗಳಲ್ಲಿ ಯೂನುಕ್‌ಗಳಿಗೆ (ಶಿಖಂಡಿಗಳಿಗೆ) ನೇಮಕಾತಿ ಪ್ರಾವಿಷನ್ಸ್ ಇರುಲ್ಲಾ ನೋಡೀ-ಅಂದರು! ಆಗ ಶಿಖಂಡಿಗಳು ಬೆಂಗಳೂರಿನಲ್ಲಿ ಅಷ್ಟು ಕಾಣಿಸಿಕೊಳ್ಳುತ್ತಿರಲಿಲ್ಲ ಮತ್ತು ಬರೀ ಬೊಂಬಾಯಿಯಲ್ಲಿ ಮಾತ್ರಾ ಅವರ ವಾಸವಿತ್ತು. ಹಾಗೆ ನೋಡಿದರೆ ಶಿಖಂಡಿಗಳನ್ನು ಕಣ್ಣಾರೆ ನಾನು ನೋಡಿದ್ದು ಬೆಂಗಳೂರು ಬೆಳೆದ ನಂತರವೇ. ಲೋಕಲ್ ಆಗಿ ಯಾರನ್ನಾದರೂ ಶಿಖಂಡಿ ಎಂದು ಜರೆಯಬೇಕಾದರೆ ಸೈಕಲ್ ಎಂದೋ, ಪೌನೇ ಆಟ್ ಎಂದೋ ಕೂಗುತ್ತಿದ್ದರು ಸ್ಲ್ಯಾಂಗ್ ಭಾಷೆಯಲ್ಲಿ. ಈ ಸಂಗತಿಯೂ ನಮ್ಮ ಗುಂಪಿನಲ್ಲಿ ಅಷ್ಟು ಚರ್ಚೆಯಾಗಿರಲಿಲ್ಲ! ಬೆಂಗಳೂರು ಬೆಳೆದ ಹಾಗೆ ಈ ಜನ ರಿಂಗ್‌ರೋಡುಗಳ ಆಸುಪಾಸಿನಲ್ಲಿ ಟ್ರಾಫಿಕ್ ಸಿಗ್ನಲ್ಲುಗಳ ಬಳಿ ಭಿಕ್ಷೆ ಬೇಡುತ್ತಾ ಕಾಣಲಾರಂಭಿಸಿದರು. ಅವರನ್ನು ನೋಡಿದ ಕೂಡಲೇ ಅಸಹ್ಯವಾಗಿ ನಗುವ ಜನರನ್ನು ಕಂಡು ಆಶ್ಚರ್ಯ ಪಟ್ಟಿದ್ದೇನೆ ಮತ್ತು ಜನ ಯಾಕೆ ಹೀಗಾಡುತ್ತಾರೆ ಅನಿಸಿದೆ. ಅವರ ಬಗ್ಗೆ ಹಲವಾರು ದೃಶ್ಯ ಚಿತ್ರಣಗಳು ನಮ್ಮ ಖಾಸಗಿ ವಾಹಿನಿಗಳಲ್ಲಿ ಮೂಡಿಬಂದವು. ಅವರ ಹಬ್ಬ ಹರಿದಿನಗಳನ್ನು ಕುರಿತು, ಅವರಲ್ಲಿ ಪದವಿಗಳಿಸಿರುವ ವಿದ್ಯಾವಂತರನ್ನು ಕುರಿತು, ಅವರ ವಾರ್ಷಿಕ ಸಮಾವೇಶ ಕುರಿತು ಅವರು ತಮ್ಮನ್ನು ಮಂಗಳ ದರ್ಶಿನಿ ಎಂದು ಕರೆದುಕೊಳ್ಳುವುದನ್ನು ಕುರಿತು... ಹೀಗೆ ಹಲವಾರು ಸಂಗತಿಗಳು ವಾಹಿನಿಗಳ ಮೂಲಕ ಮನೆ ಮನೆ ಸೇರಿದವು. ತಮಗಾಗಿ ಮತಚಲಾಯಿಸುವ ಹಕ್ಕನ್ನು ಈ ಗುಂಪು ಬೇಡಿದೆ ಎಂಬ ಸುದ್ದಿಯೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಈ ಗುಂಪಿನಿಂದ ಒಬ್ಬರು ಅಭ್ಯರ್ಥಿಯಾಗಿಯೂ ಸ್ಪರ್ಧಿಸಿದ್ದರು ಎನ್ನುವ ಸುದ್ದಿ ಈಚೆಗೆ (2010) ಓದಿದ್ದೇನೆ. ಬಹಳ ಲಘುವಾದ ಒಂದು ಕಥೆಯನ್ನು ಕೇಳಿದ್ದೇನೆ. ರಾಮ ವನವಾಸಕ್ಕೆ ಹೊರಟಾಗ ನಾಡಿನ ಜನರು ಅವನೊಡನೆ ತಾವೂ ಕಾಡಿಗೆ

ಬರುತ್ತೇವೆ ಎಂದು ಹೊರಟರಂತೆ. ರಾಮ ಅವರನ್ನು ಸಮಾಧಾನಪಡಿಸಿ ಹೆಂಗಸರು ಗಂಡಸರು ಇನ್ನು ತಮ್ಮ ತಮ್ಮ ಮನೆಗಳಿಗೆ ಹೋಗಿ ಎಂದು ಬೀಳ್ಕೊಟ್ಟನಂತೆ. ವನವಾಸ ಮುಗಿಸಿ ಆತ ಬಂದರೆ ಇನ್ನೂ ಹಲವಾರು ಜನ ಅಲ್ಲಿಯೇ ಇದ್ದರಂತೆ. ರಾಮ ಆಶ್ಚರ್ಯದಿಂದ ಯಾಕೆ ಇನ್ನೂ ಇಲ್ಲೇ ಇದ್ದೀರಿ ಅಂತ ಕೇಳಿದ. ಹೆಂಗಸರು ಗಂಡಸರು ಮನೆಗಳಿಗೆ ಹೋಗಿ ಅಂತ ನೀನು ಹೇಳಿದೆ. ನಾವು ಹೆಂಗಸರು ಗಂಡಸರು ಎರಡೂ ಅಲ್ಲ. ನಾವೇನು ಮಾಡಬೇಕು ಎಂದು ಅವರು ಕೇಳಿದರು ಅಂತೇನೋ ಕಥೆ ಇದೆ. ಇವರ ಅಸ್ತಿತ್ವ ಪುರಾಣಕಾಲದಿಂದಲೂ ಇದೆ ಎನ್ನಲು ಯಾರೋ ಈ ಕತೆ ಹೇಳಿರಬಹುದು. ತಾವು ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸುವ ಈ ಜನರನ್ನು ನೋಡಿದಾಗ ಸಾಮಾಜಿಕವಾಗಿ ನಾವು ಇನ್ನೂ ಅನೇಕ ಶತಮಾನಗಳ ಕಾಲ ಹಿಂದಿದ್ದೇವೆ ಎಂದು ಪ್ರೊ. ನಂಜುಂಡ ಸ್ವಾಮಿಯವರು ಹೇಳುತ್ತಿದ್ದ ಮಾತು ನೆನಪಿಗೆ ಬರುತ್ತದೆ.

ವೈದ್ಯರ ಬಳಿ ಮೆಡಿಕಲ್ ಎಕ್ಸಾಮಿನೇಷನ್ ಬಗ್ಗೆ ಕೇಳಿ ತಿಳಿದುಕೊಂಡೆನಲ್ಲಾ? ಇಂತಹ ಸಿಂಪಲ್ ಸಂಗತಿಯನ್ನ ಅವರ ಹತ್ತಿರ ಕೇಳಬಾರದಿತ್ತು, ನನ್ನನ್ನ ಅವರು ಪೆದ್ದ ಅಂದುಕೊಂಡರು ಅಂತ ಎರಡು ವಾರ ತಲೆ ಕೆಡಿಸಿಕೊಂಡೆ! ಮೆಡಿಕಲ್ ಪುಸ್ತಕ ಓದಿ ಈ ವಿಷಯ ಮೊದಲೇ ತಿಳಿದುಕೊಳ್ಳಬೇಕಿತ್ತು ಅಂತ ಆಗ ಅನಿಸಿಬಿಟ್ಟಿತು. ಆದರೆ ಮುಂದೆ ಯಾವುದೇ ಸಂಶಯಗಳು ಬಂದರೂ, ಈ ರೀತಿಯ ಸಂಶಯಗಳು ತಲೆಯೊಳಗೆ ಸೇರಿದಾಗಲೆಲ್ಲಾ ಮೊದಲು ಪುಸ್ತಕದ ಮೊರೆ ಹೋಗುವುದೂ ನಂತರ ಅರ್ಥವಾಗದನ್ನು ಕುರಿತು ತಿಳಿದವರನ್ನು ಕೇಳುವುದೂ ರೂಢಿಸಿಕೊಂಡೆ. ಹೀಗೆ ತಿಳಿದುಕೊಂಡ ವಿಷಯಗಳನ್ನು ನಿಮಗೆ ಹೇಳಿದರೆ ಇಂತಹ ಹುಚ್ಚರೂ ಇರುತ್ತಾರಾ ಅಂತ ನೀವು ವಂಡರ್ ಆಗಬಹುದು – ಆ ರೀತಿಯ ಹಲವಾರು ಸಂಗ್ರಹಗಳು ನನ್ನ ತಲೆಯಲ್ಲಿವೆ ! ಒಂದೇ ಒಂದು ಈ ರೀತಿಯ ಸ್ಯಾಂಪಲ್ ಸಂಗತಿ ಎಂದರೆ ಷರಟಿನ ಜೇಬು ಯಾವಾಗಲೂ ಎಡಭಾಗದಲ್ಲಿಯೇ ಇರುತ್ತಲ್ಲಾ ಯಾಕೆ ಎನ್ನುವುದು. ಸುಮಾರು ಪುಸ್ತಕಗಳು ಓದಿದ ನಂತರ, ಹಲವಾರು ಟೈಲರುಗಳ ಹತ್ತಿರ ಚರ್ಚಿಸಿದ ನಂತರ ಕಾರಣ ಹುಡುಕಿದ್ದೇನೆ. ಇದಕ್ಕೆ ಮುಖ್ಯ ಕಾರಣ ಬಹುಪಾಲು ಅಂದರೆ ಮೆಜಾರಿಟಿ ಜನ ಬಲಚರು (ರೈಟಿಸ್ಟುಗಳು!) ಮತ್ತು ಬಲಚರಿಗೆ ಅನುಕೂಲವಾಗುವ ಹಾಗೆಯೇ ಈ ಜೇಬುಗಳನ್ನೂ ಇರಿಸುತ್ತಾರೆ ಎಂಬುವುದು ! ಮೊದ ಮೊದಲು ಪ್ಯಾಂಟುಗಳಿಗೆ ಎಡ ಭಾಗದಲ್ಲಿ ಜೇಬುಗಳೇ ಇರುತ್ತಿರಲಿಲ್ಲ ಗೊತ್ತೇ? ಈಗಲೂ ಖಾದಿ ಬೋರ್ಡ್‌ನ ಪೈಜಾಮಕ್ಕೆ ಎಡಭಾಗದಲ್ಲಿ ಜೇಬೇ ಇರುಲ್ಲ! ಎಡಚರು (ಲೆಫ್ಟಿಸ್ಟುಗಳು!) ಷರಟಿನ ಎಡಭಾಗದ ಜೇಬಿಗೆ ಕೈ ಹಾಕಲು ಎಷ್ಟು ಕಷ್ಟ ಪಡುತ್ತಾರೆ ಎಂದು ಗಮನಿಸಿದ್ದೀರಾ? ಒಮ್ಮೆ ಗಮನಿಸಿ! ಎಡಚರ ಬಗ್ಗೆ ಅನುಕಂಪ ಹುಟ್ಟುತ್ತದೆ. ಇನ್ನೊಂದು ತಮಾಷೆ ಗೊತ್ತಾ? ಪಿಕ್ ಪಾಕೆಟ್ ವೃತ್ತಿಯಲ್ಲಿ ಎಡಚರು ಬರೀ ಶೇ. ಒಂದರಷ್ಟು ಮಾತ್ರವಂತೆ ಇರುವುದು! ಎಡಚರಿಗೆ ಇದೊಂದು ಕಾಂಪ್ಲಿಮೆಂಟು ! ಕೃಷ್ಣ ಗೀತೆಯಲ್ಲಿ ಹೇಳಿದನಂತೆ-ಸಂಶಯಾತ್ಮಾ ವಿನಶ್ಯತಿ-ಅಂತ. ಅದರ ಅರ್ಥ ನನಗೆ ತಿಳೀದು . ಈ ಮನೋಧರ್ಮ ನನಗೆ ಅನುಭವ ಕಲಿಸಿದ ಪಾಠ ಎಂದು ನಂಬಿದ್ದೇನೆ ! ಇನ್ನು ಮುಂದೆ ಹೋಗಲಾ? ಕಾರ್ಖಾನೆಗಳಿಗೋ ಆಫೀಸುಗಳಿಗೋ ಹೊಸಬ ಸೇರಿದ ಹಾಗೆಯೇ

ಅವನನ್ನೊಂದು ಮೈಂಡ್ ಸೆಟ್ ಅನ್ನು ವ್ಯವಸ್ಥೆ ರೂಪಿಸಿಬಿಡುತ್ತದೆ. ಇದು ನಮ್ಮ ಅರಿವಿಗೆ ಬಂದೇ ಇರುವುದಿಲ್ಲ. ಈ ರೀತಿಯ ಒಂದು ಮೈಂಡ್ ಸೆಟ್ ಹೇಗೆ ನಮಗೆ ರೂಢಿಯಾಯಿತು ಎಂದು ನಿಮಗೆ ವಿವರಿಸಲೇಬೇಕು. ಎಲ್ಲಾ ಕಾರ್ಖಾನೆಗಳಿಗೂ ಮುಖ್ಯವಾಗಿ ಒಂದೇ ಬಾಗಿಲು ಇರುತ್ತವೆ. ಹಲವಾರು ಬಾಗಿಲುಗಳು ಇದ್ದರೆ ನಿಯಂತ್ರಣ ಕಷ್ಟ ಎಂದು ಹೀಗೆ ಮಾಡಿಕೊಂಡಿರುತ್ತಾರೆ. ಒಂದೇ ಬಾಗಿಲಿನ ಮೂಲಕ ಹಿರಿಯ ಅಧಿಕಾರಿಗಳು ಮತ್ತು ಆಗತಾನೇ ಸೇರಿರುವ ಕಾರ್ಮಿಕರು ಒಳಹೋಗುವುದು ಹೊರಬರುವುದು ತರವೇ? ದೊಡ್ಡವರ ಮರ್ಯಾದೆಗೆ ಕುಂದು ಅಲ್ಲವೇ? ಒಂದು ಪರ್ಯಾಯ ವ್ಯವಸ್ಥೆಯೂ ಇರುತ್ತೆ- ಅಧಿಕಾರಿಗಳಿಗೆ ಮುಖ್ಯದ್ವಾರ, ಅದರ ಪಕ್ಕ ಒಂದು ಚಿಕ್ಕ ಬಾಗಿಲು-ಇದರ ಮೂಲಕ ಕೆಲಸಗಾರರು ಒಳಹೊರ ಓಡಾಟ ನಡೆಸಬೇಕು. ಮೊದಲನೇ ದಿವಸ ನಮ್ಮನ್ನು ಒಳಗೆ ಬಿಡಬೇಕಾದರೆ ಇಲ್ಲಿ ನಾವೆಲ್ಲಾ ಗುಂಪಾಗಿ ನಿಲ್ಲುವಂತೆ ಯೋಜಿಸಿದರು ಮತ್ತು ಕ್ಯೂ ನಲ್ಲಿ ಒಬ್ಬರಾದ ನಂತರ ಒಬ್ಬರು ಒಳಗೆ ಪ್ರವೇಶ ಪಡೆದೆವು. ಮುಂದಿನ ಮೂವತ್ತು ವರ್ಷ ನಾವು-ನೌಕರರು ಒಳಹೋಗಬೇಕಾದರೆ ಇದೇ ಬಾಗಿಲಿನಲ್ಲಿ ನೂಕುನುಗ್ಗಿ ಒಳಸೇರುತ್ತಿದ್ದೆವು. ಇದು ಹೇಗೆ ರೂಢಿಯಾಗಿಬಿಟ್ಟಿತು ಅಂದರೆ ಯಾವುದಾದರೂ ಕಾರಣಕ್ಕೆ ಮುಖ್ಯ ದ್ವಾರದ ಮೂಲಕವೇ ಹೋಗಿ ಅಂದರೂ ನಮ್ಮ ಮನಸ್ಸು ಅದಕ್ಕೆ ಸಿದ್ಧವಾಗುತ್ತಿರಲಿಲ್ಲ! ಮೈಂಡ್ ಸೆಟ್ ಎಷ್ಟು ಪ್ರಬಲವಾಗಿತ್ತು ಅಂದರೆ ಕೆಲಸಕ್ಕೆ ಸೇರಿದ ಮೂವತ್ತು ವರ್ಷದ ನಂತರ ಸೆಮಿ ಆಫೀಸರ್ ಅಂತ ಆದೆ. ಮುಖ್ಯ ದ್ವಾರದ ಮೂಲಕ ಹೋಗಬೇಕು – ಈ ಬಾಗಿಲಿನ ಮೂಲಕ ನಡೆದಾಡುವುದು ಮಾನಸಿಕವಾಗಿ ಸಿದ್ಧತೆಯಾಗಲೇ ಇಲ್ಲ!

✲

ಎಲ್ಲಕ್ಕೂ ರಾಜಕೀಯ ಬೆರೆಸಿ ಮಾತಾಡುತ್ತಾರೆ
ಎಲ್ಲ ಅಡಿಗೆಗೂ ಉಪ್ಪು ಬೆರೆಸಿ ರುಚಿ ಹೆಚ್ಚಿಸುವಂತೆ
ಬೇಯುತ್ತಲೇ ಇರಬೇಕು ರಾಜಕೀಯದ ಬೇಳೆ
ಇಲ್ಲದಿದ್ದರೆ ಅಧಿಕಾರ ಹೋಗಿಬಿಟ್ಟರೆ ಒಂದು ವೇಳೆ

***

ಮಠಾಧಿಪತಿಗಳಿಗೂ ರಾಜಕಾರಿಣಿಗಳಿಗೂ ನಂಟು
ಅವರನ್ನು ಬಿಟ್ಟು ಇವರಿಲ್ಲ ಇವರನ್ನು ಬಿಟ್ಟು ಅವರಿಲ್ಲ
ಮಠಕ್ಕೇಕೆ ರಾಜಕೀಯ ಎಂದು ಅರ್ಥವಾಗುವುದಿಲ್ಲ
'ಅರ್ಥ'ವಿಲ್ಲದೇ ಮಠವಿಲ್ಲ ಎಂದರೆ ಗೊತ್ತಾಗುತ್ತಲ್ಲ

– ಬೇಲೂರು ರಾಮಮೂರ್ತಿ

ಶ್ರೀ ರಾಮನವಮಿ... ಮಧುರ ನೆನಪುಗಳು

- ನಂದಿನಿ ಕಾಪಡಿ

ಯುಗಾದಿ ಹಬ್ಬ ಕಳೆಯುತ್ತಲೇ ಶ್ರೀ ರಾಮನವಮಿಯ ಸಂಭ್ರಮ ಶುರುವಾಗಿ ಬಿಡುತ್ತದೆ. ಅರವತ್ತರ ದಶಕದ, ಯುಗಾದಿ, ರಾಮ ನವಮಿಗಳ ಸಂಭ್ರಮವೇ ಬೇರೆ! ಬೇವು ಬೆಲ್ಲ ತಿಂದು, ಪಂಚಾಂಗಕ್ಕೆ ನಮಸ್ಕರಿಸಿ, ಹಿರಿಯರಿಗೆ ನಮಸ್ಕರಿಸಿ ಬೇಗ ಬೇಗ ತಿಂಡಿ ತಿಂದು ಆಡಲೆಂದು ಹೊರಗೆ ಓಡುತ್ತಿದ್ದೆವು. ಮಧ್ಯಾಹ್ನ ಬಿಸಿ ಬಿಸಿ ಒಬ್ಬಟ್ಟು – ಮಾವಿನಕಾಯಿ ಚಿತ್ರಾನ್ನದ ಊಟ ಭರ್ಜರಿಯಾಗಿ ಮಾಡಿ, ಮುಂದಿನ ವರುಷ ಹೇಗಿರಬಹುದೆಂದು ಗೆಳತಿಯರ ನಡುವೆ ಚರ್ಚೆ ಮಾಡುತ್ತಿದ್ದೆವು. ಎಂಟು ದಿನಗಳ ನಂತರ ರಾಮನವಮಿ. ಹೆಸರಿಗೆ ಉಪವಾಸ. ಬೆಳಿಗ್ಗೆ ಒಂಬತ್ತು ಗಂಟೆಗೆ ಪಾನಕ ಪನ್ಯಾರ. ನಂಜನಗೂಡಿನ ರಸಬಾಳೆ ಹಣ್ಣಿನ ರಸಾಯನ ತಿಂದ ಮೇಲೆ ಮಧ್ಯಾಹ್ನ "ಫಲಾಹಾರ'. ಫಲಾಹಾರ ಎಂದರೆ ಹಣ್ಣಿನ ಸೇವನೆ ಮಾತ್ರ ಖಂಡಿತವಾಗಿಯೂ ಇಲ್ಲ. ಹದವಾಗಿ ಬೆರೆಸಿದ ಗೊಜ್ಜವಲಕ್ಕಿ, ತುಂಬಾ ತುಪ್ಪ ಗೋಡಂಬಿ, ದ್ರಾಕ್ಷಿ, ಏಲಕ್ಕಿ, ಕೇಸರಿ ಹಾಕಿದ ಸಜ್ಜಿಗೆಯನ್ನು ಅಜ್ಜಿ ಮುತ್ತುಗದ ಎಲೆಯ ಮೇಲೆ ಬಡಿಸುತ್ತಿರುವಾಗಲೇ, ನಾವು ಮೊದಲಿಗೇ ಒಗ್ಗರಣೆ ಹಾಕಿದ ಕಡಲೇಕಾಯಿ, ಸಜ್ಜಿಗೆಯ ಗೋಡಂಬಿ, ದ್ರಾಕ್ಷಿ ಮೆಚ್ಚು ನಂತರ ಗಬಗಬನೇ ಮಿಕ್ಕದ್ದೆಲ್ಲಾ ತಿನ್ನುತ್ತಿದ್ದೆವು. ರಾತ್ರಿ ಸರಿಯಾಗಿ ಎಂಟು ಗಂಟೆಗೆ ಚಿತ್ರಾನ್ನ, ಮೊಸರನ್ನದ ಊಟ!

ಇಷ್ಟರೊಳಗೆ ಅಜ್ಜಿ ರಾಮದೇವರ ಗುಡಿಗೆ ಹೋಗಿ ಅಲ್ಲಿಂದ ಪ್ರಸಾದವೆಂದು ತಂದ, ಕೋಸಂಬರಿ ಮತ್ತು ಬಾಳೆ ಹಣ್ಣಿನ ರಸಾಯನವನ್ನು ಮಕ್ಕಳಿಗೆ ಹಂಚುತ್ತಿದ್ದರು. ಅದೇ ದಿನ ಕೋ ಆಪರೇಟಿವ್ ಬ್ಯಾಂಕಿನಲ್ಲಿ ಜನರಲ್ ಬಾಡಿ ಮೀಟಿಂಗ್ ಇಟ್ಟುಕೊಳ್ಳುತ್ತಿದ್ದರು. ತಾತ ಅಲ್ಲಿಂದ ಬರುವಾಗ ಎರಡು ದೊನ್ನೆಗಳ ತುಂಬಾ ಕೋಸಂಬರಿ, ರಸಾಯನ ತರುತ್ತಿದ್ದರು. ಎರಡೇ ನಿಮಿಷಗಳಲ್ಲಿ ನಾವು ಮಕ್ಕಳು ಅದನ್ನೂ ಖಾಲಿ ಮಾಡುತ್ತಿದ್ದೆವು.

ಸುಮಾರು ಹನ್ನೆರಡು ಗಂಟೆಯ ಹೊತ್ತಿಗೆ ನಮ್ಮ ಆಪ್ತ ನೆರೆಯವರಾದ ಪಂಡಿತರ ಮನೆಯಿಂದ ಕರೆ ಬರುತ್ತಿತ್ತು. ಭರ್ಜರಿಯಾಗಿ ರಾಮನ ತೊಟ್ಟಿಲಿಗೆ ಪೂಜೆ ಮಾಡಿ ಪ್ರಸಾದ ಹಂಚುತ್ತಿದ್ದರು. ಪಂಡಿತರು ಅಂತಿಂತಹವರಲ್ಲ, ದೊಡ್ಡ ಆಯುರ್ವೇದಾಚಾರ್ಯರು. ಅವರ ಮನೆಯ ಪ್ರಸಾದದ ವೈಖರಿಯೇ ಬೇರೆ. ಮೊದಲಿಗೆ ಎಲ್ಲರಿಗೂ ಶುಂಠಿ ಪುಡಿ ಬೆರೆಸಿದ ಸಕ್ಕರೆ ಹಂಚುವರು. ನಂತರ ಶುದ್ಧ ಕೇಸರಿ ಹಾಕಿದ ನಿಂಬೆ ಹಣ್ಣಿನ ಪಾನಕ. ಅದಕ್ಕೆ ಸಕ್ಕರೆಯ ಬದಲು ಕೆಂಪು ಕಲ್ಲುಸಕ್ಕರೆಯ ಪುಡಿ ಹಾಕಿರುತ್ತಿದ್ದರು. ನಂತರ ಹದವಾಗಿ ಬೆರೆಸಿದ ಹೆಸರು ಬೇಳೆ ಕೋಸಂಬರಿ. ವಾಯುದೇವರನ್ನು ಹೊರಗಿಡಲು ಹೆಚ್ಚಾಗಿಯೇ ಇಂಗು ಹಾಕಿ ಒಗ್ಗರಣೆ ಬಿಳಿಯ ಕಾಯಿ ತುರಿ. ಇದರೊಂದಿಗೆ ನಂಜನಗೂಡಿನ ಏಲಕ್ಕಿ ಬಾಳೆ ಹಣ್ಣಿನ ರಸಾಯನ ಇವೆಲ್ಲವನ್ನೂ ತಿಂದ ನಂತರ... ನಿಜವಾಗಿ ಹೇಳಬೇಕೆಂದರೆ ದೊನ್ನೆಗಳನ್ನು ಮನೆಗೆ ತೆಗೆದುಕೊಂಡು ಹೋಗಲು ಕೊಡುತ್ತಿದ್ದರು. ನಾವು ಮಕ್ಕಳ ಮಾತ್ರ ಅಲ್ಲಿಯೇ ಕಬಳಿಸಿ,

ತಾಯಿಯರಿಂದ ಕಣ್ಣು ಬಿಡಿಸಿಕೊಳ್ಳುತ್ತಿದ್ದೆವು! ನಂತರ ಕೇಸರಿ ಮಿಶ್ರಿತ ಬಾದಾಮಿ ಹಾಲು. ಹಾಲು ಕುಡಿದು, ಕಿರು ಬೆರಳನ್ನು ಲೋಟದ ತಳದ ತನಕ ತೂರಿಸಿ, ಕೆಳಗೆ ಸೇರಿದ್ದ ಬಾದಾಮಿ, ಕಲ್ಲುಸಕ್ಕರೆ ಪುಡಿಗಳನ್ನು ನೆಕ್ಕಿ ತಿಂದ ಮೇಲೆ ಮಾತ್ರ ನಮಗೆ ತೃಪ್ತಿ!

ಪಂಡಿತರ ಹೆಂಡತಿಗೆ ಹೃತ್ಪೂರ್ವಕ ಧನ್ಯವಾದ ಹೇಳಿ ನಮ್ಮ ತಾಯಂದಿರು ಎಲಡಿಕೆ ತೆಗೆದುಕೊಂಡು ಅರಿಶಿನ ಕುಂಕುಮವನ್ನಿಟ್ಟುಕೊಂಡು ಹೊರಗೆ ಬಂದು ನಮ್ಮನ್ನು "ಕಮಂಗಿಯ ತರಹ ಆಡಿದ್ದಕ್ಕೆ" ಗದರಿಸಿಕೊಳ್ಳುತ್ತಿದ್ದರು! ಯಾರಿಗೆ ಗಮನ ಅದರ ಮೇಲೆ? ಪಂಡಿತರ ಮನೆಯಲ್ಲಿ ಮಕ್ಕಳಿಗೋಸ್ಕರ ಕಡಲೆ ಹಿಟ್ಟಿನ ಪೊಟ್ಟಣ ಕೊಡುತ್ತಿದ್ದರು. ಅದನ್ನು ಬೇಗ ಬಿಡಿಸಿ ತಿನ್ನುವ ಆತುರ!

ಆ ದಿನಗಳ ಸವಿ ನೆನಪು ಬರುತ್ತಿದ್ದಂತೆ ಮನದಲ್ಲಿ ಸಂತಸವಾಗುತ್ತದೆ! ಮತ್ತೆ ಮತ್ತೆ ಶ್ರೀ ರಾಮನವಮಿ ಬರಲಿ ಎಂದು ಹೃದಯ ಕಾತರಿಸುತ್ತದೆ!

ವರುಷಗಳು ಕಳೆದು ಹೋಗಿವೆ. ನನ್ನೊಂದಿಗೆ ಆಡಿ ನಲಿದಾಡುತ್ತಿದ್ದ ನನ್ನ ಜೊತೆ ಕೋಸಂಬರಿ, ರಸಾಯನ ಮೆಲ್ಲುತ್ತಿದ್ದ ನನ್ನ ಪ್ರೀತಿಯ ಗೆಳತಿ ಈಗ ನಕ್ಷತ್ರವಾಗಿಬಿಟ್ಟಿದ್ದಾಳೆ. ರಾತ್ರಿಯ ಹೊತ್ತು ಮಿನುಗುತ್ತಾ ನನ್ನನ್ನು ಆ ದೂರದ ಜಗತ್ತಿನಿಂದ ಮಾತನಾಡಿಸುತ್ತಾಳೆ!

ನನ್ನ ಮಕ್ಕಳಿಗೆ ಇದೆಲ್ಲಾ ಕೌತುಕ. ಅವರು ಶಾಲೆಗೆ ಹೋಗುತ್ತಿದ್ದಾಗಿನಿಂದ ಆತಂಕವಾದ ಪ್ರಾರಂಭವಾಗಿ ಶಾಲೆಯಲ್ಲಿ "ದೇವರು ತೀರ್ಥವೆಂದು ಏನನ್ನೂ ಕುಡಿಬೇಡಿ. ಅದರಲ್ಲಿ ವಿಷ ಹಾಕಿರಲೂ ಸಾಧ್ಯ"ವೆಂದು ಹೇಳಿಕೊಟ್ಟಿದ್ದರಿಂದ ದೇವರ ತೀರ್ಥ ಕುಡಿಯಲೂ ಹಿಂಜರಿಯುತ್ತಾರೆ.

ಯಾರು ಅರಿಶಿನ ಕುಂಕುಮಕ್ಕೆ ಕರೆದರೂ ಯಾರ ಮಕ್ಕಳೂ ಹೋಗುವುದಿಲ್ಲ, ಹೋಂ ವರ್ಕ್ ಮಾಡಬೇಕು, ನಾಳೆಯೇ ಯೂನಿಟ್ ಟೆಸ್ಟ್ ಹೀಗೆ ಏನೇನೋ ಕಾರಣಗಳು!

ದೊನ್ನೆಗಳ ಜಾಗದಲ್ಲಿ ಪ್ಲಾಸ್ಟಿಕ್ ಬಟ್ಟಲುಗಳು ಬಂದಿವೆ. ದೇವಸ್ಥಾನದಲ್ಲಿ ಪ್ರಸಾದ ತಿಂದು ಅಲ್ಲಿಯೇ ಆ ಪ್ಲಾಸ್ಟಿಕ್ ಬಟ್ಟಲುಗಳನ್ನು ಬಿಸಾಕಿ ಹೋಗುತ್ತಾರೆ ಜನ. ರಾಮನ ಭಜನೆಯ ಬದಲು ಕರ್ಕಶ ಸಿನಿಮಾ ಹಾಡುಗಳ ಧ್ವನಿ ಸುರಳಿಗಳು ಕೂಗಿಕೊಳ್ಳುತ್ತವೆ. ಶ್ರೀರಾಮನೆಂದು ಕಣ್ಣು ಮುಚ್ಚಿಕೊಂಡರೆ ಅರುಣ್ ಗೋವಿಲ್‌ನ ಮುಖ ಮುಂದೆ ಬರುತ್ತದೆ. ಜಯ ಹನುಮಾನ್ ಎಂದುಕೊಂಡ ತಕ್ಷಣ ದಾರಾ ಸಿಂಗ್ ಮನದ ಕಣ್ಣೆದುರು ಪ್ರತ್ಯಕ್ಷನಾಗಿಬಿಡುತ್ತಾನೆ.

ಶ್ರೀ ರಾಮನವಮಿ ಉಪವಾಸಕ್ಕೆಂದೇ ವಿಶೇಷವಾಗಿ ಮಾಡಿರುವ "ಫರಾಳೀ ಕಟ್ಲೆಟ್, ಫರಾಳೀ ಪೀಟ್ಜಾ"ಗಳ ಜಾಹೀರಾತನ್ನು ಅಹಮದಾಬಾದಿನಲ್ಲಿ ನೋಡಿ ಅಚ್ಚರಿಗೊಂಡೆ ನಾನು. 'ಫರಾಳೀ' ಅಂದರೆ 'ಫಲಹಾರಿ' ಶಬ್ದದ ಅಪಭ್ರಂಶ. ನಮ್ಮ ಭಾಷೆಯಲ್ಲಿ ಉಪವಾಸದ ವಸ್ತು ಎಂದು ಹೇಳಬಹುದು. ಸ್ವಲ್ಪ ದೂರದಲ್ಲಿ ನಮ್ಮ ಗುಜರಾತೀ ಭಾಯಿಯ ಇನ್ನೊಬ್ಬ ತಮ್ಮ "ಫರಾಳೀ ಪಾಸ್ಟಾ" ಮತ್ತು "ಫರಾಳೀ ಮೆಕ್ಸಿಕನ್ ಚಟಪಟಾ" ಎಂದು ಜಾಹೀರಾತು ಹಾಕಿದ್ದ.

ನಾನು ಕೌತುಕದಿಂದ ಎರಡೂ ಕಡೆ ಹೋಗಿ ವಿಚಾರಿಸಿದೆ. ಗುಜರಾತಿನಲ್ಲಿ ವಿಶೇಷವಾಗಿ

ಉಪವಾಸಕ್ಕೆಂದು ತೆಗೆದುಕೊಳ್ಳುವ ಸಿಂಗಾಡಾ ಹಿಟ್ಟು ಸಾಬೂದಾನಾ ಹಿಟ್ಟು ಮೊದಲಾದವುಗಳಿಂದ ಮಾಡಿದ್ದು ಎಂದು ಕನಕಲಾಲ್ ಭಾಯಿ ತುಂಬಾ ಪ್ರೀತಿಯಿಂದ ಹೇಳಿದ. ಸೈಂಧವ ಲವಣ, ಜೀರಿಗೆ ಪುಡಿ ಮುಂತಾದವುಗಳಿಂದ ಮಾಡಿರುವ ಈ ವಸ್ತುಗಳನ್ನು ಬರೀ ಮಕ್ಕಳೇ ಯಾಕೆ ಮುದುಕರೂ ತಿನ್ನಬಹುದು ಎಂದು ವಿವರಿಸಿದ. ನನ್ನ ಕುತೂಹಲ ನೋಡಿ ಒಂದು ದೊಡ್ಡ ಲೋಟ ಮಜ್ಜಿಗೆಯನ್ನು ಕುಡಿಯಲು ಕೊಟ್ಟು ನಿಮ್ಮ ಆಶೀರ್ವಾದ ಸಾಕು ಎಂದು ಕೊಟ್ಟಿದ್ದ ದುಡ್ಡನ್ನು ಹಿಂತಿರುಗಿಸಿದ.

ಮನೆಗೆ ಬಂದೆ. ಅಯೋಧ್ಯೆಯಲ್ಲಿ ಶ್ರೀ ರಾಮನವಮಿ ನಿಮಿತ್ತ ಪರಿಸ್ಥಿತಿ ಎಷ್ಟು ಬಿಗಡಾಯಿಸಿದೆ ಎಂದು ದೂರದರ್ಶನ ಬಿತ್ತರಿಸುತ್ತಿತ್ತು.

ಚಿಪ್ಸ್ ತಿನ್ನುತ್ತಿದ್ದ ನನ್ನ ಮಗಳು "ರಾಮ ನವಮಿ ಎಂದರೆ ಶ್ರೀ ರಾಮನ ಹುಟ್ಟಿದ ದಿನವೇ?" ಎಂದು ಕೇಳಿದಳು. "ಹೌದಮ್ಮಾ" ಎಂದೆ. ತಕ್ಷಣ ನಕ್ಕು "ಒಂದೇ ದಿನದಲ್ಲಿ ಶ್ರೀ ರಾಮನು ವಯಸ್ಕನಾಗಿಬಿಟ್ಟನೆ? ಅದು ಹೇಗೆ?" ಎಂದು ಕೇಳಿದಳು.

ಪ್ರಶ್ನೆ ಅರ್ಥವಾಗಲಿಲ್ಲ. ಮಗಳು ಓದುತ್ತಿದ್ದ ಪೇಪರನ್ನು ತೋರಿಸಿ "ನಾಳೆ ಎಲ್ಲಾ ಕಡೆ ಸೀತಾ ಕಲ್ಯಾಣ" ಎಂದು ದೊಡ್ಡ ಕಾರ್ಯಕ್ರಮ. "ಈಗ ಹುಟ್ಟಿದ ಮಗು ನಾಳೆ ಹೇಗೆ ದೊಡ್ಡದಾಗಿ ಬಿಡುತ್ತದೆ?" ಎಂದಳು.

ನನಗೆ ಪಿತ್ತ ನೆತ್ತಿಗೇರಿತು. ನಿಮ್ಮ ಜನಾಂಗ ಮತ್ತು ನಮ್ಮ ಜನಾಂಗಕ್ಕೆ ಎಷ್ಟು ವ್ಯತ್ಯಾಸ ಎಂದೆಲ್ಲಾ ಹೇಳಿ ನನ್ನ ಬಾಲ್ಯದ ರಾಮ ನವಮಿ ವಿವರಿಸಿದೆ. ದೇವರು ಎಂದುಬಿಟ್ಟ ಮೇಲೆ ಅದರ ಮೇಲೆ ವಾದ-ವಿವಾದವಿಲ್ಲ. ವಿತಂಡ ವಾದವಂತೂ ಇಲ್ಲವೇ ಇಲ್ಲ.

"ನಂಜನಗೂಡು ರಸಬಾಳೆ ಹಣ್ಣು - ಎಂದರೆ ಭೌಗೋಳಿಕ ಪೇಟೆಂಟ್ ಸಿಕ್ಕಿದೆಯಲ್ಲಾ. ಅದೇ ತಾನೆ?" ಎಂದು ಮಗಳು ಕೇಳಿದಾಗ ಹಿರಿ ಹಿರಿ ಹಿಗ್ಗಿದೆ ನಾನು. ಮನ ಪ್ರಸನ್ನವಾಯಿತು.

ಪರವಾಗಿಲ್ಲ ನಂಜನಗೂಡಿನ ರಸಬಾಳೆ ಹಣ್ಣಿನ ಸವಿ ಗೊತ್ತಿಲ್ಲದಿದ್ದರೂ ಇಷ್ಟರಮಟ್ಟಿಗೆ ನಂಜನಗೂಡಿನ ನಮ್ಮ ಬಾಳೆ ಹಣ್ಣಿನ ಬಗ್ಗೆ ಇವಳಿಗೆ ಗೊತ್ತಿರುವುದಲ್ಲ. ಅಷ್ಟೇ ಸಾಕು ಎಂದುಕೊಂಡೆ. ಬೇಗನೇ ಒಳಗೆ ಹೋಗಿ ಮನೆಯಲ್ಲಿರುವ ಬಾಳೆ ಹಣ್ಣನ್ನೇ ಹಾಕಿ ರಸಾಯನ ಮಾಡಿ, ಕೋಸಂಬರಿ ಮಾಡಿ ಶ್ರೀ ರಾಮಜಯಂ ಎಂದು ಪ್ರಾರ್ಥಿಸಿ "ಫಲಹಾರ"ಕ್ಕೆ ಕುಳಿತೆ.

✲

ಬಟ್ಟೆಯ ಬೆಲೆಗಳ ಮೇಲಿತ್ತು
ಅರ್ಧ ಕಡಿತ
ತಂದು ಹಾಕಿಕೊಂಡಾಗ ಮೈ
ಪೂರ್ತಿ ಕಡಿತ

- ಮದ್ದೂರ್ಸಿದ್ದ



ಕೇವಲ ಮೂರು ತಿಂಗಳುಗಳ ಹಿಂದೆ ಒಡೆದು ಹನ್ನೆರಡು ಹೋಳುಗಳಾಗುವ ಸ್ಥಿತಿಯಲ್ಲಿದ್ದ ಕರ್ನಾಟಕ ಬಿಜೆಪಿ ಅಲ್ಪಾವಧಿಯಲ್ಲಿಯೇ ಚೇತರಿಸಿಕೊಂಡು ಬೃಹತ್ ಬೆಂಗಳೂರು ಮಹಾಪಾಲಿಕೆಯಲ್ಲಿನ ಒಟ್ಟು 198 ಕ್ಷೇತ್ರಗಳ ಪೈಕಿ 112 ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಗೆಲ್ಲಿಸಿದೆ. ಇದನ್ನು ನೋಡಿ ಬಿಜೆಪಿ ಕಟ್ಟಾ ಸಮರ್ಥಕರಿಗೇ ಆಶ್ಚರ್ಯವಾಗಿದೆಯಂತೆ. ಸೋಲುವ ಭಯದಲ್ಲಿ ಚುನಾವಣೆಗಳನ್ನು ಮುಂದೆ ಹಾಕಲು ಹಾಕಲು ಹರಸಾಹಸ ಮಾಡುತ್ತಿದ್ದ ಪಕ್ಷ ಈ ಮಟ್ಟದಲ್ಲಿ ಗೆದ್ದಿರುವುದಕ್ಕಾಗಿ ತನ್ನನ್ನು ವಿರೋಧಿಸುತ್ತಿರುವ ಪಕ್ಷಗಳಿಗೆ ಕೃತಜ್ಞತೆಯನ್ನು ತಿಳಿಸಬೇಕೆಂದು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ. ಹಿರಿಯ ಗೌಡರ ಅವರ ಕುಮಾರದ್ವಯರ ನೆಗೆಟಿವ್ ಧೋರಣೆಗಳನ್ನು ಬೆಂಗಳೂರು ನಾಗರಿಕರೂ ಈಗಾಗಲೇ ಎರಡು ಬಾರಿ ತಿರಸ್ಕರಿಸಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿತ್ತು. ಆದರೆ ಮಹಾಪಾಲಿಕೆಯ ಆಡಳಿತ ವಹಿಸಿಕೊಳ್ಳಬಹುದಾಗಿದ್ದ ಕಾಂಗ್ರೆಸ್ ಪಕ್ಷಕ್ಕೆ ಬೈಗುಳವೊಂದೇ ಬಂಡವಾಳವಾಗಿರುವ ಜೆಡಿಎಸ್ ರೋಲ್‌ಮಾಡಲ್ ಆದದ್ದು ಆಶ್ಚರ್ಯ. ನಮ್ಮ ರಾಜ್ಯದ ಮತದಾರರಿಗೆ ಈಗಾಗಲೇ ಬಿಜೆಪಿ ಮೇಲೆ ಕೋಪವಿದೆ. ಅದಕ್ಕೆ ಪರ್ಯಾಯಗಳನ್ನು ಹುಡುಕುತ್ತಿದ್ದಾರೆ. ಆದರೆ ಆ ಪರ್ಯಾಯ ಎಲ್ಲರನ್ನೂ ಎಲ್ಲವನ್ನೂ ಅದರಲ್ಲೂ ಮುಖ್ಯವಾಗಿ ಬಿಎಸ್‌ವೈ, ಹಾರನಹಳ್ಳಿ ಈಶ್ವರಪ್ಪರಂತಹವರನ್ನು ಅತ್ಯಂತ ಅಸಹ್ಯ ಭಾಷೆಯಲ್ಲಿ ಬಯ್ಯುವ ಪಕ್ಷವಲ್ಲ ಎನ್ನುವುದನ್ನು ಕಾಂಗ್ರೆಸ್ ಅರ್ಥಮಾಡಿಕೊಳ್ಳುವವರೆಗೂ ಬಿಜೆಪಿಗೆ ಬಾರಾ ಖೂನ್ ಮಾಫ್ ಎಂದು ಬಲ್ಲವರು ಹೇಳುತ್ತಿದ್ದಾರೆ.

★★★

ಮಾರ್ಚ್ - ಏಪ್ರಿಲ್ ತಿಂಗಳುಗಳ 45 ದಿನಗಳಲ್ಲಿ, ಪ್ರತಿಯೊಂದೂ ಸರಾಸರಿ 200 ನಿಮಿಷಗಳ ಸೀಮಿತಾವಧಿಯಲ್ಲಿ ಮುಗಿಯುತ್ತಿದ್ದ ಪ್ರತಿ ನಿಮಿಷವೂ ನಾಟಕೀಯ ಬೆಳವಣಿಗೆಗಳ action packed action ಇರುವ ಒಟ್ಟು 56+4 ಟ್ವೆಂಟಿ-20 ಕ್ರಿಕೆಟ್ ಪಂದ್ಯಗಳ ಐಪಿಎಲ್ ಮೂರನೆಯ ಆವೃತ್ತಿ ಈಗ ಮುಗಿದಿದೆ. ಪ್ರತಿ ದಿನ ಪ್ರತಿಪಂದ್ಯದಲ್ಲೂ ಪ್ರತಿ ಕ್ಷಣವೂ ಬೌಂಡರಿ ಸಿಕ್ಸರುಗಳನ್ನು ಬಾರಿಸಿದವರ, ಐವತ್ತು ನೂರು ರನ್ನುಗಳನ್ನು ಪೇರಿಸಿದವರ, ವಿಕೆಟ್ ಕೆಡವಿದವರ, ಕೆಡುವುದನ್ನು ಚೂರರಲ್ಲಿ ತಪ್ಪಿಸಿಕೊಂಡವರ, ಕಷ್ಟದ ಕ್ಯಾಚನ್ನು ಹಿಡಿದವರ, ಸುಲಭದ ಕ್ಯಾಚನ್ನು ಬಿಟ್ಟವರ ಮುಖಚಹರೆಗಳಲ್ಲಿ ಅವರುಗಳ ಬಾಯಿಯಿಂದ ಹೊರಡುತ್ತಿದ್ದ ಉದ್ಗಾರಗಳಲ್ಲಿ ನಾವು ಕುವೆಂಪು ಕುಮಾರವ್ಯಾಸ ಭಾರತದಲ್ಲಿ ಕಂಡ ಘಟನೆಗಳ ಪ್ರತಿಧ್ವನಿಯನ್ನು ಕಾಣಬಹುದಾಗಿತ್ತು. ಇಲ್ಲೂ ಪಟುಭಟರಾರ್ಭಟ, ಗದೆಗಳ ಸಂಘಟನೆ, ರಥಚಕ್ರಧ್ವನಿ ಚೀತ್ಕಾರ, ಸಾಯ್ವರ ಶಾಪ, ಬೀಳ್ವರ ತಾಪ, ನಸು ಸೋತಿರುವವರ ಕೋಪ, ನೆರೆ ಗೆದ್ದಿಹರಾಟೋಪ, ಕೆನೆಯುವ ಕುದುರೆಗಳ (ಕೆಲವು ಕತ್ತೆಗಳ) ಹೇಷಾರವ, ಇವೆಲ್ಲಾ ನಮ್ಮ ಮೈಗಳಲ್ಲೂ ಮಿಂಚಿನ ಹೊಳೆ ತುಳುಕಾಡಿಸುತ್ತಿತ್ತು. ಈ ಐಪಿಎಲ್ ಮಹಾಭಾರತದ ಪಾತ್ರಧಾರಿ ಆಟಗಾರರಲ್ಲಷ್ಟೇ ಅಲ್ಲ ಒಟ್ಟು ಪಂಗಡಗಳ ಆಟದಲ್ಲೂ ಇದೇ

ರೀತಿಯ ಅದ್ಭುತ ನಾಟಕವಿತ್ತು. ನಮ್ಮೂರಿನ ಹೆಸರು ಹೊತ್ತ ನಮ್ಮ ಕುಂಬ್ಳೆ, ದ್ರಾವಿಡ್, ಉತ್ತಪ್ಪ, ವಿನಯ್‌ಕುಮಾರ್‌ಗಳಿದ್ದ ಪಂಗಡದ ಆಟದಲ್ಲೇ ನೋಡಿ. ಎಷ್ಟು ವೈವಿಧ್ಯ! ಒಂದು ದಿನ ಪರಾಕ್ರಮದ ತುತ್ತತುದಿ, ಮತ್ತೊಂದು ದಿನ ಅಧಃಪಾತಾಳ. ಒಂದು ಬಾರಿ ಇದು ಈ ಭೂಲೋಕದಲ್ಲ ಎನ್ನಿಸುವಂತಹ ಕ್ಯಾಚ್ ಪಕಡ್. ಇನ್ನೊಂದು ಬಾರಿ ತಾನಾಗೇ ಜೇಬಿನೊಳಗೆ ಹೋಗಿ ಕೂತುಕೊಳ್ಳುತ್ತಿದ್ದ ಕ್ಯಾಚನ್ನು ಭೂತಾಯಿಗೆ ಮಹಾ ನೈವೇದ್ಯವಾಗಿ ಅರ್ಪಣೆ! ಒಂದು ದಿನ ಎರಡೇ ಓವರುಗಳಲ್ಲಿ ನಲ್ವತ್ತು ರನ್. ಮತ್ತೊಂದು ದಿನ ಐದು ಓವರುಗಳಲ್ಲಿ ಹದಿನೈದು ರನ್ನುಗಳನ್ನು ಹೊಡೆಯಲಾರದೆ ಹ್ಯಾಪ್‌ಮೋರೆ. ಒಂದು ದಿನ ಸೋಲಿನ ದವಡೆಯಿಂದ ಬಿಡಿಸಿಕೊಂಡ ವಿಜಯದ ಸಂಭ್ರಮ. ಮತ್ತೊಂದು ದಿನ ಗೆಲುವಿನ ಹೊಸ್ತಿಲಲ್ಲಿ ಅನಾಮತ್ತು ಮೂರು ಪಲ್ಟಿ. ಮೊದಲ ಹಂತದ ಕೊನೆಯಲ್ಲಿ ಎಂಟರಲ್ಲಿ ನಾಲ್ಕನೆಯ ಸ್ಥಾನ ಪಡೆದ ನಮ್ಮ ಪಂಗಡ ಗೆದ್ದು ಸೋತಿತೋ ಅಥವ ಸೋತು ಗೆದ್ದಿತೋ? ಇನ್ನೂ ನನಗೆ ಗೊತ್ತಾಗಿಲ್ಲ. ಅಂದಂದಿನ ಫಲಿತಾಂಶ ಏನಾದರಾಗಲಿ ಈ ಸರಣಿಯ ಪ್ರತಿ ಪಂದ್ಯ ನೇರ ಪರೋಕ್ಷ ಪ್ರೇಕ್ಷಕರಿಗೆ ಅದ್ಭುತ ಮನರಂಜನೆ ಕೊಟ್ಟಿತು ಎನ್ನುವುದರಲ್ಲಿ ಏನು ಅನುಮಾನವಿಲ್ಲ.

ಕು.ಕ.

★★★

ಹಿಂದಿನ ಐಪಿಎಲ್ ಪಂದ್ಯಗಳಲ್ಲಿ ಆಕ್ಷನ್ - ನಾಟಕೀಯ ಘಟನೆಗಳೆಲ್ಲಾ ಕ್ರಿಕೆಟ್ ಮೈದಾನಗಳಿಗೆ ಸೀಮಿತವಾಗಿತ್ತು. ಆದರೆ ಈ ಐಪಿಎಲ್ 3ರಲ್ಲಿ ಮುಂದಿನ ಐಪಿಎಲ್‌ನಲ್ಲಿ ಭಾಗವಹಿಸಲು ಬಯಸುವವರ ನೂಕುನುಗ್ಗಲಾಟದಿಂದ ಆಕ್ಷನ್ ಕ್ರಿಕೆಟ್ ಮೈದಾನಗಳಿಂದ ಕಂಪೆನಿಗಳ ಬೋರ್ಡ್ ರೂಮುಗಳು, ರಾಜಕೀಯ ಪಕ್ಷಗಳ ವೇದಿಕೆಗಳು ಇವುಗಳಿಗಿಂತ ಮಿಗಿಲಾಗಿ ಲೋಕಸಭೆ, ರಾಜ್ಯಸಭೆಗಳಿಗೂ ವಿಸ್ತರಿಸಿದ್ದು ವಿಶೇಷ. ಕೊನೆಯ ಹಂತದಲ್ಲಿ ಮೈದಾನದಲ್ಲಿನ ಆಕ್ಷನ್‌ಗಿಂತ ಹೊರಗಿನ ಆಕ್ಷನ್ ಹೆಚ್ಚು ವರ್ಣರಂಜಿತವಾಗಿತ್ತು, ಹೆಚ್ಚು ಆಕರ್ಷಕವಾಗಿತ್ತು. ಐಪಿಎಲ್ ಎನ್ನುವ ಕ್ರೀಡಾಕೂಟವನ್ನು ಮೂರೇ ವರ್ಷಗಳಲ್ಲಿ ಒಂದು ಬಿಲಿಯನ್ ಡಾಲರ್ (ರೂ 4500 ಕೋಟಿ) ಬೇಬಿಯನ್ನಾಗಿ ಬೆಳೆಸಿದ ವ್ಯಕ್ತಿಯನ್ನು ಬಹಳ ಜನರು ಹೊಗಳಿದ್ದಾರೆ. ಅಷ್ಟು ದೊಡ್ಡ ಮೊತ್ತ ಇರುವ ಕಡೆ ರಾಜಕೀಯ ಪ್ರವೇಶಿಸದೆ ಇರಲು ಸಾಧ್ಯವೇ? ವಿಚಿತ್ರ ಹೆಸರುಗಳ ಎಂಟು ಪಂಗಡಗಳ ನಡುವಿನ ಆಟಕ್ಕೆ ಇನ್ನೆರಡು ಹೆಸರುಗಳನ್ನು ಸೇರಿಸುವ ನಾಟಕ ಕಾಂಗ್ರೆಸ್ ಬಿಜೆಪಿ ಯುದ್ಧವೂ ಆಯಿತು. ಕುಮಾರವ್ಯಾಸ ಭಾರತದಲ್ಲಿ ಬೆಂಕಿಯ ಮಗಳು, ರಣಚಂಡಿ, ಹೆಣ್ಣಿನ ರೂಪದ ಬರಸಿಡಿಲು ದ್ರೌಪದಿ ಇದ್ದಂತೆ ಇಲ್ಲೂ ಎಪ್ಪತ್ತು ಕೋಟಿ ರೂಪಾಯಿಗಳ ಬೆವರಿನಬೆಲೆಯ (sweat equity) ಸ್ತ್ರೀಪಾತ್ರದ ಪ್ರವೇಶವೂ ಆಯಿತು. ಇನ್ನೂ ಬಿಸಿಬಿಸಿಯಾಗುತ್ತಿರುವ ಈ ಮಹಾಭಾರತದಲ್ಲಿ ಇಲ್ಲಿಯವರೆಗೂ ತಾನೆಷ್ಟು ಜಾಣ ಎಂದು ಸದಾ ತೋರಿಸಿಕೊಳ್ಳ ಬಯಸುವ ಒಬ್ಬ ಮಿನಿಸ್ಟರ್ ಆಫ್ ಸ್ಟೇಟ್ ತಮ್ಮ ಕೆಲಸ ಕಳೆದುಕೊಂಡಿದ್ದಾರೆ. ಇನ್ನಷ್ಟು ತಲೆಗಳು ಉರುಳುತ್ತವಂತೆ. ಈಗ ಐಪಿಎಲ್ ನಾಲ್ಕು ಇರುತ್ತದೆಯೇ ಎನ್ನುವುದೇ ದೊಡ್ಡ ಪ್ರಶ್ನಾರ್ಥಕ ಚಿಹ್ನೆಯಾಗಿ ನಿಂತಿದೆ.

❋

ತುಂತುರು ತುಂತುರು ತುಂತುರು ತುಂತುರು ತುಂತುರು


- ದಂಸಆ

- ಬಿಸಿಲು ಕಾಲದಲ್ಲಿ ನೀರಿನ ಟ್ಯಾಂಕರ್‌ಗಳು ಸಹ ಬಾಯಾರಿದಂತೆ ಕಾಣುತ್ತವೆ.
- ಕಾಸು ಕೊಟ್ಟವರಿಗೆ ಮಾತ್ರ ಬೆಳಕು ಕೊಡುವೆ ಎನ್ನುತ್ತಾನೆಯೆ ಸೂರ್ಯ?
- Value has a value only if its value is valued.
- ಸಕ್ಕರೆ ಅಭಾವ ಇಲ್ಲದ ಸಮಯದಲ್ಲಿ ಚೀನಿ ಕಮ್ ಚಿತ್ರ ಬಂದಿತ್ತು. ಆದರೆ ಪಾನಿ ಕಮ್ ಚಿತ್ರಕ್ಕೆ ಯಾವಾಗಲೂ ಸುಸಮಯ ಅಲ್ಲವೆ?
- Cricket is dead. Long live IPL.
- ಲೇಖನಿ ಕತ್ತಿಗಿಂತ ಹರಿತ ಎಂದು ಹೇಳುತ್ತಾರೆ. ಆದರೆ ಲೇಖನಿಯಿಂದ ಇರಿದುಕೊಂಡು ಹತರಾದವರು ಯಾರಾದರೂ ಇದ್ದಾರೆಯೆ?

ಮೆಲುಕು ಹಾಕುವಂತಹ ಮಾತುಗಳ ಗುಚ್ಛ

- Take care of your body. It is the only place you have to live.
- ಚಿತ್ರ ನಿರ್ದೇಶಕನಿಗೆ ಹೀರೋ ಬಗ್ಗೆ ವಿಶೇಷ ಒಲವು ಇರುವುದಿಲ್ಲ. ಹಾಗೆಯೇ ವಿಲನ್ ಬಗ್ಗೆ ದ್ವೇಷವೂ ಇರದು. ಟ್ರಾಜಿಡಿ ಆದರೆ ಹೀರೋ ಸಾಯುತ್ತಾನೆ. ಕಾಮೆಡಿ ಆದರೆ ವಿಲನ್ ಸಾಯುತ್ತಾನೆ. ನಿರ್ದೇಶಕ ಮಾತ್ರ ತನಗೆ ಒಪ್ಪಿಸಿರುವ ಕೆಲಸವನ್ನು ಮಾಡಿ ಮುಗಿಸುತ್ತಾನೆ.
- Good is not good enough where better is expected.
- ಸಕ್ಕರೆ ಸಿಹಿ ಆದರೆ ಡಯಾಬಿಟಿಸ್ ಅಲ್ಲ.
- ಪಥ್ಯ ಮತ್ತು ವ್ಯಾಯಾಮವನ್ನು ನಾಳೆಯಿಂದ ಮಾಡುತ್ತೇನೆ ಎನ್ನುವ ಹಾಗೇ ಇಲ್ಲ. ನಾಳೆ ಎಂಬುದು ಒಂದು ರೋಗ.
- 'I do not know' is the only possibility for you to know. If you destroy that you will never know.
- ನಾನು ದಪ್ಪ ಆಗಿದ್ದೇನೆಯೆ? ಛೇ! ಇಲ್ಲ. ನನ್ನ ಎತ್ತರ ಒಂದಿಷ್ಟು ಕಡಿಮೆ ಆಗಿದೆ ಅಷ್ಟೆ.
- ಭೂಮಿಯ ಮೇಲಿನ ಬದುಕು ದುಬಾರಿ ನಿಜ. ಆದರೆ ಪ್ರತಿ ವರ್ಷ ಸೂರ್ಯನ ಸುತ್ತ ಒಂದು ಪ್ರವಾಸ ಉಚಿತ ಎಂಬುದನ್ನು ಮರೆಯುವಂತಿಲ್ಲ.
- Godmen don't come with guarantees ಎಂಬುದನ್ನು ನಿತ್ಯಾನಂದ ಸ್ವಾಮಿ ಬಗ್ಗೆ ಮಾತ್ರ ಹೇಳಿದ ಎಚ್ಚರಿಕೆ ಮಾತಲ್ಲ.
- If something is worth doing somebody will have already done it.

• ಪ್ರೊ. ವಿವೇಕ್ ರೈ



ಬದನೆ ಪುರಾಣ!!

ಒಂದು ದಿನ ಕೃಷ್ಣದೇವರಾಯ ಏರ್ಪಡಿಸಿದ ಭೋಜನ ಕೂಟದಲ್ಲಿ ತನ್ನ ತೋಟದ ಬದನೆಯ ಪಲ್ಯ ಮಾಡಿಸಿದ. ಆ ಬದನೆಯ ಪಲ್ಯ ಎಷ್ಟು ರುಚಿಕಟ್ಟು ಆಗಿತ್ತೆಂದರೆ ಎಲ್ಲರೂ ಮತ್ತೆ ಮತ್ತೆ ಹಾಕಿಸಿಕೊಂಡು ಅದನ್ನು ತಿಂದರು. ಊಟದ ಬಳಿಕ ಎಲ್ಲರ ಬಾಯಲ್ಲೂ ರಾಯನ ತೋಟದ ಬದನೆಯದ್ದೆ ಗುಣಗಾನ. ಮನೆಗೆ ಬಂದವನೇ ತೆನಾಲಿ ರಾಮ ಹೆಂಡತಿಯಲ್ಲಿ ಆ ಬದನೆಯ ಸ್ವಾದದ ವರ್ಣನೆಯನ್ನು ಬಾಯಲ್ಲಿ ನೀರೂರುವಷ್ಟು ಮಾಡಿದ. ಇದನ್ನು ಕೇಳಿದವಳೇ ಅವನ ಹೆಂಡತಿ, ಅದೇ ತೋಟದಿಂದ ಬದನೆ ತಂದು ತಮ್ಮಲ್ಲೂ ಅದನ್ನು ಅಡುಗೆಮಾಡಿ ತಿನ್ನಬೇಕೆಂದು ಹಠ ಹಿಡಿದಳು. ಆದರೆ ಕೃಷ್ಣದೇವರಾಯನಿಗೆ ಆ ಬದನೆಯ ಬಗ್ಗೆ ಎಷ್ಟೊಂದು ಮೋಹ ಇತ್ತೆಂದರೆ, ಆ ತೋಟದ ಬದನೆ ಕಾಯಲು ವಿಶೇಷ ವ್ಯವಸ್ಥೆ ಮಾಡಿದ್ದಷ್ಟೇ ಅಲ್ಲ, ಒಂದು ಬದನೆ ಕಾಣೆ ಆದರೂ ಕದ್ದವರ ತಲೆ ಕಡಿಯುವ ಆಜ್ಞೆ ಮಾಡಿದ್ದ. ಆದ್ದರಿಂದ ಈ ಎಲ್ಲ ಸಂಗತಿಯನ್ನು ಹೆಂಡತಿಗೆ ಬಗೆಬಗೆಯಾಗಿ ತೋಡಿಕೊಂಡ ತೆನಾಲಿರಾಮ. ಆದರೂ ಹೆಂಡತಿ ಹಠ ಬಿಡಲಿಲ್ಲ. ಕೊನೆಗೆ ತೆನಾಲಿ ರಾಮ ತನ್ನೆಲ್ಲಾ ಜಾಣ್ಮೆ ಬಳಸಿ, ಕಾವಲುಗಾರರ ಕಣ್ಣು ತಪ್ಪಿಸಿ, ರಾಯನ ತೋಟದಿಂದ ಒಂದು ಬದನೆ ಕದ್ದು ತಂದು ಹೆಂಡತಿಗೆ ಕೊಟ್ಟ. ಅವಳು ಅದರ ಅಡುಗೆ ಮಾಡಿ, ಅದರ ರುಚಿ ಸವಿದು ಪರವಶಳಾಗಿಬಿಟ್ಟಳು. ಅವರಿಗೆ ಒಬ್ಬನೇ ಮಗ, ಆರು ವರ್ಷದ ಹುಡುಗ ಮನೆಯ ಮೇಲ್ಗಡೆ ಮಲಗಿದ್ದ. ಅವನಿಗೆ ಇಷ್ಟು ರುಚಿಯ ಬದನೆಯ ಪಲ್ಯ ಕೊಡದಿದ್ರೆ ಹೇಗೆ ಎನ್ನುವ ಒತ್ತಾಯ ಅವಳದ್ದು. ತೆನಾಲಿ ರಾಮನಿಗೆ ಅಂಜಿಕೆ. 'ಈ ಹುಡಗ ಎಲ್ಲಿಯಾದರೂ ಬಾಯಿ ಬಿಟ್ಟರೆ ನಮ್ಮ ಗತಿ ಏನು' ಎಂದು. ಆದರೆ ಹೆಂಡತಿ ಒತ್ತಡ ತಡೆಯಲಾಗಲಿಲ್ಲ. ಕೊನೆಗೆ ತೆನಾಲಿ ರಾಮ ಒಂದು ಉಪಾಯ ಮಾಡಿದ. ಒಂದು ಬಾಲ್ದಿ ನೀರು ತೆಗೆದುಕೊಂಡು ಮೇಲಕ್ಕೆ ಮಗ ಮಲಗಿದ್ದಲ್ಲಿಗೆ ಹೋಗಿ, ಮಗನ ಮೇಲೆ ಚೆಲ್ಲಿ, 'ನೋಡು ಮಳೆ ಬರುತ್ತಿದೆ, ಏಳು, ಊಟ ಮಾಡು' ಎಂದು ಎಬ್ಬಿಸಿ ಕೆಳಗೆ ಕರೆದುಕೊಂಡು ಹೋಗಿ, ಒದ್ದೆಬಟ್ಟೆ ತೆಗೆಸಿ, ಬೇರೆ ಬಟ್ಟೆ ಹಾಕಿಸಿ, ಬದನೆ ಪಲ್ಯ ಬಡಿಸಿ ಊಟ ಮಾಡಿಸಿದ. ಹುಡುಗ ತುಂಬಾ ಖುಷಿಯಿಂದ ಊಟ ಮಾಡಿದ. ತೆನಾಲಿರಾಮ ಮತ್ತೆ ಮಗನಲ್ಲಿ, 'ಹೊರಗೆ ಮಳೆ ಬರುತ್ತಿದೆ, ನೀನು ಒಳಗೆ ಮಲಗು' ಎಂದು ಒಳಗೆ ಮಲಗಿಸಿದ.

ಮರುದಿನ ಸುದ್ದಿ ಆಯಿತು. ಕೃಷ್ಣದೇವರಾಯನ ತೋಟದ ಬದನೆ ಕದ್ದ ವಿಚಾರ. ಚಾಣಾಕ್ಷನಾದ ತೆನಾಲಿರಾಮ ಬಿಟ್ಟರೆ ಬೇರೆ ಯಾರಿಂದಲೂ ಸಾಧ್ಯ ಇಲ್ಲ ಎಂದು ನಿರ್ಧರಿಸಿದರು. ಆದರೆ ಆತ ನಿಜ ಹೇಳಲಾರ. ಆತನ ಮಗ ಸತ್ಯ ಹೇಳಿಯಾನು ಹೀಗೆ ಭಾವಿಸಿ ಮಗನನ್ನು ಕರೆಸಿದರು. ಮಗ ನಿಜ ಹೇಳಿದ. ನಿನ್ನೆ ರಾತ್ರಿ ಬದನೆ ಪಲ್ಯ ಊಟ ಮಾಡಿದೆ ಎಂದು. ಇನ್ನೇನು ತೆನಾಲಿರಾಮನ ತಲೆ ಕಡಿಯುವುದಷ್ಟೇ ಬಾಕಿ. ಆಗ ತೆನಾಲಿ ರಾಮ ಹೇಳಿದ, 'ಸ್ವಾಮೀ, ಈ ಹುಡುಗ ಕನಸಿನಲ್ಲಿ ಏನೇನೋ ಕನವರಿಸುತ್ತಾನೆ. ಅವನ್ನೆಲ್ಲ ನಿಜ ಎಂದು

ಹೇಳಲಿಕ್ಕಾಗುತ್ತದೆಯೇ? ಬೇಕಾದರೆ ನೀವೇ ಕೇಳಿ ನಿನ್ನೆ ಮಳೆ ಬಂದಿತ್ತೋ' ಎಂದು. ಹುಡುಗನನ್ನು ಕೇಳಲಾಯಿತು. 'ನಿನ್ನೆ ರಾತ್ರಿ ಮಳೆ ಬಂದಿತ್ತಾ?' ಎಂದು. ಹುಡುಗ 'ಹೌದು, ಜೋರು ಮಳೆ ಬಂದಿತ್ತು, ನಾನು ಬಟ್ಟೆ ಬದಲಿಸಿ, ಆಮೇಲೆ ಒಳಗೆ ಮಲಗಿದೆ' ಎಂದ. ನಿಜವಾಗಿ ಮಳೆ ಬಂದೇ ಇರಲಿಲ್ಲ. ಹುಡುಗ ಏನೋ ಭ್ರಮೆಯಿಂದ ಮಾತಾಡುತ್ತಾನೆ ಎಂದು ಭಾವಿಸಿ ತೆನಾಲಿ ರಾಮನನ್ನು ನಿರ್ದೋಷಿ ಎಂದು ಸಾರಿದರು.

ಈಗ ನನಗಿರುವ ಕುತೂಹಲ, ಮೊನ್ನೆ ಕೃಷ್ಣದೇವರಾಯ ಉತ್ಸವದಲ್ಲಿ ಊಟಕ್ಕೆ ಬದನೆ ಪಲ್ಯ ಮಾಡಿದ್ದರೆ ಎಂದು. ನಾನು ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಇದ್ದ ಮೂರು ವರ್ಷದ ಅವಧಿಯಲ್ಲಿ (2004-07) ನಮ್ಮ ಮನೆಯಲ್ಲಿ ಅಡುಗೆಗೆ ಸಹಾಯಕರಾಗಿ ಸುಭದ್ರಮ್ಮ ಇದ್ದರು. ಅವರು ಹಂಪಿಯ ಪಕ್ಕದ ಕಮಲಾಪುರದವರು. ಅವರು ಎಣ್ಣೆಗಾಯಿ ಚೆನ್ನಾಗಿ ಮಾಡುತ್ತಿದ್ದರು. ನನಗೆ ವಾರದಲ್ಲಿ ಮೂರು ಬಾರಿಯಾದರೂ ಜೋಳದರೊಟ್ಟಿ ಎಣ್ಣೆಗಾಯಿ ಊಟಕ್ಕೆ ದೊರೆಯುತ್ತಿತ್ತು. ಧಾರವಾಡದ ಸಂಪರ್ಕ ಬಂದ ಬಳಿಕ ಎಣ್ಣೆಗಾಯಿ ನನಗೆ ಇಷ್ಟ ಆಗಿತ್ತು. ಕೃಷ್ಣದೇವರಾಯನಿಗೆ ಬದನೆ ಇಷ್ಟ ಎಂದು ನನಗೆ ಗೊತ್ತಾದದ್ದು ತಡವಾಗಿ.

★★★

ಕೃಷ್ಣದೇವರಾಯ ಬದನೆ ಇಷ್ಟಪಟ್ಟದ್ದಕ್ಕೆ ಒಂದು ಹೊಸ ಕಾರಣ ಈಗ ನನಗೆ ಹೊಳೆಯುತ್ತದೆ. ಬದನೆಯನ್ನು 'ತರಕಾರಿಗಳ ಚಕ್ರವರ್ತಿ' ಎಂದು ಕರೆದಿದ್ದಾರೆ. ತಮಿಳು ಜನಪದ ಕಥೆಯೊಂದರಲ್ಲಿ, ಒಬ್ಬ ರಾಜ ಇರುತ್ತಾನೆ. ಅವನಿಗೆ ಬದನೆ ಬಹಳ ಇಷ್ಟ ದಿನಾ ಬದನೆಯ ಅಡುಗೆ. ಕೊಳಂಬೋ ಸಾಂಬಾರೋ ಇರಬೇಕು. ರಾಜ ತನ್ನ ಮಂತ್ರಿಯೊಡನೆ ಬದನೆಯ ಶ್ರೇಷ್ಠತೆಯನ್ನು ಕೊಂಡಾಡುತ್ತಾನೆ.' ನೋಡು ಬದನೆಯ ತಲೆಯಲ್ಲಿ ಕಿರೀಟ ಇದೆ. ಅದು ದೇವರು ಕೊಟ್ಟ ಕಿರೀಟ. ಬದನೆ ತರಕಾರಿಗಳ ರಾಜ. ದಿನಾಲೂ ಬದನೆ ತಿಂದು ಆ ರಾಜನಿಗೆ ಅಜೀರ್ಣ ಆಗುತ್ತದೆ. ಆಗ ಮಂತ್ರಿಯಲ್ಲಿ ಹೇಳುತ್ತಾನೆ, 'ಬದನೆ ಕೆಟ್ಟದ್ದು, ಅದರ ತಲೆಯಲ್ಲಿ ಮುಳ್ಳು ಇದೆ' ಎಂದು.

ಬದನೆ ಮನುಷ್ಯರಿಗೆ ಇಷ್ಟವಾದ ಕಾರಣ ಅದು ದೇವರಿಗೂ ಇಷ್ಟ ಆಯಿತು. ಉಡುಪಿಯ 'ಮಟ್ಟುಗುಳ್ಳ' ತುಂಬಾ ಪ್ರಸಿದ್ಧವಾದುದು. ವಾದಿರಾಜರು ಹಯಗ್ರೀವನಿಗೆ ಇಡುತ್ತಿದ್ದ ನೈವೇದ್ಯ, ಅದರ ಬಗ್ಗೆ ಬ್ರಾಹ್ಮಣರು ಸಂಶಯ ಪಟ್ಟು ವಿಷ ಸೇರಿಸುವುದು, ವಾದಿರಾಜರು ಅದನ್ನು ನೈವೇದ್ಯವಾಗಿ ಅರ್ಪಿಸುವುದು, ಮತ್ತೆ ಆ ಬ್ರಾಹ್ಮಣರಿಗೆ ಈ ವಿಶಿಷ್ಟ ಬದನೆಯ ಬೀಜಗಳನ್ನು ಕೊಡುವುದು, ಅವನ್ನು ಸಮುದ್ರ ಬದಿಯ ಮಟ್ಟು ಎಂಬ ಊರಿನಲ್ಲಿ ಬಿತ್ತಿ, ಬದನೆ ಬೆಳೆಸುವುದು. ಅದಕ್ಕೆ 'ಮಟ್ಟುಗುಳ್ಳ' ಎಂಬ ನಾಮಕರಣ ಮಾಡುವುದು... ಹೀಗೆ ಐತಿಹ್ಯ ಇದೆ. ಮಟ್ಟು ಗುಳ್ಳದ ಬಗ್ಗೆ ಸಾಕಷ್ಟು ವೈಜ್ಞಾನಿಕ ಅಧ್ಯಯನಗಳು ನಡೆದಿವೆ. ಪ್ರೊ. ಕು.ಶಿ. ಹರಿದಾಸ ಭಟ್ಟರು ಇದ್ದ ಅವಧಿಯಲ್ಲಿ ಉಡುಪಿಯ ಸಭೆ ಸೆಮಿನಾರ್‌ಗಳ ಒಂದು ಆಕರ್ಷಣೆ ಅಲ್ಲಿನ ರುಚಿಕಟ್ಟಾದ ಭೋಜನ. ಅದರಲ್ಲಿ ಮಟ್ಟುಗುಳ್ಳ ರಸರಾಜ. ಕುಶಿ ಅವರ

ಮನೆಯಲ್ಲೂ ಸಾಕಷ್ಟು ಬಾರಿ ಊಟ ಮಾಡಿದ ನನಗೆ ಈಗ ಮಟ್ಟುಗುಳ್ಳ ಒಂದು ಪುರಾಣದ ಕಥೆಯಾಗಿದೆ.

ನಮ್ಮ ಹಳ್ಳಿಯಲ್ಲಿ ನಮ್ಮ ಮನೆಯ ಬಳಿ ಮತ್ತು ಗದ್ದೆಯಲ್ಲಿ ನೆಟ್ಟು ಬೆಳೆಸುತ್ತಿದ್ದ ತರಕಾರಿಗಳಲ್ಲಿ ಬದನೆಯೂ ಒಂದು. ಅಲಸಂದೆ, ಸೌತೆ, ಮುಳ್ಳುಸೌತೆ, ಹರಿವೆ, ಹೀರೆ, ಹಾಗಲಕಾಯಿ, ಬೆಂಡೆ... ಹೀಗೆ ನಮ್ಮ ತರಕಾರಿ ಬೆಳೆಗಳಲ್ಲಿ ಹೆಚ್ಚು ಸಮೃದ್ಧವಾದವುಗಳಲ್ಲಿ ಬದನೆ ಒಂದು ರೀತಿ ಭೋಜರಾಜ. ರಸ, ಗಸಿ, ಹುಳಿ, ಚಟ್ನಿ... ಇನ್ನೂ ಮರೆತ ಅನೇಕ, ಬದನೆಯ ಪದಾರ್ಥಗಳು ನನ್ನ ಅಮ್ಮನ ಪಾಕದಿಂದ ಹೊರಬರುತ್ತಿದ್ದುವು. ಸ್ವಲ್ಪ ನಂಜು ಎಂದರೂ ಸ್ವಲ್ಪ ಹೆಚ್ಚು ಹುಣಸೆ ಹುಳಿ ಹಾಕಿದರೆ ಅಲ್ಲಿಗೆ ಮತ್ತೆ ತಕರಾರಿಲ್ಲ.

'ಪುರಾಣದ ಬದನೇಕಾಯಿ ತಿನ್ನಲಿಕ್ಕೆ ಆಗುವುದಿಲ್ಲ' ಎನ್ನುವ ಗಾದೆ ಮಾತು ಒಂದಿದೆ. ಹಾಗಾದರೆ ಯಾಕೆ ಈ ಬದನೆಕಾಯಿ ಪುರಾಣ ಎಂದು ಕೇಳಬಹುದು. ನಾನು ಜರ್ಮನಿಗೆ ಬಂದ ಮೇಲೆ ಇಲ್ಲಿ ಬದನೆ ಸಿಗುವುದಿಲ್ಲ. ಟೊಮೇಟೊ, ಬಟಾಟೆ, ಕೋಸು, ಕ್ಯಾರೆಟ್ ಹೀಗೆ ತರಕಾರಿ ನಾನೇ ಅಡುಗೆ ಮಾಡಿ ತಿಂದು, ಬದನೆಯ ನೆನಪೋ ಇರಲಿಲ್ಲ. ಒಂದು ಸಂಜೆ ಇಂಟರ್ನೆಟ್‌ನಲ್ಲಿ ಕರ್ನಾಟಕದ ಇಂದಿನ ಬಿಸಿ ಸುದ್ದಿ ಓದೋಣ ಎಂದು ಈ ಪೇಪರ್‌ಗಳನ್ನು ಹುಡುಕಿದರೆ ಎಲ್ಲೆಲ್ಲೂ ಬದನೆಯದ್ದೆ ಸುದ್ದಿ. ಮತ್ತೆ ಬದನೆಗೆ ರಾಜಯೋಗ ಬಂತಲ್ಲ ಎಂದು ಖುಷಿಯಿಂದ ಓದಿದರೆ ಇದು ನಮ್ಮ ಬದನೆ- ಅಲ್ಲ, ಬಿಟಿ ಬದನೆ. ನಮ್ಮಲ್ಲಿ ಮನುಷ್ಯರ ಹೆಸರುಗಳಿಗೆ ಅವುಗಳ ಮುಂದೆ ಇನಿಶಿಯಲ್ ಸೇರಿಸುವ ಕ್ರಮ ಇದೆ. ನಮ್ಮ ಹೆಸರಿನ ಮುಂದೆ 'ಬಿವಿ' ಇದೆ. ಈಗ ತರಕಾರಿಗಳಿಗೂ ಇನಿಶಿಯಲ್ ಬಂತಾ ಎಂದು ನೋಡಿದೆ. ಅಂದಿನ ಬೆಂಗಳೂರಿನ ಸಂವಾದದಲ್ಲಿ ಕೇಂದ್ರದ ಪರಿಸರ ಸಚಿವ ಜೈರಾಮ್ ರಮೇಶ್ ಅವರು ಬಿಟಿ ಬದನೆಗೆ ಪರ ವಿರೋಧ ಇರುವವರ ಪ್ರಮಾಣ 50:50 ಎಂದು ಕರಾರುವಾಕ್ಕಾಗಿ ಹೇಳಿದ್ದು ಗಮನಿಸಿದೆ. ನನ್ನ ಹಾಗೆ ಅನೇಕ ಮಂದಿ ಈ 50 ರಲ್ಲಿ ಸೇರಿಲ್ಲ ಎಂದು ಭಾವಿಸುತ್ತೇನೆ.

ನನಗೆ ಸೋಜಿಗವೆಂದರೆ ಇನಿಶಿಯಲ್ ಹಚ್ಚಲು ಮತ್ತು ಇಂಜಕ್ಷನ್ ಚುಚ್ಚಲು ಬದನೆಯನ್ನೇ ಯಾಕೆ ಆಯ್ಕೆ ಮಾಡಿಕೊಂಡರು ಎಂದು. ಬದನೆ ಹುಟ್ಟಿದ್ದು ಭಾರತದಲ್ಲಿ. ಅಲ್ಲಿಂದ ಅದು ಮೊದಲು ಚೀನಾಕ್ಕೆ, ಮತ್ತೆ ಅರೇಬಿಕ್ ದೇಶಗಳಿಗೆ ಮತ್ತೆ ಪಶ್ಚಿಮದ ಇತರ ದೇಶಗಳಿಗೆ ಹೋಯಿತು. ಈಗಲೂ ಬದನೆ ಬೆಳೆಯುವ ದೇಶಗಳಲ್ಲಿ ಚೀನಾದ ಬಳಿಕ ಭಾರತ ಇದೆ. ಬಳಿಕದ ಸ್ಥಾನದಲ್ಲಿ ಟರ್ಕಿ, ಇಂಡೋನೇಷ್ಯ, ಇರಾಕ್, ಜಪಾನ್ ಬರುತ್ತವೆ. ಈ ಎಲ್ಲ ದೇಶಗಳೂ ತಮ್ಮ ಸ್ವಾಭಿಮಾನ ಇಟ್ಟುಕೊಂಡು ಸ್ವತಂತ್ರವಾಗಿ ಬೆಳೆಯುತ್ತಿರುವ ದೇಶಗಳು. 1500 ವರ್ಷಗಳ ಹಿಂದೆ ನಮ್ಮ ಬದನೆ ಪಶ್ಚಿಮಕ್ಕೆ ಹೋದಾಗ ಅವರಿಗೆ ಅದು ಮೊಟ್ಟೆಯಂತೆ ಕಾಣಿಸಿತು. ಅದಕ್ಕಾಗಿ ಇದನ್ನು 'ಎಗ್ ಪ್ಲಾಂಟ್' ಎಂದು ಕರೆದರು. ಬ್ರೆಜಿಲ್‌ನಲ್ಲಿ ಇದನ್ನು 'ತರಕಾರಿಗಳ ರಾಜ' ಎಂದು ಹೆಸರಿಸುತ್ತಾರೆ.

ಇಂತಹ ಭಾರತದ ಬದನೆಯ ಸ್ಥಾನದಲ್ಲಿ ಇದರ 'ದೊಡ್ಡಣ್ಣ ಬದನೆ'ಯನ್ನು ತಂದರೆ, ಇದರ ಮೂಲ ಹೂತುಹೋಗುತ್ತದೆ ಮತ್ತು ಈಗ ಬದನೆಯ ಬೆಳೆಯಲ್ಲಿ ಭಾರತಕ್ಕೆ ಇರುವ ಹಿರಿತನದ ಪಟ್ಟದಿಂದ ರಾಜನನ್ನು ಇಳಿಸುವ ಹುನ್ನಾರ ಮೊದಲನೆಯದು. ಬದನೆಯ

ಸಾಂಸ್ಕೃತಿಕ ಪಾವಿತ್ರ್ಯವನ್ನು, ದೇಸಿ ರುಚಿ ಮತ್ತು ಬಳಕೆಯ ಬಹು ರೂಪಗಳನ್ನು ನಾಶ ಮಾಡುವುದು ಮೂಲಭೂತ ಉದ್ದೇಶ. ಉಳಿದವು ಎಲ್ಲರಿಗೂ ಗೊತ್ತಿರುವವು. ಸಾಕಷ್ಟು ಬರಹಗಳು, ಬ್ಲಾಗ್‌ಗಳು, ಚಳವಳಿಗಳು ಎಲ್ಲವನ್ನೂ ಬಹಿರಂಗಗೊಳಿಸಿವೆ.

ಅಮೆರಿಕದ ಕೃಷಿ – ಕಂಪೆನಿ ಮೊನ್‌ಸಂತೋದಿಂದ ತೊಡಗಿ ಡುಪಾಂಟ್, ಸಿನ್ಗೆಂತ, ದೌ – ಇವೆಲ್ಲ ಪ್ರಾಯೋಜಕ ಕಂಪನಿಗಳು. ಯೂರೋಪಿನ ಬಹುತೇಕ ದೇಶಗಳು ಜೈವಿಕ ಆಹಾರಗಳನ್ನು ನಿಷೇಧಿಸಿವೆ. ಜರ್ಮನಿಯ ಸರಕಾರವು ಬಿಟಿ ಜೋಳವನ್ನು ಬಹಿಷ್ಕರಿಸಿದೆ. ಬಿಟಿ ಬದನೆಯನ್ನು ಪ್ರವೇಶಿಸಲು ಬಿಟ್ಟಿಲ್ಲ. ಬದನೆಯನ್ನೇ ಬೆಳೆಯದ ಯೂರೋಪಿನ ದೇಶಗಳೇ ಬಿಟಿ ಬದನೆಯನ್ನು ನಿಷೇಧಿಸುವಾಗ ಬದನೆಯ ಹುಟ್ಟೂರು ಮತ್ತು ಜಾಗತಿಕವಾಗಿ ಬದನೆ ಬೆಳೆಯುವ ಮುಖ್ಯ ದೇಶ ಭಾರತಕ್ಕೆ ಏನು ಅವಸರ? ಯೂರೋಪಿಯನ್ ಯೂನಿಯನ್ ಕಟ್ಟಿಕೊಂಡ ಪ್ರಬಲ ದೇಶಗಳೇ ಹೇಳುತ್ತಿವೆ, 'ಕೈಗಾರಿಕೆಗಳು, ಸಂಪರ್ಕ, ಸಾರಿಗೆ, ವಿದ್ಯುಚ್ಛಕ್ತಿ – ಇಲ್ಲೆಲ್ಲಾ ನಾವು ಸಮಾನ ಮಾರುಕಟ್ಟೆಯನ್ನು ಬಯಸುತ್ತೇವೆ. ಆದರೆ ಕೃಷಿಗೆ ಬಂದಾಗ ನಾವು ಸ್ಥಳೀಯರಾಗಿ ಉಳಿಯಬಯಸುತ್ತೇವೆ.' ಬೆಂಗಳೂರಿನ ಈ ದಿನದ ಸಂವಾದದಲ್ಲಿ ಒಬ್ಬ ವಿಜ್ಞಾನಿ ಹೇಳಿದ್ದನ್ನು ಈಗತಾನೆ ಓದಿದೆ. 'ನಾವು ಮೊಬೈಲ್‌ಗಳನ್ನು ಬಳಸುವವರು ಬಿಟಿ ಬದನೆಗೆ ಯಾಕೆ ವಿರೋಧಿಸಬೇಕು?' ನಮ್ಮ ಅನೇಕ ವಿಜ್ಞಾನಿಗಳ ಬೌದ್ಧಿಕ ಬಾಲಿತನದ ಬಗ್ಗೆ ಸಂತಾಪ ಪ್ರಕಟಿಸಬೇಕು.

ದಕ್ಷಿಣ ಕನ್ನಡದ ಭತ್ತದ ಬೇಸಾಯದಲ್ಲಿ ನೇಜಿ (ನಾಟಿ) ನೆಡುವಾಗ ಹೆಂಗಸರು ಸಾಮೂಹಿಕವಾಗಿ ಹಾಡುವ ಹಾಡುಗಳೇ ಕಬಿತಗಳು. ಅಂತಹ ಒಂದು ಕಬಿತ 'ಗೋವಿಂದ ಬದನೆ'. ಬದನೆಯನ್ನು ಮಾರುವ ಬಾಯಿ (ಕ್ರೈಸ್ತ ಹೆಂಗಸು) ಒಬ್ಬಳು ಮಣ್ಣಿನಲ್ಲಿ ಬದನೆಯ ಬೀಜಗಳನ್ನು ಹಾಕುವುದು, ಅದಕ್ಕೆ ಗೊಬ್ಬರ ಹಾಕಿ ಬೆಳೆಸುವುದು, ಬೆಳೆದ ಬದನೆಗಳನ್ನು ಊರೂರು ಸುತ್ತುತ್ತಾ ಮಾರಾಟ ಮಾಡುವುದು – ಈ ಕಬಿತದ ವಸ್ತು. ಇದರಲ್ಲಿ ಪಲ್ಲವಿ 'ಗೋವಿಂದ ಬದನೆ, ಗೋವಿಂದ ಬದನೆ' ಕೊನೆಗೆ ಬದನೆ ಮಾರಾಟ ಮಾಡಿ ಮುಗಿದಾಗ ಎಲ್ಲರೂ ಜೋರಾಗಿ 'ಗೋವಿಂದ ಬದನೆ' ಎನ್ನುತ್ತಾರೆ. 'ಗೋವಿಂದ' ಎಂದರೆ ವ್ಯಂಗ್ಯ ಅರ್ಥದಲ್ಲಿ 'ಪೂರ್ತಿ ಮುಗಿಯುವುದು, ಖಾಲಿ ಆಗುವುದು' ಎಂದು ಅರ್ಥ.

ಈಗ ಬಿಟಿ ಬದನೆ ಬಂದರೆ ನಮ್ಮ ಬದನೆ 'ಗೋವಿಂದ'. ತೆನಾಲಿರಾಮ ಹೆಂಡತಿಗಾಗಿ ಕೃಷ್ಣದೇವರಾಯನ ತೋಟದಿಂದ ಒಂದು ಬದನೆ ಕದ್ದರೆ, ಈಗ ಬಿಟಿ ಬದನೆಯ ಕಂಪೆನಿಗಳು ನಮ್ಮ ಬದನೆಯ ತೋಟ ತೋಟಗಳನ್ನೇ ಹಾಡುಹಗಲೇ ದರೋಡೆ ಮಾಡುತ್ತವೆ. ಈಗ ನಮ್ಮ ಬದನೆಯ ತಲೆಯ ಕಿರೀಟ ಹೋಗಿ, ಅದರ ಜಾಗದಲ್ಲಿ ಬಿಟಿ ಬದನೆಯ ಮುಳ್ಳು ಕಾಣಿಸುತ್ತದೆ. ಇನ್ನು ಮಟ್ಟು ಗುಳ್ಳದ ಬದಲು 'ಬಿಟಿ ನೈವೇದ್ಯ' ಮಾಡಬೇಕಾಗುತ್ತದೆ. ಇನ್ನು ಮೇಲೆ ಬದನೆಯ ಗಸಿ, ಹುಳಿ, ಸಾಂಬಾರ್, ಚಟ್ನಿ, ಉಪ್ಪಿನಕಾಯಿ, ಎಣ್ಣೆಕಾಯಿ ಬದಲು 'ಬಿಟಿ ಬ್ರಿಂಜಾಲ್ ಮೊಂಸಂತೋ ರೆಸಿಪಿ' ಸೂಪರ್ ಮಾರ್ಕೆಟ್‌ಗಳಲ್ಲಿ ಮಾರಾಟಕ್ಕೆ ಸಿಗುತ್ತದೆ. ಈಗ ಈ ಕಬಿತದ ಈ ಪಲ್ಲವಿಯನ್ನು ಹಾಡಬೇಕಾದವರು ಯಾರು? 'ಗೋವಿಂದ ಬದನೆ, ಗೋವಿಂದ ಬದನೆ'. (ಸೌಜನ್ಯ: ಅವಧಿ)

ನಾನೂ ಸೈಕಲ್ ಸವಾರಿ ಕಲಿತೆ

- ಎಸ್.ಎಂ. ಪೆಜತ್ತಾಯ

[ಶ್ರೀ ಎಸ್.ಎಂ. ಪೆಜತ್ತಾಯ ಅವರ ಕಾಗದದ ದೋಣಿ ಪುಸ್ತಕದಿಂದ ಆಯ್ದ ಒಂದು ಪ್ರಸಂಗ]

ನಾನು ಆರನೇ ತರಗತಿಯಲ್ಲಿ ಓದುತ್ತಿದ್ದೆ. ನನ್ನ ಜೊತೆಗೆ ಓದುತ್ತಿದ್ದ, ಆಟೋಟಗಳಲ್ಲಿ ಚುರುಕಾಗಿದ್ದ ಗಂಡುಮಕ್ಕಳೆಲ್ಲಾ ಆಗಲೇ ಸೈಕಲ್ ಸವಾರಿ ಮಾಡಲು ಕಲಿತಿದ್ದರು. ನನ್ನ ಅಣ್ಣ ನರಹರಿಯ ಹತ್ತಿರ ಹೊಸಾ 'ಈಸ್ಟರ್ನ್ ಸ್ಟಾರ್' ಸೈಕಲ್ ಇತ್ತು. ಆದರೆ ಅದು 22 ಇಂಚು ಸೈಜಿನ ಎತ್ತರದ ದೊಡ್ಡ ಸೈಕಲ್. ನಾನು ಆ ಸೈಕಲ್‌ನಲ್ಲಿ ಬ್ಯಾಲೆನ್ಸ್ ಕಲಿಯ ಹೋಗಿ ಬೀಳಿಸಿ ಹಾಳುಮಾಡುತ್ತೇನೆಂದು ಅದನ್ನು ಅವನು ನನಗೆ ಕೊಡುತ್ತಿರಲಿಲ್ಲ.

ನಮ್ಮ ಮನೆಯ ಹತ್ತಿರ ರಾಮ ಎಂಬ ಲೋಕಲ್ ರೌಡಿಯೊಬ್ಬ ಹೊಸದಾಗಿ ಸೈಕಲ್ ಅಂಗಡಿ ತೆರೆದ. ಅವನಲ್ಲಿ ಎಲ್ಲಾ ಸೈಜಿನ ಸೈಕಲುಗಳು ಬಾಡಿಗೆಗೆ ದೊರಕುತ್ತಿದ್ದವು. ಬಾಡಿಗೆ ಒಂದು ಗಂಟೆಗೆ ಬರೇ ಎರಡು ಆಣೆ ಮಾತ್ರ. ಆದರೆ ಆ ಮೊತ್ತವೇ 'ಪಾಕೆಟ್ ಮನಿ' ಪದ್ಧತಿ ಇಲ್ಲದ ನಮಗೆ ದೊಡ್ಡ ಮೊತ್ತವಾಗಿತ್ತು. ಅದಲ್ಲದೇ, ರೌಡಿ ರಾಮನು ಸೈಕಲ್ ಹೊಡೆಯಲು ಬರದ ಹುಡುಗರಿಗೆ ಸೈಕಲ್ ಬಾಡಿಗೆಗೆ ಕೊಡುತ್ತಿರಲಿಲ್ಲ. ಪ್ರತೀ ಬಾಡಿಗೆದಾರ ಹುಡುಗನೂ ರೌಡಿ ರಾಮನ ಎದುರು ಸೈಕಲ್ ಸವಾರಿ ಮಾಡಿ ತೋರಿಸಿಯೇ ಅವನಿಂದ ಸೈಕಲ್ ಪಡೆಯಬೇಕಾಗಿತ್ತು.

ಸೈಕಲ್ ಕೊಡುವಾಗ ಆತನು ಕಣ್ಣು ಕೆಂಪಗೆ ಮಾಡಿ "ಇದರಲ್ಲಿ ಯಾರಿಗೂ ಸೈಕಲ್ ಹೊಡೆಯಲು ಕಲಿಸಬೇಡ. ನನ್ನ ಬಾಡಿಗೆಯ ಸೈಕಲುಗಳು ಎಲ್ಲಾದರೂ ಅಡ್ಡ ಬಿದ್ದರೆ, ಅವನ್ನು ನೋಡಿದ ಕೂಡಲೇ ನನಗೆ ಗೊತ್ತಾಗುತ್ತದೆ. ನನ್ನ ಸೈಕಲುಗಳಿಗೆ ಏನಾದರೂ ಪೆಟ್ಟು ಮಾಡಿ ತಂದರೆ, ನಾನು ನಿಮ್ಮ ಮನೆಗೆ ಬಂದು ಹೊಸ ಸೈಕಲ್ ಕ್ರಯ ವಸೂಲಿ ಮಾಡುತ್ತೇನೆ" ಎಂದು ಹೆದರಿಸಿಯೇ ಹುಡುಗರಿಗೆ ಬಾಡಿಗೆಗೆ ಕೊಡುತ್ತಿದ್ದ.

ನನ್ನ ಸ್ನೇಹಿತನಾದ ಕಲ್ಮಾಡಿ ರವಿ ಶ್ರೀಮಂತ ಮನೆತನದ ಹುಡುಗ. ಅವನು ರಜಾಕಾಲದಲ್ಲಿ ಅವನ ಮದರಾಸಿನ ಅಕ್ಕನ ಮನೆಯಲ್ಲಿದ್ದ ಚಿಕ್ಕ ಸೈಕಲಿನಲ್ಲಿ ಸ್ವಲ್ಪಮಟ್ಟಿಗೆ ಸೈಕಲ್ ಬ್ಯಾಲೆನ್ಸ್ ಕಲಿತಿದ್ದ. ಆತನಿಗೆ ಮನೆಯಲ್ಲಿ ಸಾಕಷ್ಟು 'ಪಾಕೆಟ್ ಮನಿ' ಕೂಡಾ ಸಿಗುತ್ತಿತ್ತು. ಅವನನ್ನು ಹೊಗಳಿ ಪುಸಲಾಯಿಸಿ "ರವೀ, ನೀನು ನನಗೆ ಒಂದು ಉಪಕಾರ ಮಾಡಲೇಬೇಕು, ನಮ್ಮ ಕ್ಲಾಸಿನಲ್ಲಿ ನಾವೇ ಆಟಗಳಲ್ಲಿ ಬಹಳ ಚುರುಕಾಗಿದ್ದು ಪಾಠಗಳಲ್ಲಿ 'ಅಷ್ಟಕ್ಕಷ್ಟೇ' ಎನ್ನಿಸಿರುವ ಹುಡುಗರು. ನಮ್ಮ ಗುಂಪಿನ ಎಲ್ಲಾ ಹುಡುಗರು ಅದಾಗಲೇ ಸೈಕಲ್ ಕಲಿತುಬಿಟ್ಟಿದ್ದಾರೆ. ನಮ್ಮ ಗುಂಪಿನಲ್ಲಿ ನಾನೊಬ್ಬನೇ ಈಗ ಸೈಕಲ್ ಕಲಿಯಲು ಬಾಕಿ ಉಳಿದವನು. ನಮ್ಮ ಕ್ಲಾಸಿನಲ್ಲಿ 'ಓದಲು ಮಾತ್ರ ಲಾಯಕ್ಕಿದ್ದ' ಹುಡುಗರಲ್ಲಿ ಕೆಲವರು ಇನ್ನೂ ಸೈಕಲ್ ಕಲಿತಿಲ್ಲ. ಅವರು ನಮ್ಮೊಡನೆ ಆಟಕ್ಕೂ ಬರುವುದಿಲ್ಲ. ಅವರೆಲ್ಲಾ ಕ್ಲಾಸಿನ ಹೆಣ್ಣುಮಕ್ಕಳೊಂದಿಗೆ ಕಲ್ಲಾಟ, ಕವಡೆ,

ಆಟ, ಚೌಕಾಬಾರ ಆಟ ಆಡಲು ಮಾತ್ರ ಲಾಯಕ್ಕು. ಧೈರ್ಯವಂತ ಹುಡುಗರ ಟೀಮ್ ಎಂದು ಎನ್ನಿಸಿಕೊಂಡು ಪ್ರಸಿದ್ಧವಾದ ನಮ್ಮ ಕ್ರಿಕೆಟ್ ಟೀಮಿನಲ್ಲಿ ಈಗ ನಾನೊಬ್ಬನು ಮಾತ್ರ ಸೈಕಲ್ ಕಲಿತಿಲ್ಲ. ಇದರಿಂದಾಗಿ, ನನಗೆ ಒಂದು ತರಹದ ಅಪಮಾನದ ಭಾವನೆ ಬರುತ್ತಾ ಇದೆ. ನೀನು ನನಗೆ ಸೈಕಲ್ ಕಲಿಸಿಕೊಟ್ಟರೆ, ನಾನು ನಿನಗೆ ಶ್ರೀಕೃಷ್ಣ ಮಠದ ಸರೋವರದಲ್ಲಿ ಈಜು ಹೊಡೆಯಲು ಕಲಿಸುವೆ" ಎಂಬ ಭರವಸೆಯನ್ನು ಕೂಡಾ ನೀಡಿದೆ. ರವಿಯ ತಾಯಿಗೆ ನೀರೆಂದರೆ ಬಹಳ ಹೆದರಿಕೆ. ಅವರು ಅವನನ್ನು ಎಂದೂ ಈಜು ಕಲಿಯಲು ಕಳುಹಿಸಿದವರಲ್ಲ. ಆದರೂ, ಈಜು ಕಲಿಯಬೇಕು ಎಂಬ ಆಸೆಯೇ ಅವನನ್ನು ನನಗೆ ಸೈಕಲ್ ಕಲಿಸುವಂತೆ ಪ್ರೇರೇಪಿಸಿತು.

ನಾಲ್ಕಾರು ದಿನ ರವಿ ತನ್ನ ಖರ್ಚಿನಲ್ಲೇ ರಾಮಣ್ಣನ ಅಂಗಡಿಯಿಂದ ಹೊಸದಾದ ಪುಟ್ಟ ಸೈಕಲ್ ತಂದು ನನಗೆ ಸೈಕಲ್ ಸವಾರಿ ಮಾಡಲು ಕಲಿಸಿಯೇಬಿಟ್ಟ. ನನಗೆ ಬ್ಯಾಲೆನ್ಸ್ ಚೆನ್ನಾಗಿ ಬರುವ ತನಕ ಆ ಪುಟ್ಟ ಸೈಕಲಿನ ಸೀಟನ್ನು ಬಲವಾಗಿ ಹಿಡಿದು, ನನ್ನ ಹಿಂದೆ ಓಡಿಯೇ ಬರುತ್ತಿದ್ದ. ಕೊನೆಗೊಮ್ಮೆ ಮಾರ್ಗದ ಎಡಭಾಗದಲ್ಲಿ ಧೈರ್ಯವಾಗಿ, ಪುಟ್ಟ ಸೈಕಲನ್ನು ಸವಾರಿ ಮಾಡುತ್ತಾ ಹೋಗುವಷ್ಟು ನನಗೆ 'ಬ್ಯಾಲೆನ್ಸ್' ಬಂತು. ನನ್ನ ಸೈಕಲ್ಲಿಗೆ ಏನಾದರೂ ಅಡ್ಡಬಂದರೆ, ಬ್ರೇಕ್ ಹಾಕಿ ಸೈಕಲ್ ನಿಲ್ಲಿಸಿ, ನೆಲಕ್ಕೆ ಬಲವಾಗಿ ಪಾದಗಳನ್ನು ಊರಿ ನಿಂತುಬಿಡುತ್ತಿದ್ದೆ. ಸದಾ ಪುಟ್ಟ ಸೈಕಲ್ ಮಾತ್ರ ಸವಾರಿ ಮಾಡುತ್ತಿದ್ದ ನಮಗೆ, 'ಪೆಡಲಿಗೆ ಕಾಲುಕೊಟ್ಟು' ಎತ್ತರದ ಸೈಕಲ್ ಹತ್ತುವ ವಿದ್ಯೆ ಇನ್ನೂ ಕರಗತವಾಗಿರಲಿಲ್ಲ. ಆ ವಿದ್ಯೆಯು ನನ್ನ ಗುರುವಾದ ಕಲ್ಮಾಡಿ ರವಿಗೂ ಆ ತನಕ ಒಲಿದಿರಲಿಲ್ಲ. ಆತನು ನನಗೆ ಅದನ್ನು ಹೇಗೆ ಹೇಳಿಕೊಟ್ಟಾನು?

ಈ ರೀತಿ ಸಾಧಾರಣವಾಗಿ ಸೈಕಲ್ ಸವಾರಿ ಮಾಡಲು ಕಲಿತ ಮೇಲೆ, ನಾನು ರವಿಯನ್ನು ಈಜು ಕಲಿಯಲು ಆಹ್ವಾನಿಸಿದೆ. ಆದರೆ, ಅವನ ತಾಯಿ ಅವನಿಗೆ ಈಜು ಕಲಿಯಲು ಅನುಮತಿ ಕೊಡಲೇ ಇಲ್ಲ.

ಆತ ಊರಿನ ಪ್ರತಿಷ್ಠಿತ ಮನೆತನಗಳಲ್ಲಿ ಒಂದಾದ ಕಲ್ಮಾಡಿ ರಾಯರ ಮನೆತನದವನು. ನಾನು ಕೂಡಾ ಸಾಕಷ್ಟು ಪ್ರಸಿದ್ಧವಾದ ಪೆಜತ್ತಾಯರ ಮನೆತನದವನು. ನಾವುಗಳು ಯಾರ ಗಮನಕ್ಕೂ ಬರದಂತೆ ಊರಿನ ಮಧ್ಯೆ ಇರುವ ದೇವಸ್ಥಾನದ ಸರೋವರದಲ್ಲಿ ಈಜಲು ಉಡುಪಿಯಂತಹಾ ಊರಿನಲ್ಲಿ ಸಾಧ್ಯವೇ ಇರಲಿಲ್ಲ. ಶಾಲೆಗೆ ರಜೆ ಇರುವ ದಿನಗಳಲ್ಲಿ ನಾವು ಶ್ರೀಕೃಷ್ಣ ದೇವಸ್ಥಾನದ ಮಧ್ವ ಸರೋವರದಲ್ಲಿ ಈಜಾಡಲು ಹೋದರೆ, ನಮ್ಮ ನೆರೆಕೆರೆಯ ಯಾರಾದರೂ ಒಬ್ಬರು ನಮ್ಮನ್ನು ನೋಡಿ ನಮ್ಮ ಮನೆಯವರಿಗೆ ಈ ವಿಚಾರವನ್ನು ತಿಳಿಸಿಯೇ ತಿಳಿಸುತ್ತಿದ್ದರು. ನನಗೆ ಆಗಲೇ ಈಜು ಬರುತ್ತಿದ್ದುದರಿಂದ, ನನಗೆ ಮನೆಯಲ್ಲಿ ಯಾರೂ ಏನೂ ಹೇಳುತ್ತಿರಲಿಲ್ಲ. ಆದರೆ, ಇಂತಹಾ ಸಂಗತಿ ರವಿಯ ತಾಯಿಯ ಕಿವಿಗೆ ಬಿದ್ದರೆ, ಅವರು ಖಂಡಿತವಾಗಿ ಅವನನ್ನು ಸುಮ್ಮನೆ ಬಿಡುತ್ತಾ ಇರಲಿಲ್ಲ. ಅಂತೂ, ಅವನ ಈಜು ಕಲಿಯುವ ಆಸೆ ಕೈಗೂಡಲೇ ಇಲ್ಲ.

ಸ್ವಲ್ಪ ದಿನಗಳಲ್ಲೇ ನಾವು ನಮ್ಮ ಅಣ್ಣಂದಿರನ್ನು ಗೋಗರೆದು ಅವರುಗಳ ದೊಡ್ಡ ಸೈಜಿನ

ಸೈಕಲ್ ಹೊಡೆಯಲು ಶುರುಮಾಡಿದೆವು. ನನ್ನ ಅಣ್ಣ ನರಹರಿ ಮತ್ತು ರವಿಯ ಅಣ್ಣ ಶ್ರೀನಿವಾಸಣ್ಣ, ಇವರು ನಮಗೆ ಪ್ರತೀ ಸಾಯಂಕಾಲ ಅವರು ಹೈಸ್ಕೂಲಿನಿಂದ ಮನೆಗೆ ಮರಳಿದ ಮೇಲೆ, ಉದಾರ ಬುದ್ಧಿಯಿಂದ ಸೈಕಲ್ಲುಗಳನ್ನು ಕೊಡಹತ್ತಿದರು. ಆಗ ನಮ್ಮ ಸಂತೋಷಕ್ಕೆ ಪಾರವೇ ಇರುತ್ತಿರಲಿಲ್ಲ...!!

ಈ ದೊಡ್ಡ ಸೈಕಲ್ಲುಗಳನ್ನು ಸ್ವಶಕ್ತಿಯಿಂದ ಏರಿ ಸವಾರಿ ಮಾಡಲು ನಮಗಿಬ್ಬರಿಗೂ ಪೆಡಲ್ ಬ್ಯಾಲೆನ್ಸ್ ಬರುತ್ತಿರಲಿಲ್ಲ. ಅತೀ ಚಿಕ್ಕದಾದ ರಾಮಣ್ಣನ ಬಾಡಿಗೆಯ ಸೈಕಲ್ಲಿನಲ್ಲಿ ಪೆಡಲ್ ಬ್ಯಾಲೆನ್ಸ್ ಕಲಿಯುವುದು ನಮಗೆ ಸಾಧ್ಯವಾಗಿರಲಿಲ್ಲ. ನಮ್ಮ ರವಿಗೆ ದೊಡ್ಡ ಸೈಕಲ್‌ಗಳಲ್ಲಿ ಒಂದನ್ನು ಸವಾರಿ ಮಾಡಿ ತೋರಿಸಿ ಬಾಡಿಗೆಗೆ ಪಡೆಯುವ ಧೈರ್ಯ ಸುತಾರಾಂ ಇರಲಿಲ್ಲ. ಆದರೂ, ನಾವಿಬ್ಬರೂ ನಮ್ಮ ಅಣ್ಣಂದಿರ ದೊಡ್ಡ ಸೈಕಲ್ಲುಗಳನ್ನು ಏರುವ ಹಾಗೂ ಇಳಿಯುವ ಉಪಾಯವನ್ನು ಪೆಡಲ್ ಬ್ಯಾಲೆನ್ಸ್ ಬಳಸದೇ ನಿಭಾಯಿಸುತ್ತಿದ್ದೆವು. ಯಾವುದಾದರೂ ಮೋರಿ (ಕಲ್ವರ್ಟ್) ಅಥವಾ ಲೈಟುಕಂಬದ ಬದಿಯಲ್ಲಿ ಸೈಕಲ್ ನಿಲ್ಲಿಸಿ ಸೈಕಲ್ಲಿನ 'ಬಾರ್' ಮೇಲೆ ಭದ್ರವಾಗಿ ಕುಳಿತು, ತದನಂತರ ಪೆಡಲ್ ತುಳಿಯುತ್ತಾ ನಮ್ಮ ಸೈಕಲ್‌ಗಳನ್ನು ಮುಂದಕ್ಕೆ ಓಡಿಸುತ್ತಿದ್ದೆವು. ಸೈಕಲ್ ಸೀಟ್ ಮೇಲೆ ಏರಿ ಕೂರುವಷ್ಟು ನಾವು ಎತ್ತರವಾಗಿ ಬೆಳೆದಿರಲಿಲ್ಲ. ಸೈಕಲ್‌ಗಳ 'ಟೋಲ್' ಮೇಲೆ ಕುಳಿತೇ ಬಹಳ 'ಟ್ರಾಫಿಕ್' ಇಲ್ಲದ ಉಡುಪಿ ಪೇಟೆಯ ರಸ್ತೆಗಳಲ್ಲಿ ನಾವು ಸೈಕಲ್ ಸವಾರಿ ಮಾಡುತ್ತಿದ್ದೆವು. ಎಲ್ಲಾದರೂ ಇಳಿಯಬೇಕಾಗಿ ಬಂದರೆ ಹತ್ತಿರದ ಮೋರಿ ಅಥವಾ ಲೈಟುಕಂಬದ ಸಹಾಯ ಪಡೆದು ಸೈಕಲ್ಲಿನಿಂದ ಇಳಿಯುತ್ತಿದ್ದೆವು. ಇದೊಂದು ದೊಡ್ಡ 'ಹ್ಯಾಂಡಿಕ್ಯಾಪ್' ಆಗಿ ನಮಗೆ ಆಗ ತೋರಿಬರಲಿಲ್ಲ.

ನಾನು ಮತ್ತು ರವಿ ದಿನದಿನವೂ ಸ್ವಲ್ಪ ಸ್ವಲ್ಪ ಹೆಚ್ಚಿನ ದೂರಕ್ಕೆ ಸುತ್ತಾಡಿ ನಾವು ನಮ್ಮ ಸೈಕಲ್ ಸವಾರಿಯಲ್ಲಿನ ಆತ್ಮಸ್ಥೈರ್ಯ ಹೆಚ್ಚಿಸಿಕೊಳ್ಳುತ್ತಾ ಬಂದೆವು. ಉಡುಪಿಯ ಪೇಟೆಯಲ್ಲಿ ಲೈಟುಕಂಬ ಮತ್ತು ಮೋರಿಗಳು ಎಲ್ಲೆಲ್ಲೂ ಇದ್ದುವು. ಆದುದರಿಂದ, ನಾವುಗಳು ಸೈಕಲ್ ಹತ್ತಲು ಮತ್ತು ಇಳಿಯಲು ಉಪಯುಕ್ತವಾದ 'ಪೆಡಲ್ ಬ್ಯಾಲೆನ್ಸ್' ವಿಧಾನವನ್ನು ಕಲಿಯುವ ಆಲೋಚನೆಯನ್ನೇ ಮಾಡದೆ, ಪೇಟೆ ಸುತ್ತುವಷ್ಟು ಧೈರ್ಯ ತಂದುಕೊಂಡೆವು. ಇದೇ ರೀತಿಯಲ್ಲಿ ಹಲವು ತಿಂಗಳುಗಳ ಕಾಲ ಸಾಯಂಕಾಲ ಹೊತ್ತು ಸೈಕಲ್ ಸವಾರಿ ಮಾಡುತ್ತಾ ಕಳೆದೆವು. ಹೀಗಿರುವಾಗ, ಬಂತು ನೋಡಿ ಒಂದು ದಿನ ಗಂಡಾಂತರ...!!!

ನಮ್ಮ ಮನೆಗಳಿಂದ ಅರ್ಧ ಮೈಲು ದೂರದ ಸೈಂಟ್ ಸಿಸಿಲೀಸ್ ಕಾನ್ವೆಂಟಿನ ಹೈಸ್ಕೂಲು ವಿಭಾಗದ ಹುಡುಗಿಯರು ತಮ್ಮ ಹೈಸ್ಕೂಲಿನ 'ಸ್ಕೂಲ್‌ಡೇ' ಸಲುವಾಗಿ 'ತಾಲೀಮು' ಶುರುಮಾಡಿದ್ರು. ದಿನದ ತಾಲೀಮು ಮುಗಿದ ನಂತರ ಅದರಲ್ಲಿ ಭಾಗವಹಿಸಿದ ಹುಡುಗಿಯರೆಲ್ಲಾ ಸಾಯಂಕಾಲದ ಆರು ಗಂಟೆಯ ಸಮಯಕ್ಕೆ ಒಮ್ಮೆಲೇ ಶಾಲೆಯಿಂದ ಹೊರಬಿದ್ದು ತಮ್ಮ ತಮ್ಮ ಮನೆಗಳಿಗೆ ಹೊರಡುತ್ತಿದ್ದರು.

ಸಾಮಾನ್ಯವಾಗಿ ನಮ್ಮ ರಾಜ್ಯದ ಹೈಸ್ಕೂಲುಗಳಲ್ಲಿ ಓದುವ ಹುಡುಗಿಯರಿಗೆ ಒಂದು ಪ್ರಿಯವಾದ 'ಯೂನಿವರ್ಸಲ್ ಚಾಳಿ' ಇದೆ. ಈ ಚಾಳಿಯು ಈ ದಿನಗಳಲ್ಲೂ ಚಾಲ್ತಿಯಲ್ಲಿ

ಇರುವುದು ನಿಮಗೆ ಕಂಡು ಬಂದರೆ ಅಚ್ಚರಿ ಪಡಬೇಡಿ. ಇದಕ್ಕೆ ಕಾರಣ ನಿಚ್ಚಳವಾಗೇ ಇದೆ. "ಅಂದಿನ ಕಿಶೋರಿಯರೇ ಇಂದಿನ ಮಾತೆಯರು...!" ತಾಯಂದಿರ ಈ ಚಾಳಿ ರಕ್ತಗತವಾಗಿ ಮಗಳಂದಿರಿಗೆ ಹರಿದು ಬರುವುದು ಸಹಜವಲ್ಲವೇ? ಈ ಚಾಳಿ ಏನೆಂದರೆ, ನಾಲ್ಕಾರು ಮಂದಿ ಹೈಸ್ಕೂಲ್ ಹುಡುಗಿಯರು ಮಾತನಾಡಿಕೊಳ್ಳುತ್ತಾ, ಈ ಲೋಕವನ್ನೇ ಮರೆತು ತಮ್ಮ ಹರಟೆಯಲ್ಲೇ ತಲ್ಲೀನರಾಗಿ, ಮಾರ್ಗದ ಅಗಲಕ್ಕೆ ಗೋಡೆ ಕಟ್ಟುವ ರೀತಿಯಲ್ಲಿ (ಅಂದರೆ Extended Lineನಲ್ಲಿ) ನಡೆಯುವುದು. ಈ ರೀತಿ ಹರಟುತ್ತಾ ಸಾಗುವಾಗ ಅವರಿಗೆ ಮಾರ್ಗದಲ್ಲಿ ಬರುವ ವಾಹನಗಳ ಪರಿವೆಯೇ ಇರುವುದಿಲ್ಲ!

ಆ ದಿನ ಸಂಜೆ ನಾನು ಮತ್ತು ರವಿ, ನಮ್ಮ ನಮ್ಮ ಅಣ್ಣಂದಿರ ಸೈಕಲ್ಲುಗಳನ್ನು ಏರಿ ಸ್ವಲ್ಪ 'ಸ್ಪೀಡ್' ಆಗಿಯೇ ಕಾನ್ವೆಂಟ್‌ರೋಡಿನ ಇಳಿಜಾರಿನಲ್ಲಿ ಬರುತ್ತಿದ್ದೆವು. ಆಗ ತಾನೇ ಮಾರ್ಗದಲ್ಲಿ ಎಸ್.ಎಸ್.ಎಲ್.ಸಿ. ಕ್ಲಾಸಿನ ಹುಡುಗಿಯರ ಒಂದು ತಂಡ ತಮ್ಮ 'ಸ್ಕೂಲ್ ಡೇ' ಕಾರ್ಯಕ್ರಮಗಳ ರಿಹರ್ಸಲ್ ಮುಗಿಸಿ ಮನೆಗೆ ಹೊರಟಿತ್ತು. ಅವರು ಮಾರ್ಗದಲ್ಲಿ ಅವರವರ ಮಧ್ಯೆ ಆರು ಇಂಚಿನ 'ಗ್ಯಾಪ್' ಕೂಡಾ ಬಿಡದೆ ಒತ್ತೊತ್ತಾಗಿ ನಡೆಯುತ್ತಿದ್ದರು. ಮಾತುಗಳ ನಡುವೆ ಅವರಿಗೆ ನಮ್ಮ ಸೈಕಲ್ಲುಗಳ 'ಬಡಪಾಯಿ ಬೆಲ್'ಗಳ ಸದ್ದು ಕೇಳಿಸಲೇ ಇಲ್ಲ.

ನಾನು ಮತ್ತು ರವಿ, 'ಅಯ್ಯೋ! ಅಯ್ಯೋ!! ಏಳಿ, ಏಳಿ!!.... ಬಾಜೂ, ಬಾಜೂ!" ಎಂದೇನೋ ಜೋರಾಗಿ ಅರಚಿಕೊಂಡೆವು. ಆದರೆ, ಅದಾವುದೂ ಅವರಿಗೆ ನಾಟಿದಂತೆ ಕಾಣಲಿಲ್ಲ. ನಾವು ಪೂರ್ತಿಯಾಗಿ ಬ್ರೇಕ್ ಹಾಕಿದರೆ, ನಾವಿಬ್ಬರೂ ಎತ್ತರವಾದ ಸೈಕಲ್ಲುಗಳ ಮೇಲಿಂದ ಟಾರ್ ರಸ್ತೆಯ ಮೇಲೆ ಬಿದ್ದು ಪೆಟ್ಟು ಮಾಡಿಕೊಳ್ಳುತ್ತೇವೆ! ನಮಗೆ ಸೈಕಲ್‌ಗಳಿಂದ ಇಳಿಯಲು ಗೊತ್ತಿಲ್ಲ! ಮುಂದೆ ಹೋದರೆ ಸೈಕಲ್ಲುಗಳು ಆ ಹುಡುಗಿಯರಿಗೆ 'ಡ್ಯಾಶ್' ಹೊಡೆಯುತ್ತವೆ. ಅಷ್ಟರಲ್ಲಿ, ರವಿ "ಹೋ..." ಎಂದು ಅರಚುತ್ತಾ ಒಬ್ಬಳು ಹುಡುಗಿಗೆ 'ಡ್ಯಾಶ್' ಹೊಡೆದೇಬಿಟ್ಟ! ಕೆಳಗೆ ಬೀಳುವಾಗ ಪೆಟ್ಟಾಗದಂತೆ ಹ್ಯಾಂಡಲ್ ಬಾರಿನ ಮೇಲಿದ್ದ ಕೈಗಳನ್ನು ಬಿಟ್ಟು ಆತನ ಎಡಪಕ್ಕದಲ್ಲಿ ನಡೆಯುತ್ತಿದ್ದ ಹುಡುಗಿಯ ಹೆಗಲ ಮೇಲೆ ಭಾರಹಾಕಿ ನೆಲಕ್ಕೆ ಮುಗ್ಗರಿಸಿದ! ಆತನ ಬೆನ್ನಿಗೇ ನಾನು ಕೂಡಾ ಅವನಂತೆಯೇ ಇನ್ನೊಬ್ಬಾಕೆಗೆ ಡ್ಯಾಷ್ ಹೊಡೆದು, ನನ್ನ ಬಲಪಕ್ಕಕ್ಕೆ ನಡೆಯುತ್ತಾ ಇದ್ದಾಕೆಯ ಮೇಲೆ ಭಾರ ಹಾಕಿ ಮುಗ್ಗರಿಸಿದೆ. ನಮ್ಮ ಸೈಕಲ್ಲುಗಳು ಧರಾಶಾಯಿಗಳಾದುವು.

ಇದ್ದಕ್ಕಿದ್ದಂತೆಯೆ ತಮ್ಮ ಮೇಲೆ ಎರಗಿದ ನಮ್ಮನ್ನು ಕಂಡು ಆ ಹುಡುಗಿಯರಿಗೂ ಗಾಬರಿ ಆಯಿತು. ಅವರಿಗೆ ನಮಗೆ ಎರಡು ಬಿಗಿಯುವಷ್ಟು ಸಿಟ್ಟು ಬಂದರೂ, ನಮ್ಮ ವಾಮನಾವತಾರ ಕಂಡು, ನಾವು ಅವರನ್ನು ಛೇಡಿಸುವ ಪೈಕಿಯ ದೊಡ್ಡ ಹುಡುಗರಲ್ಲ ಎಂದು ಮನವರಿಕೆ ಮಾಡಿಕೊಂಡರು. ಆದರೂ, ಬೈಗಳ ಸುರಿಮಳೆಯೇ ನಮ್ಮ ಮೇಲೆ ಆಯಿತು. 'ಮಾನಗೆಟ್ಟ ಹುಡುಗರು, ನೀತಿಗೆಟ್ಟ ಹುಡುಗರು... ಮರ್ಯಾದೆಯಿಲ್ಲದ ಹುಡುಗರು..." ಎಂದು ಏನೇನೊ ಬೈಗಳುಗಳನ್ನು ತಮ್ಮ ಇಂಪಾದ ಕಂಠಗಳಿಂದ ನಮ್ಮ ಮೇಲೆ ಸುರಿಸಿದರು. ಸಧ್ಯಕ್ಕೆ, ನಮಗೆ ಅವರು ಪೆಟ್ಟು ಕೊಡಲಿಲ್ಲ...!!

ನಾವು "ಬದುಕಿದೆಯಾ ಬಡ ಜೀವವೇ...!" ಎಂದುಕೊಳ್ಳುತ್ತಾ, ಕೆಳಗೆ ಬಿದ್ದಿದ್ದ ನಮ್ಮ ಸೈಕಲ್ಲುಗಳನ್ನು ಎತ್ತಿ ಜೋರಾಗಿ ನೂಕಿಕೊಂಡು ಓಡುತ್ತಾ ಸೈಕಲ್ ಹತ್ತಲು ಪ್ರಯತ್ನಿಸಿದೆವು. ಆಗ ಒಂದು ಪವಾಡವೇ ನಡೆಯಿತು, ನಮ್ಮ ಪಾಲಿಗೆ.

"ಏನಾಶ್ಚರ್ಯ! ಕೆಲವೇ ಸೆಕೆಂಡುಗಳಲ್ಲಿ ನಾನು ಮತ್ತು ರವಿ ನಮ್ಮ ನಮ್ಮ ಸೈಕಲ್ಲುಗಳನ್ನು ಹೇಗೋ ಏರಿಬಿಟ್ಟು ಅವರಿಂದ ದೂರಕ್ಕೆ ಶರವೇಗದಲ್ಲಿ ದೌಡಾಯಿಸುತ್ತಿದ್ದೆವು...!!!" ಅದುವರೆಗೆ ನಮಗೆ ಒಲಿಯದ "ಪೆಡಲ್ ಮೇಲೆ ಕಾಲಿಟ್ಟು ಸೈಕಲ್ ಏರುವ ವಿದ್ಯೆ" ಆ ಪ್ರಾಣಾಂತಿಕ ಕ್ಷಣದಲ್ಲಿ ನಮಗಿಬ್ಬರಿಗೂ ಒಲಿದಿತ್ತು.

ಆ ಕೋಪಗೊಂಡ ಲಲನಾಮಣಿಯರ ತಂಡದಿಂದ ಬಹಳ ದೂರ ಸಾಗಿದ ಮೇಲೆ ನಾವಿಬ್ಬರೂ "ಲೈಟುಕಂಬ ಅಥವಾ ಮೋರಿ ಇಲ್ಲದೆ ಅದು ಹೇಗೆ ಸೈಕಲ್ ಏರಿದೆವು?" ಎಂದು ಆಶ್ಚರ್ಯಪಟ್ಟೆವು. ಬಹಳ ದೂರ ಸಾಗಿ ಅಲ್ಲಿ ಸಿಕ್ಕಿದ ಒಂದು ಮೋರಿಯ ಸಹಾಯದಿಂದ ಸೈಕಲ್ಲುಗಳಿಂದ ಕೆಳಗೆ ಇಳಿದೆವು. ಈಗ ಇನ್ನೊಮ್ಮೆ ಪ್ರಯತ್ನಿಸೋಣ ಎಂದು ಎಡಕಾಲನ್ನು ಪೆಡಲ್ ಮೇಲೆ ಇರಿಸಿ ಸೈಕಲ್ ಏರಲು ಪ್ರಯತ್ನ ಮಾಡುತ್ತಾ ಸ್ವಲ್ಪ ತಡವರಿಸಿದರೂ ಸಫಲರಾದೆವು. ಮರುದಿನ ನಾವಾಗಿಯೇ ಸೈಕಲ್‌ನಿಂದ ಇಳಿಯುವ ವಿದ್ಯೆಯನ್ನು ಕೂಡಾ ಕಲಿತುಬಿಟ್ಟೆವು.

ಹೀಗೆ, ನಮಗೇ ಆಶ್ಚರ್ಯಕರವಾದ ರೀತಿಯಲ್ಲಿ ಸೈಕಲ್ ಹತ್ತುವ ಮತ್ತು ಇಳಿಯುವ ವಿದ್ಯೆಯು ನಮಗೆ ಕರಗತವಾಯಿತು. ಸೈಕಲ್ ಏರುವ ವಿದ್ಯೆಯನ್ನು ನಮಗೆ ಕರುಣಿಸಿದ ಆ ಹೈಸ್ಕೂಲ್ ಹುಡುಗಿಯರ ಗುಂಪಿಗೆ ನಾನು ಮತ್ತು ರವಿ ಇಂದಿಗೂ ಚಿರ ಋಣಿಗಳಾಗಿದ್ದೇವೆ.

★★★

ನೋಟ್: ನನ್ನ ಸ್ನೇಹಿತ ಕಲ್ಮಾಡಿ ರವಿ ಇಂದು ಒಬ್ಬ ಜನಪ್ರಿಯ ಡಾಕ್ಟರಾಗಿ ದಕ್ಷಿಣ ಕನ್ನಡದ ಉಚ್ಚಿಲ ಎಂಬ ಊರಿನಲ್ಲಿ ನೆಲೆಸಿದ್ದಾನೆ.

ಚಪ್ಪಾಳೆ

ಒಂದು ಮರಿ ಸೊಳ್ಳೆಗೆ ಪ್ರಥಮ ಬಾರಿಗೆ ಹಾರಲು ಅವಕಾಶ ದೊರೆಯಿತು. ಅದರ ಅಪ್ಪ ಅದರ ಬೆನ್ನು ತಟ್ಟಿ ಕಳಿಸಿಕೊಟ್ಟಿತು. ತನ್ನ ಪ್ರಥಮ ಹಾರಾಟ ಯಶಸ್ವಿಯಾಗಿ ಮುಗಿಸಿ ವಾಪಸ್ ಬಂದ ಮರಿ ಸೊಳ್ಳೆಯನ್ನು ಅಪ್ಪ "ಏನು ಮರಿ ಏನೆನ್ನಿಸಿತು?" ಎಂದು ಕೇಳಿತು.

"ಓ! ಗ್ರೇಟ್! ನನ್ನ ಹಾರಾಟ ನೋಡಿ ಎಲ್ಲರೂ ಚಪ್ಪಾಳೆ ತಟ್ಟುತ್ತಿದ್ದರು" ಎಂದು ಮರಿ ಉತ್ಸುಕತೆಯಿಂದ ಹೇಳಿತು.

ಹರುಳಿ ಕಟ್ಟು...

ಐ ಓನ್ಲಿ ಕನ್ನಡ .....!

- ಎಚ್. ಗೋಪಾಲಕೃಷ್ಣ

ನಾನು ಕಾಲೇಜಿಗೆ ಹೋಗುತ್ತಿದ್ದ ಕಾಲ. ಸರ್ಕಾರೀ ಕಾಲೇಜಿನಲ್ಲಿ ನನ್ನ ವ್ಯಾಸಂಗ. ಸರ್ಕಾರೀ ಕಾಲೇಜಾಗಿದ್ದರಿಂದ ತಳ ಮಧ್ಯಮ ವರ್ಗದ ವಿದ್ಯಾರ್ಥಿಗಳೇ ಹೆಚ್ಚು, ಅದರಲ್ಲೂ ಬಡವರಲ್ಲಿ ಕಡು ಬಡವರು ಎಂದು ಹೇಳಬಹುದಾದವರು ಇಡೀ ಕ್ಲಾಸಿನ ತುಂಬ ತುಂಬಿದ್ದರು. ಅದಕ್ಕಿಂತಲೂ ಹೆಚ್ಚಾಗಿ ಶೇ 90 ರಷ್ಟು ವಿದ್ಯಾರ್ಥಿಗಳು ಮೂರು ನಾಲ್ಕನೇ ಸಲ ಪಿಯೂಸಿ ಓದಿ ಪಾಸು ಮಾಡಿಬಂದವರು.

ತರಗತಿಯಲ್ಲಿನ ಪಾಠ ಅರ್ಥ ಮಾಡಿಕೊಳ್ಳಬೇಕು ಎನ್ನುವ ಆಸಕ್ತಿಯೂ ಹೆಚ್ಚಿನವರಿಗೆ ಇರಲಿಲ್ಲ. ಕಾಲೇಜು ಲೈಫನ್ನ ಎಂಜಾಯ್ ಮಾಡಬೇಕು ಅಂದುಕೊಂಡೇ ಅವರು ಕಾಲೇಜಿಗೆ ಬಂದಿದ್ದಾರೇನೋ ಅನಿಸುತ್ತಿತ್ತು. ಈ ಮಧ್ಯೆ ಅನಿವಾರ್ಯವಾಗಿ ಓದಲೇಬೇಕಾದ ನಮ್ಮಂಥವರ ಒಂದು ಗುಂಪು. ಯಾವುದೇ ತರಲೆ ತಾಪತ್ರಯಗಳಿಂದ ದೂರ ಇದ್ದು ಕ್ಲಾಸಿನಲ್ಲಿ ಕೂತು ತಲೆಗೆ ಹೋದದ್ದಷ್ಟನ್ನು ಹೋಗಿಸಿಕೊಂಡು ಅರ್ಥವಾಗದ್ದನ್ನು ಯಾರಲ್ಲಿ ಕೇಳುವುದು ಎಂದು ಪಾಡು ಪಡುತ್ತಿದ್ದೆವು. ಮಿಕ್ಕ ವಿದ್ಯಾರ್ಥಿಗಳಿಗೆ ಇದ್ದ ಚಾಲಾಕಿತನ ನಮ್ಮಲ್ಲಿ ಇಲ್ಲವೇ ಇಲ್ಲ. ಅದರಿಂದ ಗುಂಪಿನಿಂದ ದೂರ ಉಳಿದು ನಮ್ಮ ಥರಹದವರೇ ಆದ ಕೆಲವು ಸಂಗಡಿಗರ ಸಂಗಡ ಪಾಠ ಪ್ರವಚನದ ಬಗ್ಗೆ ನಮ್ಮ ಮಾತುಕತೆ ನಡೆಸುತ್ತಿದ್ದೆವು.

ಸರ್ಕಾರೀ ಕಾಲೇಜು ಆಗಿದ್ದರಿಂದಲೋ ಏನೋ ಯಾರೂ ಯಾರಿಗೂ ಕೇರೇ ಮಾಡುತ್ತಿರಲಿಲ್ಲ. ಕ್ಲಾಸಿಗೆ ಮೇಷ್ಟರುಗಳು ಬಂದಾಗಲೂ ಅಷ್ಟೇ ಬೋರ್ಡಿನ ಕಡೆ ತಿರುಗಿ ಅವರು ಬರೆಯಲು ಶುರುಮಾಡಿದರೆ ಅದು ನಿಲ್ಲುತ್ತಿದುದು ಪೀರಿಯಡ್ ಆಯಿತು ಎಂದು ಘಂಟೆ ಬಾರಿಸಿದಾಗಲೇ. ಕೆಲವು ಮೇಷ್ಟರಂತೂ ಅವರ ಕಾಲದ ನೋಟ್ಸುಗಳನ್ನೇ ಇಟ್ಟುಕೊಂಡು ಅದನ್ನೇ ಪ್ರತೀ ವರ್ಷವೂ ಬರೆಸಿ ನೋಟ್ಸು ನೀಡುವ ಪರಿಪಾಠವನ್ನೂ ರೂಢಿಸಿಕೊಂಡಿದ್ದರು.

ಸರ್ಕಾರೀ ಕಾಲೇಜು ಅಂದರೆ ಆಗ ಬರೀ ಮೆರಿಟ್ ಮೇಷ್ಟರುಗಳೇ ಇದ್ದದ್ದು. ಎಂ.ಎಸ್ಸಿ ಮಾಡಿ ಅದರಲ್ಲಿ ರ್‍ಯಾಂಕು ತಗೊಂಡವರು, ಪಿಎಚ್.ಡಿ. ಮಾಡಿದವರು, ಹೊರದೇಶಗಳಲ್ಲಿ ಓದಿ ಡಿಗ್ರೀಗಳನ್ನು ಪಡೆದುಬಂದವರು... ಹೀಗೆ ಇಡೀ ವಿಶ್ವವಿದ್ಯಾಲಯ ಎಜುಕೇಷನಲ್ ಕ್ರೀಮಿನಿಂದ ತುಂಬಿತ್ತು. ಅವರಿಗೆ ಡಿಮ್ಯಾಂಡೋ ಡಿಮ್ಯಾಂಡು. ಒಂದು ಗಂಟೆ ಸಮಯ ಸಿಕ್ಕಿದರೆ ಸಾಕು ಸ್ಕೂಟರು ಏರಿಕೊಂಡು ಅಲ್ಲೆಲ್ಲೋ ಖಾಸಗಿ ಪಾಠ ಮುಗಿಸಿ ಬಂದುಬಿಡುತ್ತಿದ್ದರು. ಪಾಠಗಳನ್ನು ತುಂಬಾ ಚೆನ್ನಾಗಿ ಮಾಡುತ್ತಾರೆ ಎಂಬ ಹೆಸರನ್ನು ಖಾಸಗಿ ಪಾಠ ಮಾಡುತ್ತಿದ್ದವರ ಹತ್ತಿರ ತೆಗೆದುಕೊಂಡಿದ್ದರು. ಆದರೆ ಅದೇ ಪಾಠಗಳನ್ನು ಅವರುಗಳು ನಮ್ಮ ಕ್ಲಾಸಿನಲ್ಲಿ ಮಾಡಬೇಕಾದರೆ ನಮ್ಮ ತಲೆಮೇಲೆ ಪಾಠಗಳು ಹಾರಿಹೋಗುತ್ತಿದ್ದವೇ ಹೊರತು ತಲೆಯೊಳಗೆ ಒಂದು ಚೂರೂ ಸೇರುತ್ತಿರಲೇ ಇಲ್ಲ. ಮತ್ತೊಂದು ದುರದೃಷ್ಟದ

ಸಂಗತಿ ಎಂದರೆ ಖಾಸಗಿಯಾಗಿ ಪಾಠಗಳನ್ನು ಹೇಳಿಸಿಕೊಳ್ಳುವ ಚೈತನ್ಯ ನಮ್ಮಲ್ಲಿ ಸುಮಾರು ಜನರಿಗೆ ಇಲ್ಲದೇ ಇದ್ದದ್ದು!

ಸುಮಾರು ದಿವಸ ಪಾಠ ಅರ್ಥವಾಗದೇ ನಾವು ದಡ್ಡರು ನಾವು ದಡ್ಡರು ಅನ್ನೋ ಭಾವನೆ ಮನಸಿನಲ್ಲಿ ಬೇರೂರಲು ಶುರುವಾಗಿತ್ತು. ಆಗಲೇ ಸುಮಾರು ಜನ ಅಧ್ಯಾಪಕರೂ ಗುರುತಾಗಿದ್ದರು. ತರಗತಿಯಲ್ಲಿ ಫಿಸಿಕ್ಸ್ ಪಾಠ ನಡೀತಿದೆ. ಮೇಷ್ಟರು ಹಿಂದಿನ ದಿವಸ ಮಾಡಿದ್ದ ಪಾಠದ ತುಣುಕನ್ನು ಮುಂದುವರಿಸುತ್ತಾ ಉದಾಹರಣೆ ನೀಡುತ್ತಿದ್ದಾರೆ. ಪಾಠದ ಮಧ್ಯೆ ಯಾಕೋ ನಮ್ಮಗಳ ಮುಖ ನೋಡಿದರು. ನಮ್ಮ ಮುಖಗಳಲ್ಲಿ ಎದ್ದು ತೋರುತ್ತಿದ್ದ ಪೆದ್ದುತನ ಅವರಿಗೆ ಗೊತ್ತಾಯಿತು ಅಂತ ತೋರುತ್ತೆ. ಚಾಕ್‌ಪೀಸ್ ಅನ್ನ ಟೇಬಲ್ಲಿನ ಮೇಲೆ ಇಟ್ಟರು.

ಮೊದಲನೇ ಬೆಂಚಿನಲ್ಲಿ ಕೂತಿದ್ದವನ್ನ ಡು ಫಾಲೋಡ್ ವಾಟ್ ಐ ಸೆಡ್? ಅಂತ ಕೇಳಿದರು. ಹುಡುಗ ಪೆಚ್ಚು ಪೆಚ್ಚಾಗಿ ನಗ್ತು..... ಇಲ್ಲಾ ಸಾರ್ ಅಂದಿತು.

ವೈ ಯು ಹಾವ್ ನಾಟ್ ಫಾಲೋಡ್?

ಹುಡುಗ ಮತ್ತೆ ಪೆಚ್ಚು ನಗೆ ನಕ್ಕ. ಐ ಓನ್ಲಿ ಕನ್ನಡ ಸಾ... ಅಂದ!

ನಮ್ಮದೂ ಅದೇ ಪರಿಸ್ಥಿತಿ - ಐ ಓನ್ಲಿ ಕನ್ನಡ! ಇಂಗ್ಲಿಷಿನಲ್ಲಿ ಹೇಳುವುದು ತಲೆ ಒಳಗೆ ಹೋಗುತ್ತಿರಲಿಲ್ಲ.

ಮೇಷ್ಟರು ಕುರ್ಚಿಮೇಲೆ ಕೂತರು.

ನೌ ಟೆಲ್ ಮಿ ಹೌ ಮೆನಿ ಆಫ್ ಯು ಆರ್ ಅಂಡರ್‌ಸ್ಟ್ಯಾಂಡಿಂಗ್ ದಿ ಲೆಸನ್ಸ್?

ಮುಂದುಗಡೆ ಬೆಂಚಿನ ಮೂರು ಹುಡುಗರು ಕೈ ಎತ್ತಿದವು.

ವಾಟ್ ಅಬೌಟ್ ದಿ ರೆಸ್ಟ್? ನನ್ ಆಫ್ ಯು ಆರ್ ಅಂಡರ್ ಸ್ಟ್ಯಾಂಡಿಂಗ್ ದಿ ಲೆಸನ್ಸ್?

ಗೊಂಬೆಗಳ ಥರಹ ತಲೆ ಆಡಿಸಿದೆವು.

ಪೆದ್ದ ನನ್ನ ಮಕ್ಕಳಾ ಮೊದಲೇ ಹೇಳೋದಿಕ್ಕೆ ಏನಾಗಿತ್ತೋ ಅಂತ ಮೇಷ್ಟರು ಅಚ್ಚ ಕನ್ನಡದಲ್ಲಿ ಬೈದರು. ಯಾವುದು ಅರ್ಥ ಆಗಿಲ್ಲ ಹೇಳಿ ಅಂತ ಕೇಳಿದರು.

ಮೇಷ್ಟರು ಕನ್ನಡದಲ್ಲಿ ಮಾತಾಡಿದ್ದನ್ನ ಕೇಳೇ ಖುಷಿಯಾಗಿದ್ದವರು ನಾವು. ಟೆಕ್ಸ್ಟ್‌ಬುಕ್ ತೆಗೆದು ಮೊದಲನೇ ಪೇಜಿನಿಂದ ತೋರಿಸಿಕೊಂಡು ಹೋದೆವು. ಎಲ್ಲಾ ಕೂತು ಕೇಳಿಸಿಕೊಂಡ ಮೇಷ್ಟರು ಮಿಕ್ಕ ಸಬ್ಜೆಕ್ಟುಗಳು ಹೋಗ್ತಾ ಇವೆಯಾ ತಲೇಗೇ? ಅಂದರು.

ಇಲ್ಲಾ ಸಾರ್ ಅದೂ ನಿಮ್ಮದರ ತರಹವೇ... ಅಂತ ಬಾಯಿ ಬಿಟ್ಟೆವು.

ಯಾವ ಸಬ್ಜೆಕ್ಟು ಯಾರು ತಗೋತಾರೆ ಟೈಮ್ ಟೇಬಲ್ ಐತಾ ಕೊಡಿ ಇಲ್ಲಿ ಅಂತ ತೆಗೆದುಕೊಂಡರು. ಬೆಲ್ ಹೊಡೀತು. ಮೇಷ್ಟರೂ ಹೊರಟರು, ನಾವೂ ಹೊರಟೆವು. ಪ್ರಸಂಗ ಇಲ್ಲೀಗೇ ನಿಂತುಬಿಡಬಹುದಾಗಿತ್ತು. ಆದರೆ ಈ ಮೇಷ್ಟರು ಮಿಕ್ಕವರ ಹತ್ತಿರ ನಮಗೆ ಪಾಠಗಳು ಅರ್ಥವಾಗದೇ ಇರೋದು ವಿವರಿಸಿದರಂತೆ. ಅದಕ್ಕೆ ಕಾರಣಗಳನ್ನೂ ಹುಡುಕಿದರಂತೆ-ಇಂಗ್ಲಿಷ್ ಅಷ್ಟು ಚೆನ್ನಾಗಿ ಬರದೇ ಇರುವುದು, ಹಿಂದಿನ ತರಗತಿಯಲ್ಲಿ

ನಾಲ್ಕು ಐದು ಸಲ ಕೂತು ಬಂದಿರೋದೂ, ಹೇಳಿಕೊಡುವ ಪಾಠ ಅರ್ಥವಾಗುವ ಹಾಗೆ ಯೋಜಿಸದೇ ಇರುವುದು..... ಹೀಗೆ.

ನಂತರ ಪಾಠ ಮಾಡಲು ಬಂದವರೆಲ್ಲರೂ ಕನ್ನಡದಲ್ಲಿ ಒಮ್ಮೆ ನಂತರ ಇಂಗ್ಲಿಷಿನಲ್ಲಿ ಒಮ್ಮೆ ಹೇಳಿ ಅರ್ಥವಾಯಿತಾ ಅಂತ ಕೇಳುತ್ತಿದ್ದರು. ಅದಕ್ಕಿಂತಲೂ ಹೆಚ್ಚಿನದು ಅಂದರೆ ಕಾಲೇಜಿನ ಸಮಯ ಮೀರಿದ ನಂತರವೂ ಅವರ ಕೋಣೆಗಳಲ್ಲಿ ಕೂತು ಆಸಕ್ತ ವಿದ್ಯಾರ್ಥಿಗಳಿಗೆ ಪಾಠ ತಲೆಗೆ ಹತ್ತುವವರೆಗೂ ಅವರೂ ಶ್ರಮವಹಿಸುತ್ತಿದ್ದರು.

ಈ ನೆನಪು ಯಾಕೆ ಬಂತು ಅಂದರೆ ಎಂಜಿನೀರಿಂಗ್ ಕಾಲೇಜಿನ ಹುಡುಗ ಒಂದು ಪಾಠ ಅರ್ಥವಾಗಲಿಲ್ಲ ಅಂತಲೋ ತಲೆಗೆ ಬುದ್ಧಿ ಹತ್ತುತ್ತಿಲ್ಲ ಅಂತಲೋ ಸೂಯಿಸೈಡ್ ಮಾಡಿಕೊಂಡನಂತೆ. ಪೇಪರಿನಲ್ಲಿ ಈ ಸುದ್ದಿ ಓದಿದಾಗ ನನಗೆ ನೆನಪಿಗೆ ಬಂದದ್ದು ನಮ್ಮ ರಾಮಾಚಾರಿ ಮೇಷ್ಟರು-ಈಗ ಅವರು ಎಲ್ಲಿದ್ದಾರೋ ತಿಳೀದು ಆದರೆ ಅವರು ವಹಿಸಿದ ಶ್ರಮ ಈಗಲೂ ಹಸಿರು ನೆನಪು ನಮ್ಮಲ್ಲಿ ಕೆಲವರಿಗೆ.

✵

ಹಾಸ್ಯೋತ್ಸವ – 2010

ಹಾಸ್ಯೋತ್ಸವ ಹೇಗಿರಬೇಕು? ಪ್ರೇಕ್ಷಕರಾಗಿ ನೀವೇ ಹೇಳಿ.

ಪ್ರತಿ ವರ್ಷ ನಮ್ಮ ಕಾರ್ಯಕ್ರಮ ನೋಡುವ ನೀವು ಅದರಲ್ಲಿ ಕಂಡುಬಂದಿರುವ ಕೊರತೆಗಳ ಬಗ್ಗೆ ಯೋಚಿಸಿರಲಿಕ್ಕೆ ಸಾಕು. ಹಾಗೆಯೇ, ಕಾರ್ಯಕ್ರಮವನ್ನು ಉತ್ತಮ ಪಡಿಸಲು ನಿಮ್ಮಲ್ಲಿ ಅನೇಕ ಸಲಹೆಗಳೂ ಇರಬಹುದು. ಅವುಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಲು ಈ ಮೂಲಕ ನಿಮಗೆ ಅವಕಾಶ ನೀಡುತ್ತಿದ್ದೇವೆ. ಬನ್ನಿ ಹಾಸ್ಯೋತ್ಸವ ಹೇಗಿದ್ದರೆ ಚೆನ್ನ? ಇತರ ಯಾವ ಕಾರ್ಯಕ್ರಮಗಳನ್ನು ನಾವು ಪ್ರಸ್ತುತಪಡಿಸಿದರೆ ಅದು ಇನ್ನಷ್ಟು ರಂಜನೀಯವಾಗುತ್ತದೆ? ಈಗ ನಡೆಯುತ್ತಿರುವ ಕಾರ್ಯಕ್ರಮಗಳ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ನೀವು ಕೊಡುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಈ ವರ್ಷದ ಹಾಸ್ಯೋತ್ಸವವನ್ನು ರೂಪಿಸಲು ಪ್ರಯತ್ನಿಸುತ್ತೇವೆ.

ನಿಮ್ಮ ಅನಿಸಿಕೆಗಳನ್ನು ನಮಗೆ ಬರೆದು ತಿಳಿಸಿ.

ಸಂಪಾದಕರು, ಅಪರಂಜಿ

36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರ, ಬೆಂಗಳೂರು – 3

ಪುಸ್ತಕ ಪರಿಚಯ



ನೂರು ವರ್ಷಗಳಲ್ಲಿನ ಕನ್ನಡದ ಪ್ರಮುಖ ಲೇಖಕರೆಲ್ಲ ಈ ಕೃತಿಯಲ್ಲಿ ಒಟ್ಟಾಗಿದ್ದು, ಸಾಮಾನ್ಯ ಓದುಗರು ಆ ಲೇಖಕರನ್ನು ಪರಿಚಯಿಸಿಕೊಳ್ಳಲು ಈ ಸಂಕಲನ ಪ್ರವೇಶಿಕೆಯಂತಿದೆ. ಇಲ್ಲಿನ ಬರಹಗಳು ಮೂಲ ಬರಹಗಳತ್ತ ಹಾಗೂ ಆ ಬರಹಗಳ ಲೇಖಕರ ಉಳಿದ ಕೃತಿಗಳತ್ತ ಓದುಗರನ್ನು ಪ್ರೇರೇಪಿಸುವ ಗುಣವನ್ನೂ ಹೊಂದಿವೆ.

ಪು: 354 ; ಬೆ: ರೂ. 195

ಪ್ರ: ಪ್ರಿಸಮ್ಸ್ ಬುಕ್ಸ್, 1865, 32ನೇ ಕ್ರಾಸ್,
10ನೇ ಮೇನ್, ಬನಶಂಕರಿ 2ನೇ ಹಂತ,
ಬೆಂಗಳೂರು - 560 070.

ನಗೆವಿಲಾಸದ ಉತ್ಖನನ

-ರಚಹ

ಲೇಖಕರು, ಪತ್ರಕರ್ತ, ಸಾಹಿತಿ ಮತ್ತು ವಿಮರ್ಶಕರು

ಬಿ.ಎಸ್. ಚಂದ್ರಶೇಖರ್ ಸಂಪಾದಿಸಿರುವ ಶತಮಾನದ ನಗೆಬರಹಗಳು ತನ್ನ ಸ್ವರೂಪ ಹಾಗೂ ಗುಣಮಟ್ಟದಿಂದ ಗಮನಸೆಳೆಯುವ ಕೃತಿ. ಪುಸ್ತಕದ ಶೀರ್ಷಿಕೆಯಲ್ಲಿನ ಶತಮಾನ ಎನ್ನುವ ಪದವೇ, ಪುಸ್ತಕಕ್ಕೊಂದು ಚಾರಿತ್ರಿಕ ಆಯಾಮ ಇರುವುದನ್ನು ಸ್ಪಷ್ಟಪಡಿಸುತ್ತದೆ. ಈ ಚರಿತ್ರೆ ನಗೆಗೆ ಸಂಬಂಧಿಸಿದ್ದು. ಪತ್ರಿಕೆಗಳಲ್ಲಿ ಪ್ರಕಟವಾಗುವ ವಿನೋದದ ತುಣುಕುಗಳು ಹಾಗೂ ಅವುಗಳ ಪುಸ್ತಕ ರೂಪದ ಸಂಕಲನಗಳು ಮತ್ತು ಹನಿಗವಿತೆಗಳ ತಿಣುಕಾಟಗಳೇ ಹಾಸ್ಯ ಸಾಹಿತ್ಯ ಎನ್ನುವಂತಾಗಿರುವಾಗ, ಚಂದ್ರಶೇಖರ್ ಹಾಸ್ಯದ ಚರಿತ್ರೆಯನ್ನು ಕನ್ನಡ ಸಾಹಿತ್ಯದ ಉದ್ದಕ್ಕೂ ವಿಸ್ತರಿಸುತ್ತಾರೆ. ಈ ಪುಸ್ತಕದ ಹಿನ್ನೆಲೆಯಲ್ಲಿ ಚಂದ್ರಶೇಖರ್ ಅವರು ನಡೆಸಿರುವ ನಗೆಯ ಹುಡುಕಾಟದ ಮಾನದಂಡಗಳನ್ನು ಅನುಸರಿಸಿದರೆ, ಕನ್ನಡ ಸಾಹಿತ್ಯದ ಆರಂಭ ಕಾಲದಿಂದಲೂ ನಗೆಯ ಇರುವನ್ನು ಕಾಣಬಹುದಾಗಿದೆ.

ಕನ್ನಡದಲ್ಲಿ ಹಾಸ್ಯ ಸಾಹಿತ್ಯ ಎಂದರೆ ತಕ್ಷಣ ನೆನಪಿಗೆ ಬರುವುದು - ಕೈಲಾಸಂ, ಕಸ್ತೂರಿ, ಬೀಚಿ, ಕೇಫರಂಥ ಕೆಲವೇ ಕೆಲವು ಹೆಸರುಗಳು. ಆದರೆ ಕನ್ನಡದ ಪ್ರಮುಖ ಸಾಹಿತಿಗಳೆಂದು ಸಾಹಿತ್ಯಲೋಕ ಪರಿಗಣಿಸಿರುವ ಲೇಖಕರ ಬರಹಗಳಲ್ಲೂ - ಗಂಭೀರ ಕೃತಿಗಳಲ್ಲೂ - ಹದಿನಾರಾಣೆ ಹಾಸ್ಯ ಹಾಸುಹೊಕ್ಕಾಗಿರುವುದನ್ನು ಚಂದ್ರಶೇಖರ್ ಹೆಕ್ಕಿದ್ದಾರೆ. ಹಾಗಾಗಿಯೇ ಶತಮಾನದ ನಗೆಬರಹಗಳು ಎನ್ನುವುದು ನಗೆಯ ಉತ್ಖನನ. ಈ ಉತ್ಖನನದ ಸಂಪುಟದಲ್ಲಿ ನಾ.ಕಸ್ತೂರಿ, ರಾ.ಶಿ., ಟಿ.ಪಿ.ಕೈಲಾಸಂ, ಬೀಚಿ, ಕೇಫ, ಲಾಂಗೋಲಾಚಾರ್ಯ, ಸುನಂದಮ್ಮ, ಸುನಂದಾ ಬೆಳಗಾಂವಕರ, ಶ್ರೀನಿವಾಸ ವೈದ್ಯರಂಥ ನಗೆ ಪರಿಣಿತರ ಬರಹಗಳು

ಸಹಜವಾಗಿಯೇ ಸ್ಥಾನ ಪಡೆದಿವೆ. ಇವುಗಳೊಂದಿಗೆ ಎಂ.ಎಸ್. ಪುಟ್ಟಣ್ಣ, ಪಂಜೆ ಮಂಗೇಶರಾವ್, ಡಿ.ವಿ. ಗುಂಡಪ್ಪ, ಜಿ.ಪಿ. ರಾಜರತ್ನಂ, ಶಿವರಾಮ ಕಾರಂತ, ಕುವೆಂಪು, ದ.ರಾ. ಬೇಂದ್ರೆ, ಎ.ಎನ್. ಮೂರ್ತಿರಾವ್, ತೀ.ನಂ. ಶ್ರೀಕಂಠಯ್ಯ, ದೇವನೂರು ಮಹಾದೇವ, ಪೂರ್ಣಚಂದ್ರ ತೇಜಸ್ವಿ, ಕುಂ. ವೀರಭದ್ರಪ್ಪನವರಂಥ ಕನ್ನಡ ಸಾರಸ್ವತ ಲೋಕದ ಘಟಾನುಘಟಿಗಳ ಕೃತಿಗಳಿಂದ ಹೆಕ್ಕಿದ ನಗೆಯ ಭಾಗಗಳನ್ನು ಸೇರಿಸಿರುವುದು 'ಶತಮಾನದ ನಗೆಬರಹಗಳು ಪುಸ್ತಕದ ರುಚಿಯನ್ನು ಹೆಚ್ಚಿಸಿದೆ. ಈ ಸಂಪುಟ, ಕನ್ನಡ ಸಾಹಿತ್ಯದ ಕಳೆದೊಂದು ಶತಮಾನದ ವಿನೋದ ವಿಲಾಸ.

ಹಾಸ್ಯದ ಹುಡುಕಾಟದಲ್ಲಿ ಸಂಪಾದಕರು ಪದ್ಯಗದ್ಯ ಎನ್ನುವ ಭೇದವೆಣಿಸಿಲ್ಲ. ಕಾದಂಬರಿಯ ಭಾಗವಿರಬಹುದು, ಕವಿತೆ – ಚುಟುಕು ಕವಿತೆ, ಲಲಿತ ಪ್ರಬಂಧ, ಕಥೆ – ಹೀಗೆ, ನಗೆ ಎಲ್ಲಿಹುದೋ ಅದೆಲ್ಲವನ್ನೂ ಅವರು ಒಟ್ಟಾಗಿಸಿದ್ದಾರೆ. ಕನ್ನಡದಲ್ಲಿ ನಗೆ ಸಾಹಿತ್ಯದ ಬೆಳವಣಿಗೆ ಕುರಿತು ವಿಸ್ತಾರವಾದ, ಅಧ್ಯಯನಶೀಲವಾದ ಪ್ರಸ್ತಾವನೆಯನ್ನೂ ಬರೆದಿದ್ದಾರೆ.

ಶತಮಾನದ ನಗೆಬರಹಗಳು ಕೃತಿ ಒಂದು ರೀತಿಯಲ್ಲಿ ಸಂಕ್ಷಿಪ್ತ ಸಾಹಿತ್ಯ ಚರಿತ್ರೆಯೂ ಹೌದು. ನೂರು ವರ್ಷಗಳಲ್ಲಿನ ಕನ್ನಡದ ಪ್ರಮುಖ ಲೇಖಕರೆಲ್ಲ ಈ ಕೃತಿಯಲ್ಲಿ ಒಟ್ಟಾಗಿದ್ದು ಸಾಮಾನ್ಯ ಓದುಗರು ಆ ಲೇಖಕರನ್ನು ಪರಿಚಯಿಸಿಕೊಳ್ಳಲು ಈ ಸಂಕಲನ ಪ್ರವೇಶಿಕೆಯಂತಿದೆ. ಇಲ್ಲಿನ ಬರಹಗಳು ಮೂಲ ಬರಹಗಳತ್ತ ಹಾಗೂ ಆ ಬರಹಗಳ ಲೇಖಕರ ಉಳಿದ ಕೃತಿಗಳತ್ತ ಓದುಗರನ್ನು ಪ್ರೇರೇಪಿಸುವ ಗುಣವನ್ನೂ ಹೊಂದಿವೆ.

ನಗೆನಡೆದು ಬಂದ ಹಾದಿಯನ್ನು ಗುರ್ತಿಸುವ ಸ್ವರೂಪದ ಶತಮಾನದ ನಗೆಬರಹಗಳು ಕೃತಿ ನಗೆಯ ಬಗೆಬಗೆಗಳನ್ನೂ ಎತ್ತಿ ತೋರಿಸುವಂತಿದೆ. ವ್ಯಂಗ್ಯ, ವಿಡಂಬನೆ, ಅನ್ಯೋಕ್ತಿ, ಭಾಷಾ ಚಮತ್ಕಾರ, ನವಿರುತನ, ನಾಟಕೀಯತೆ ಸೇರಿದಂತೆ ಹಾಸ್ಯ ಸಾಹಿತ್ಯದಲ್ಲಿನ ವಿವಿಧ ಪ್ರಯೋಗಗಳು, ಪ್ರಕಾರಗಳು ಇಲ್ಲಿವೆ. ಭಾಷಾ ಶೈಲಿಯ ದೃಷ್ಟಿಯಿಂದಲೂ ಪುಸ್ತಕದ ಓದು ಕುತೂಹಲಕರ. ಸಂಪಾದಕರ ಅಧ್ಯಯನಶೀಲತೆ ಹಾಗೂ ಅಭಿರುಚಿ ಎರಡೂ ದೃಷ್ಟಿಯಿಂದಲೂ ಶತಮಾನದ ನಗೆಬರಹಗಳ ಸಂಗ್ರಹ ವಿಶೇಷ ಎನ್ನಿಸುತ್ತದೆ.

ವಿವರಣೆ

ಗಂಡ ನೊಣ ಹೊಡೆಯುತ್ತಿದ್ದ – ಅಕ್ಷರಶಃ. ಹೆಂಡತಿ ವಿಚಾರಿಸಿದಳು.

"ವ್ಹಾ! ಐದು ನೊಣಗಳು ಸಿಕ್ಕಿದವು. ಮೂರು ಗಂಡು ಎರಡು ಹೆಣ್ಣು" ಎಂದು ಗಂಡ ಕರಾರುವಾಕ್ಕಾಗಿ ಉತ್ತರಿಸಿದ.

"ಅಷ್ಟು ಕರೆಕ್ಟಾಗಿ ಹೇಗೆ ಹೇಳ್ತೀರಿ?" ಎಂದು ಹೆಂಡತಿ ಪಾಟೀ ಸವಾಲು ಮಾಡಿದಳು.

"ಮೂರು ಬೀರ್ ಬಾಟಲಿ ಮೇಲೆ ಕುಳಿತಿದ್ದವು"

"ಉಳಿದವು?" ಹೆಂಡತಿ ಕುತೂಹಲದಿಂದ ಕೇಳಿದಳು.

"ಟೆಲಿಫೋನ್ ಮೇಲೆ" ಎಂದು ಗಂಡ ವಿವರಣೆ ನೀಡಿದ.

ನೂರಾಯಣ - ನಾರಾಯಣ

- ಎನ್. ಪ್ರಕಾಶ್

ವಾರವಾರವೂ ಆಡುತ್ತಿದ್ದ ನಮ್ಮ ರಾಮಾಯಣ ನಾಟಕದಿಂದ ನನ್ನ ಕುಸ್ತಿಯ ಆಸೆ ಜಾಸ್ತಿಯಾಗುತ್ತಲೇ ಹೋಯಿತು. ಒಂದು ಕುಸ್ತಿಗಾಗಿ ಇಡೀ ವಾರ ಕಾಯಬೇಕಲ್ಲ ಎಂದು ಅಸಹನೆ ಉಂಟಾಗುತ್ತಿತ್ತು. ಇದೇ ವೇಳೆಗೆ ಶಾಲೆಯಲ್ಲಿ ವಿನಾಕಾರಣ ಕುಸ್ತಿ ಆಡುವವರು ಹುಟ್ಟಿಕೊಳ್ಳತೊಡಗಿದ್ದರು. ಅವರದೇನಿದ್ದರೂ ಜಗಳವಲ್ಲ, ಕುಸ್ತಿ. ಇಂತಹ ಕುಸ್ತಿ ಆಸಕ್ತರಲ್ಲಿ ನನಗೆ ಹಿಡಿಸಿದವನೆಂದರೆ ನೂರ್. ಇವನೂ ನನ್ನೊಂದಿಗೆ ಐದನೆಯ ಕ್ಲಾಸಿನಲ್ಲಿ ಓದುತ್ತಿದ್ದ. ನನ್ನಷ್ಟೆ ಎತ್ತರ. ಆದರೆ ನನಗಿಂತ ಸ್ವಲ್ಪ ದಪ್ಪ, ಸ್ವಲ್ಪ ಕಪ್ಪು. ಬೋಳು ಹೊಡೆಸಿದ ತಲೆ, ಉಬ್ಬು ಹಣೆ ಕಣ್ಣೂ ಸ್ವಲ್ಪ ಮುಂದೆಯೇ ಬಂದಿತ್ತು. ಆದರೆ ಆ ಕಣ್ಣುಗಳಲ್ಲಿ ಕುತೂಹಲ ಕುಣಿಯುತ್ತಿತ್ತು. ನಕ್ಕರೆ ಮಾತ್ರ ನಿಜಕ್ಕೂ ಬೆಳದಿಂಗಳೇ ಹರಡಿದಂತಾಗುತ್ತಿತ್ತು. ಅವನು ಯಾವಾಗಲೂ, ಬೈಸಿಕೊಂಡಾಗಲೂ ನಗುತ್ತಲೇ ಇರುತ್ತಿದ್ದ. ಈ ಮಹಾ ಆಕರ್ಷಕ ನೂರ್ ಒಂದು ದಿನ ಮಧ್ಯಾಹ್ನ ಒಂದೂವರೆಗೆ ಊಟಕ್ಕೆ ಬಿಟ್ಟಾಗ ಒಂದು ಅಮೋಘ ಸಲಹೆ ಕೊಟ್ಟ. 'ಇವತ್ತು ಮಧ್ಯಾಹ್ನ ಮನೆಗೆ ಊಟಕ್ಕೆ ಹೋಗುವುದು ಬೇಡ, ಇಲ್ಲೇ ಇದ್ದು ಕುಸ್ತಿ ಆಡೋಣ' ಅಂತ. ಅದು ನನಗೂ ಬಹಳ ಹಿಡಿಸಿತು. ಒಂದೂವರೆಗೆ, ಎಲ್ಲ ಹುಡುಗರೂ ಊಟಕ್ಕೆ ಹೋದಮೇಲೆ ನಾವಿಬ್ಬರೂ ಕ್ಲಾಸ್ ರೂಮಿನಲ್ಲೆ ಕುಸ್ತಿ ಪ್ರಾರಂಭಿಸಿದೆವು. ಎರಡು ಸಾಲು ಬೆಂಚುಗಳ ನಡುವೆ ಇದ್ದ ಓಡಾಡುವ ದಾರಿಯೇ ನಮ್ಮ ಅಖಾಡವಾಯಿತು. ಅದರಲ್ಲೇ ಹಿಂದೆ ಮುಂದೆ ಓಡಾಡುತ್ತ, ಬೆಂಚುಗಳನ್ನು ಒದೆಯುತ್ತ ಆ ದಾರಿಯಲ್ಲೇ ಒಬ್ಬರ ಮೇಲೊಬ್ಬರು ಬಿದ್ದು ಹೊರಳಾಡಿದೆವು. ಎಂಥ ರಮಣೀಯ ಕುಸ್ತಿ!

ಇದು ಸುಖಾಂತ್ಯ ಕಾಣಬಹುದಿತ್ತು. ಆದರೆ ಅಷ್ಟರಲ್ಲೇ ಒಂದು ಅನಿರೀಕ್ಷಿತ ಘಟನೆ ನಡೆಯಿತು. ನೂರ್ ಚಡ್ಡಿ ಅಸ್ತವ್ಯಸ್ತಗೊಂಡಿದ್ದರಿಂದ ಅವನು ಎದ್ದುನಿಂತು ಅದನ್ನು ಸರಿಮಾಡಿಕೊಳ್ಳುತ್ತಲೇ ಒಂದು ಕೈ ನನತ್ತ ಬೀಸಿದ. ಒಮ್ಮೆ ಶುರುವಾದ ಕುಸ್ತಿ ಯಾವುದೇ ಕಾರಣಕ್ಕೂ ನಡುವೆ ನಿಲ್ಲುವಂತಿರಲಿಲ್ಲ ಎಂಬ ನಿಯಮವಿತ್ತಲ್ಲ. ಅದಕ್ಕಾಗಿ ಒಂದು ಕೈಯಿಂದಲೇ ನೂರ್ ಕುಸ್ತಿ ಆಡಿದ. ನಾನು ಅದೇ ವೇಳೆ ಹಿಂದಿನಿಂದ ಅವನ ಮೇಲೇರಿ ಹೋಗಿ ಅವನ ತಲೆಗೆ ಬಲವಾಗಿ ಮೊಟಕಿದೆ. ಅವನ ತಲೆಯೋ, ಅದೆಂಥ ತಲೆಯೋ! ಅಷ್ಟಕ್ಕೆ ಹೋಗಿ ಬೆಂಚಿನ ತುದಿಗೆ ಬಲವಾಗಿ ಬಡಿಯಿತು. ಎಡಗಡೆ ಹಣೆಗೆ ಪೆಟ್ಟು ಬಿದ್ದು ಗಾಯವಾಗಿ ರಕ್ತ ಸುರಿಯತೊಡಗಿತು. ವಸ್ತ್ರಾಪಹರಣದ ಸಮಯದಲ್ಲಿ ದ್ರೌಪದಿ ತನ್ನ ಸೀರೆಯ ಸೆರಗನ್ನು ಬಲವಾಗಿ ಹಿಡಿದುಕೊಂಡಂತೆ, ಕಿತ್ತುಹೋಗಿದ್ದ ಚಡ್ಡಿಯನ್ನು ಒಂದು ಕೈಯಲ್ಲಿ ಹಿಡಿದುಕೊಂಡೇ ನೂರ್, ಇಡೀ ಗುಬ್ಬಿ ಊರಿಗೇ ಕೇಳಿಸುವಂತೆ ಜೋರಾಗಿ ಬೊಬ್ಬೆ ಹಾಕಿ ಅಳತೊಡಗಿದ. ನಾನು ಮೇಜಿನ ಮೇಲೆ ಬಿದ್ದಿದ್ದ ಸೀಮೆಸುಣ್ಣದ ಪುಡಿಯನ್ನು ಅವನ ಹಣೆಗೆ ಹಾಕಿ ಒತ್ತಿ ಹಿಡಿದೆ. ಆದರೂ ರಕ್ತ ನಿಲ್ಲಲಿಲ್ಲ.

ಅಷ್ಟರಲ್ಲಿ ಇವನ ಬೊಬ್ಬೆ ಕೇಳಿ ಹುಡುಗರು ರೂಮಿನೊಳಗೆ ಓಡಿಬಂದರು - ಮೇಷ್ಟ್ರು ಕೂಡಾ ಓಡುತ್ತಲೇ ಬಂದರು. ಆ ಕೂಡಲೇ ಒಬ್ಬ ಹುಡುಗನನ್ನು ಜೊತೆ ಮಾಡಿ ನೂರ್‌ನನ್ನು ಮನೆಗೆ ಕಳಿಸಿದರು. ಅಷ್ಟರಲ್ಲಿ, ನನ್ನ ಗ್ರಹಚಾರಕ್ಕೆ, ನೂರನ ತಂದೆ ಯಾವುದೋ ಕೆಲಸದ ಮೇಲೆ ಶಾಲೆಯ ಮುಂದೆ ಹೋಗುತ್ತಿದ್ದವರು, ಇನ್ನೂ ಅಳುತ್ತಲೇ ಇದ್ದ ನೂರ್ ಜೊತೆಗೆ

ಕ್ಲಾಸಿಗೇ ಬಂದರು. ಅಷ್ಟು ಹೊತ್ತಿಗಾಗಲೇ ಮೇಷ್ಟ್ರು ನನ್ನಿಂದ ಎಲ್ಲ ವಿಷಯಗಳನ್ನೂ ತಿಳಿದುಕೊಂಡಿದ್ದರು. ನಾನೂ ಕೂಡ ಎಷ್ಟು ಹೆದರಿಕೆಯಾಗಿದ್ದರೂ, ಏನೊಂದೂ ವಿಷಯವನ್ನು ಮುಚ್ಚಿಡದೆ ಮೇಷ್ಟರಿಗೆ ವಿವರವಾಗಿ ವರದಿ ಸಲ್ಲಿಸಿದ್ದೆ. ಅವರು ನೂರ್‌ನ ತಂದೆಗೆ ಏನೋ ಸಮಾಧಾನ ಹೇಳಿ ಕಳಿಸಿ, ಅವರೊಂದಿಗೇ ಹೊರಗೆ ಹೋಗಿ ಸ್ವಲ್ಪ ಹೊತ್ತಿನ ನಂತರ ಕ್ಲಾಸ್‌ಗೆ ಹಿಂದಿರುಗಿದರು. 'ಹೆಡ್‌ಮೇಷ್ಟ್ರು ಕರೀತಾರೆ ಹೋಗು' ಅಂತ ನನ್ನನ್ನು ಹೊರಗೆ ಕಳಿಸಿದರು ಅಷ್ಟು ಹೊತ್ತಿಗಾಗಲೇ ನಾನು ಹೆದರಿ ಪೂರ್ತಿ ಬೆವರಿ ಹೋಗಿದ್ದೆ. ಇಲ್ಲಿ ಒಂದು ವಿಷಯ ಹೇಳಬೇಕು. ನನ್ನ ತಂದೆಯೇ ಆ ಶಾಲೆಯ ಹೆಡ್‌ಮೇಷ್ಟ್ರು. ನಾನು ಹೆದರುತ್ತಲೇ ಅವರೆದುರು ಹೋಗಿ ನಿಂತೆ. ಯಾವುದೋ ಕೆಲಸದ ಗಡಿಬಿಡಿಯಲ್ಲಿದ್ದ ಅವರು ನನ್ನ ಮುಖ ನೋಡಿ 'ನೀನೇಕೆ ಬಂದೆ, ಹೋಗು' ಅಂತ ವಾಪಸ್ ಕಳಿಸಿದರು. ಅವರು ಕರೆಸಿದ್ದನ್ನಾಗಲೀ, ನಡೆದ ಘಟನೆಯನ್ನಾಗಲೀ, ಹೆದರಿದ್ದ ನಾನು ಅವರಿಗೆ ಹೇಳಲಿಲ್ಲ. 'ಬದುಕಿದೆಯಾ, ಬಡಜೀವವೆ' ಅಂತ ಸರಸರನೆ ಕ್ಲಾಸಿಗೆ ವಾಪಸ್ ಬಂದು ಕುಳಿತುಕೊಂಡೆ. ಮೇಷ್ಟ್ರು ಕೂಡಾ ಸುಮ್ಮನೆ ನನ್ನ ಕಡೆ ನೋಡಿ ಏನೂ ಮಾತಾಡದೆ, ಸುಮ್ಮನೆ ಪಾಠ ಮುಂದುವರಿಸಿದರು.

ಆದರೆ ನಾನು ನೂರನ ಹಣೆ ಒಡೆದ ಘಟನೆ, ರೋಮಾಂಚಕ ಘಟನೆಗಳೇನೂ ನಡೆಯದ, ಹೆಸರಿಗೆ ತಕ್ಕ ಹಾಗೆ ಗುಬ್ಬಿಯಂತೆ ಸಣ್ಣದಿದ್ದ ಆ ಊರಿನ ಏಕೈಕ ಬಾಲಕರ ಮಾಧ್ಯಮಿಕ ಶಾಲೆಯ ತುಂಬಾ ಹಾಗೂ ಶಾಲೆಯ ಆವರಣ ದಾಟಿ ಹೊರಗೂ ಕೂಡಾ, ಆ ಸಂಜೆಯ ವೇಳೆಗೆ ದಟ್ಟವಾಗಿ ಹರಡಿತು. ಸಂಜೆ ಶಾಲೆ ಮುಗಿದ ಮೇಲೆ ಆಟಕ್ಕೆ ನಿಲ್ಲದೆ ಹೆದರಿಕೆಯಿಂದ ಅವಸರದಿಂದ ಮನೆಗೆ ಓಡಿ ಬಂದೆ. ಮನೆಯಲ್ಲೂ ಹೆಚ್ಚು ಮಾತಾಡಲಿಲ್ಲ. ಆದರೆ ನನ್ನ ಹಿಂದೆಯೇ ಬಂದ ನನ್ನ ಅಣ್ಣ, ಅದೇ ಶಾಲೆಯಲ್ಲಿ ಏಳನೆಯ ಕ್ಲಾಸಿನಲ್ಲಿ ಓದುತ್ತಿದ್ದವನು, ತನ್ನ ಸತ್ಯವಂತಿಕೆಯನ್ನು ಮೆರೆಸಲು ಅಮ್ಮನಿಗೆ ನನ್ನ ಈ ಕುಕೃತ್ಯದ ವರದಿ ಸಲ್ಲಿಸಿದ. ತುಂಟತನದ ಬಗ್ಗೆ ಅಸೂಯೆ ಇರುವ ಒಳ್ಳೆಯತನ ಇಂತಹ ಸದವಕಾಶ ಬಂದರೆ ಬಿಟ್ಟೀತೆ? ನೂರ್‌ನ ಹಣೆಯಿಂದ ಸುರಿದ ರಕ್ತಕ್ಕಿಂತ ಹೆಚ್ಚು ಹೆಚ್ಚು ಕೆಂಪಾದ ಭೀಭತ್ಸ ರಸವನ್ನೂ, ನೂರನ ಬಗ್ಗೆ ಕರುಣಾರಸವನ್ನೂ ಉಕ್ಕಿಸುವ ವರ್ಣನಾತ್ಮಕ ಕಥಾನಕವನ್ನು, ಅವನು ಅಮ್ಮನೆದುರು ಬಿತ್ತರಿಸಿದ. ನಾನು ಹೆದರಿಕೆಯಿಂದ ಮುದುಡಿ ಹೋಗಿದ್ದೆ. ವಿಷಾದದಿಂದ ಕುಗ್ಗಿ ಹೋಗಿದ್ದೆ. ಆದರೂ, ಆ ಗಳಿಗೆಯಲ್ಲೂ, ಭೀಭತ್ಸ, ಕರುಣಾರಸಗಳೇ ತುಂಬಿಕೊಂಡಿದ್ದ ಅಣ್ಣನ ಕಥಾನಕದಲ್ಲಿ, ನನ್ನ ಪರಾಕ್ರಮದ ವೀರರಸಕ್ಕೆ ಎಳ್ಳುಕಾಳು ಮುಳ್ಳು ಮೊನೆಯಷ್ಟೂ ತಾವಿಲ್ಲದೇ ಹೋಗಿದ್ದೇ ನನಗೆ ಅತೀವ ಬೇಸರವನ್ನು ತಂದಿತು. ನವರಸಗಳಲ್ಲಿ, ವೀರರಸ ಅಷ್ಟು ನಗಣ್ಯವೇ, ಲೆಕ್ಕಕ್ಕೆ ಬಾರದಿರುವುದೇ ಎಂಬ ಪ್ರಶ್ನೆಯೂ ನನ್ನಲ್ಲಿ ಹುಟ್ಟಿತು; ಅಮ್ಮನೂ ನನಗೆ ಒಂದೆರಡು ಉಪದೇಶದ ಮಾತು ಹೇಳಿದರು. ಅವರಿಗೆ ನನ್ನ ತಪ್ಪಿನ ಬಗ್ಗೆ ತುಂಬಾ ದುಃಖವಾಗಿತ್ತು. ಆದರೆ, ಅದಕ್ಕಿಂತ ಹೆಚ್ಚಾಗಿ ಅಪ್ಪ ಮನೆಗೆ ಬಂದ ಮೇಲೆ ಏನು ಮಾಡುತ್ತಾರೋ ಎಂಬ ಹೆದರಿಕೆಯೇ ಅವರ ಮನಸ್ಸನ್ನು ತುಂಬಿಕೊಂಡಿತ್ತು. ಏಕೆಂದರೆ ಅಪ್ಪ, ತಪ್ಪು ಕಂಡರೆ ರೌದ್ರಾವತಾರಿ, ಅನ್ಯಾಯ ಕಂಡರೆ ಅವರು ನರಸಿಂಹನೇ ಸರಿ. ನಾನು ಬೇಗ ಊಟಮಾಡಿ ಪಾಠವನ್ನು ಓದದೆ, ಮಹಡಿಯ ಮೇಲೆ ಮುಸುಕು ಹಾಕಿ ಮಲಗಿಬಿಟ್ಟೆ.

ರಾತ್ರಿ ಅಪ್ಪ ಮನೆಗೆ ಬಂದ ಮೇಲೆ ಊಟ ಮಾಡುತ್ತಾ ಕುಳಿತಾಗ ಅಮ್ಮನ ಎದುರಿಗೆ ಆ ದಿನ ಶಾಲೆಯಲ್ಲಿ ನಡೆದ ಘಟನೆಯ ಬಗ್ಗೆ ಹೇಳುತ್ತಿದ್ದರು. 'ಆ ದುಷ್ಟ ಹುಡುಗ ಯಾರು ಅಂತ ಗೊತ್ತಾಗಲಿಲ್ಲ, ಆ ಕ್ಲಾಸಿನ ಮೇಷ್ಟ್ರು ಕೂಡಾ ಅವನು ಯಾರು ಅಂತ ಹೇಳಲಿಲ್ಲ' ಅಂದರು. ಅಣ್ಣ ಅಲ್ಲಿಯೇ ಇದ್ದ. ಅವನ ಸತ್ಯವಂತಿಕೆ ಮತ್ತೆ ಹೆಡೆ ಎತ್ತಿ ನಿಂತಿತು. ಅವನಿಂದ ವಿಷಯ

ತಿಳಿದ ಕೂಡಲೇ ಅಪ್ಪ 'ಎಲ್ಲಿದ್ದಾನೆ. ಕರಿ ಆ ಅಯೋಗ್ಯನನ್ನು' ಅಂದರು. ಅವರ ಧ್ವನಿ ಮಹಡಿಯ ಮೇಲೆ ಮಲಗಿದ್ದ ನನಗೂ ಕೇಳಿಸಿತು. ನಾನು ಹೆದರುತ್ತಾ ಕೆಳಗೆ ಹೋದೆ. ಆ ನಂತರ ನಡೆದದ್ದೆಲ್ಲಾ ಒಂದು ಭೀಕರ, ಭೀಷಣ ತಾಡನ ಪರ್ವ. ಅವರಿಗೆ ಸಿಟ್ಟು ಎರಡು ಕಾರಣಗಳಿಗಾಗಿ. ಒಂದು ನಾನು ಮಾಡಿದ ತಪ್ಪಿಗಾಗಿ, ಇನ್ನೊಂದು ಅದಕ್ಕಿಂತ ಮುಖ್ಯವಾಗಿ ಕಾರಣವೆಂದರೆ, ಅವರೆದುರಿಗೆ ಹೋದರೂ ನಾನು ಮಾಡಿದ ಅಯೋಗ್ಯ ಕೆಲಸವನ್ನು ಹೇಳದೆ ಮುಚ್ಚಿಟ್ಟಿದ್ದಕ್ಕಾಗಿ. ಹೆಡ್‌ಮೇಷ್ಟ್ರ ಮಗನೇ ಈ ರೀತಿ ದುಂಡಾವರ್ತಿ ಮಾಡಿದರೆ ಹೆಡ್‌ಮೇಷ್ಟ್ರಿಗೆ ಬೆಲೆ ಇಲ್ಲದೆ ಹೋಗುತ್ತೆ, ಶಾಲೆಯಲ್ಲಿ ಶಿಸ್ತೇ ಇಲ್ಲದೆ ಹೋಗುತ್ತೆ ಅಂತ ಅವರಿಗೆ ಕೆಂಡಾಮಂಡಲ ಕೋಪ. ತಪ್ಪು ಮಾಡಿದ ಯಾರಿಗೇ ಆಗಲಿ, ಶಿಕ್ಷೆಯಾಗಲೇಬೇಕು, ಆದರೆ ಹೆಡ್‌ಮೇಷ್ಟ್ರ ಮಗನಿಗೆ ಹೆಚ್ಚು ಶಿಕ್ಷೆಯಾಗಬೇಕು ಎಂಬುದು ಅವರ ನಿಲುವು. ನನ್ನ ಕಣ್ಣೀರು ನನ್ನದೇ ಪಾದಗಳನ್ನು ತೋಯಿಸಿತ್ತು.

ಈ ಘಟನೆ ಮಾನಸಿಕವಾಗಿ ನನಗೊಂದು ಬಡ್ತಿ ಕೊಟ್ಟಿತು. ಅಂದಿನಿಂದ ನನ್ನ ತಪ್ಪಿಗೆ ಶಿಕ್ಷೆ ಕೊಟ್ಟುಕೊಳ್ಳುವ ಹೆಡ್‌ಮೇಷ್ಟ್ರ ಪದವಿಯನ್ನು ನಾನೇ ಪಡೆದೆ. ಆದರೆ ಆ ರಾತ್ರಿ ಅಳುತ್ತಲೇ ದೇವರನ್ನು ನಾನು ಕೇಳಿದ್ದು ಮಾತ್ರ 'ದೇವರೆ, ಯಾರಾದರೂ ಒಂದು ಕೇಳಿದರೆ, ನೀನು ನೂರು ದಯಪಾಲಿಸುತ್ತೀಯಾ ಅಂತ ಹೇಳ್ತಾರೆ. ಆದರೆ ನನ್ನ ಮಟ್ಟಿಗೆ ಏಟಿಗೂ ನೀನು ಅವನ್ನೇ ನಿಜ ಮಾಡಿದೆಯಲ್ಲಾ ತಂದೆ?' ಎಂದು. ಸ್ವಲ್ಪ ಹೊತ್ತಿನ ನಂತರ, ಇನ್ನೊಂದು ಯೋಚನೆ ಬಂತು. ನೂರನ ಹೆಸರು ನೂರ್ ಎಂದು ಇದ್ದುದಕ್ಕೇ ನಾನು ನೂರು ಹೊಡೆತಗಳನ್ನು ತಿಂದೆ. ಅವನ ಹೆಸರೇನಾದರೂ ಸಾವಿರ ಅಥವಾ ಲಕ್ಷ ಎಂದೇ ಇದ್ದಿದ್ದರೆ? ಅದರ ಭಯಂಕರ ಪರಿಣಾಮವನ್ನು ನಾನು ಊಹಿಸಿಕೊಳ್ಳಲೂ ಹೆದರಿದೆ. ದೇವರೇ ಅವನಿಗೆ ನೂರ್ ಎಂದು ಹೆಸರಿಟ್ಟು ನನ್ನನ್ನು ಬಚಾವು ಮಾಡಿದ ಎಂದು ದೇವರಿಗೆ ಕೃತಜ್ಞತೆ ಸಲ್ಲಿಸಿದೆ. ಈ ಕೃತಜ್ಞತೆಯನ್ನು ಸ್ವೀಕರಿಸಬೇಕಾದವರ ಪಟ್ಟಿ ದೇವರಿಂದ, ನೂರ, ನೂರನ ತಂದೆ ತಾಯಿಗಳು, ಕೊನೆಗೆ ಕ್ಲಾಸ್‌ನ ಅಟೆಂಡೆನ್ಸ್ ರಿಜಿಸ್ಟರ್‌ವರೆಗೂ ಬೆಳೆಯುತ್ತಲೇ ಹೋಯಿತು. ಅಷ್ಟರಲ್ಲಿ ನಿದ್ದೆ ಬಂತು.

'ತಪ್ಪು ಮಾಡಿದವನು ನಿಮ್ಮ ಮಗ ಸಾರ್' ಎಂದು ಹೇಳುವ ಧೈರ್ಯ ತೋರದ ನಮ್ಮ ಕ್ಲಾಸ್ ಟೀಚರ್‌ಗೂ ಮಾರನೆಯ ದಿನ ಬಹುಶಃ ಅಪ್ಪ ಉಪದೇಶ ಮಾಡಿರಬೇಕು. ಅವರು ಪಾಠ ಮಾಡುತ್ತಲೇ ನಡುವೆ ಒಮ್ಮೆ 'ತಪ್ಪು ಯಾರೇ ಮಾಡಿರಲಿ, ತಪ್ಪು ತಪ್ಪೇ ಅದನ್ನು ಹೇಳುವ ಧೈರ್ಯವನ್ನು ಬೆಳೆಸಿಕೊಳ್ಳಬೇಕು' ಎಂದು ಉಪದೇಶ ಮಾಡಿದರು. ಅವು ಅವರ ಒಳ್ಳೆಯ ಗುಣ. ಅದು ಕೂಡಾ ನನ್ನ ಮೇಲೆ ಪರಿಣಾಮ ಬೀರಿತು.

ಇದೆಲ್ಲ ಆದ ನಾಲ್ಕೈದು ದಿನಗಳಾದ ಮೇಲೆ ನೂರ್ ಮತ್ತೆ ಶಾಲೆಗೆ ಬರಲಾರಂಭಿಸಿದ. ಬಂದವನೇ ತನ್ನ ಹಣೆ ತೋರಿಸಿ 'ಗಾಯವೆಲ್ಲಾ ಪೋಯಿಯಾ' ಅಂದ. 'ಅವತ್ತು ಕುಸ್ತಿಗೆ ಜಾಗ ಸಾಕಾಗಲಿಲ್ಲ, ಅದಕ್ಕೆ ಹಣೆಗೆ ಪೆಟ್ಟಾಗಿದ್ದು. ಇವತ್ತು ಒಂದೂವರೆಗೆ ಬೆಂಚುಗಳನ್ನೆಲ್ಲಾ ಒಂದು ಬದಿ ಗೋಡೆಗೆ ಸರಿಸಿ ಇಡೋಣ. ಬೇಕಾದಷ್ಟು ಜಾಗ ಆಗುತ್ತೆ. ಚೆನ್ನಾಗಿ ಕುಸ್ತಿ ಆಡಬಹುದು ಬಾ.' ಅದೇ ಒಳ್ಳೆಯ ನಿಷ್ಕಪಟ ನಗೆ. ಕುಸ್ತಿಗಾಗಿ ಸ್ನೇಹವೋ, ಸ್ನೇಹಕ್ಕಾಗಿ ಕುಸ್ತಿಯೋ ಅಥವಾ ನೂರ್‌ನ ಸ್ನೇಹದ ಅಭಿವ್ಯಕ್ತಿಯೇ ಕುಸ್ತಿಯೋ ತಿಳಿಯದಾಯಿತು.

ಅಂತಹ ಮುಗ್ಧ ನಗೆಯ ಸರದಾರ ನೂರನನ್ನು ಮರೆಯುವುದು ಹೇಗೆ?

❋

Mailing Date
5th of every month
Mailed at: MBC Bangalore GPO

CPMG/KA/BGW-544/2009-2011
RNI-KAR-KAN / 2005/ 15457

Printed by: V.R. NATH for the Publisher KORAVANJI APARANJI TRUST. Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: RAVI GRAPHICS, 58/2, 2nd Main Road, Industrial Town, Rajajinagar, Bangalore - 560 010. PH : 4088 9999
Editor: M. SHIVAKUMAR